ಶ್ರೀ ಗೋವಿಂದ ಪಿ. ಒಡೆಯರಾಜ್.—ನಾವು ಸಹಕಾರವನ್ನು ಕೊಡದಿದ್ದರೆ ನೀವೇ ಈ ಬೇಡಿಕೆಗಳನ್ನು ಪಾಸ್ ಮಾಡಿಕೊಳ್ಳುವುದಕ್ಕೆ ಸಾಧ್ಯವೇ?

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಅಧ್ಯಕ್ಷರೆ, ಕೊನೆಗೆ ತಮ್ಮ ಅಭಿಪ್ರಾಯ ಏನು ಎಂಬುದನ್ನು ಹೇಳಬೇಕು.

ಶ್ರೀ ಜೆ.ಡಿ. ಸೋಮಪ್ಪ.—ಇವತ್ತು ಹೊಸ ಸರ್ಕಾರ ಬಂದಿದೆ. ಅನೇಕಜನ ಮಾನ್ಯ ಸದಸ್ಯರು ಹೊಸದಾಗಿ ಆರಿಸಿ ಬಂದಿದ್ದಾರೆ. ನಿಮ್ಮ ಕಾಲದಲ್ಲೇ ಗೌರಿ ಹಬ್ಬ ಬಂದಿರುವುದರಿಂದ ತಾವು ನಾಳೆ ರಜೆಯನ್ನು ಕೊಟ್ಟರೆ ನಿಮಗೆ ಒಳ್ಳೆಯದಾಗುತ್ತದೆ. ಆದ್ದರಿಂದ ದಯವಿಟ್ಟು ಸಭೆಯನ್ನು ಮುಂದೂಡಬೇಕೆಂದು ಕೇಳಿಕೊಳ್ಳುತ್ತೇನೆ.

(ಅಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಎಂ. ವೀರಪ್ಪ ಮೊಯ್ಲಿ.—ಸ್ವಾಮಿ, ಅಧ್ಯಕ್ಷರೆ, ತಾವೇ ಇದರ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕು.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೆ, ಗೌರಿ ಹಬ್ಬಕ್ಕೆ ರಜಾ ಕೊಡಬೇಕೆಂದು ಈ ಸದನ ಅಭಿಪ್ರಾಯ ಪಡುತ್ತಿದೆ. ಅದಕ್ಕೆ ನಾನು ಹೇಳಿದೆ, ಸದನದ ಮುಂದೆ ಅನೇಕ ಇಲಾಖೆಗಳ ಬೇಡಿಕೆಗಳಿವೆ ಅವುಗಳೆಲ್ಲಾ ಅಂಗೀಕಾರವಾಗಬೇಕಾಗಿದೆ, ಇದುವರೆಗೂ ಸಹಕಾರವನ್ನು ಕೊಟ್ಟಿರುವಂತೆಯೇ ಇದಕ್ಕೂ ಸಹಕಾರವನ್ನು ಕೊಡಬೇಕೆಂದು ಕೇಳಿಕೊಂಡಿದ್ದೇನೆ, ಅವರು ಸಹಕಾರವನ್ನು ಕೊಡುವುದಾಗಿ ಒಪ್ಪಿಕೊಳ್ಳುವುದಾದರೆ ನಾಳೆ ರಜೆಯನ್ನು ಕೊಡುವುದರಲ್ಲಿ ಏನೂ ತಪ್ಪಿಲ್ಲ.

ಶ್ರೀ ಜೆ.ಡಿ. ಸೋಮಪ್ಪ.—ಹೊಸ ಸರ್ಕಾರ ಬಂದಮೇಲೆ ಮೊದಲನೇ ಸಾರಿ ಗೌರಿ ಹಬ್ಬ ಬಂದಿದೆ. ನಾವು ರಾಜಕೀಯ ವ್ಯಕ್ತಿಗಳು ಎಲ್ಲಿ ಬೇಕಾದರೂ ಹಬ್ಬವನ್ನು ಮಾಡಿಕೊಳ್ಳುತ್ತೇವೆ. ಆದರೆ ಹೆಣ್ಣುಮಕ್ಕಳು ಇದ್ದಾರೆ. ಅವರು ಊರಿಗೆ ಹೋಗಬೇಕಾಗುತ್ತದೆ.

ಅಧ್ಯಕ್ಷರು.—ಹಬ್ಬ ಸರ್ಕಾರದ ಕಾರ್ಯಕ್ರಮಗಳನ್ನು ಕಾಯುವುದಿಲ್ಲ.

ಶ್ರೀ ಜೆ.ಡಿ. ಸೋಮಪ್ಪ.—ಹಬ್ಬಕ್ಕೆ ರಜ ಕೊಡಿ.

ಅಧ್ಯಕ್ಷರು.—ಸಭೆ ಮುಗಿಯುವವರೆಗೂ ತಾವು ಹೇಗೋ ಇಲ್ಲೇ ಇರುತ್ತೀರಿ. ಆಮೇಲೆ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳೋಣ. ಈಗ ಕಾರ್ಯಕಲಾಪಗಳು ನಡೆಯಲಿ.

FINANCIAL BUSINESS

ಶ್ರೀ ಕೆ.ಹೆಚ್. ರಂಗನಾಥ್ (ಹಿರಿಯೂರು).—ಮಾನ್ಯ ಅಧ್ಯಕ್ಷರೆ, ಇವತ್ತಿನದಿವಸ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಯನ್ನು ವಿರೋಧಿಸುವುದಕ್ಕೆ ನಾನು ನಿಂತಿದ್ದೇನೆ. ಸಹಕಾರಿ ಕ್ಷೇತ್ರವು ಬಹಳ ವ್ಯಾಪಕವಾಗಿ ಬೆಳೆದಿದೆ. ಇಂದಿನ ಸಹಕಾರಿ ಖಾತೆಯ ಸಚಿವರೂ ಕೂಡ ಈ ಕ್ಷೇತ್ರದಲ್ಲಿ ಕೆಲಸ ಮಾಡಿ ಅನುಭವವುಳ್ಳವರಾಗಿರುತ್ತಾರೆ. ಸಹಕಾರ ಸಂಘಗಳು ಸಮಾಜದ ವ್ಯವಸ್ಥೆಯನ್ನು ಬದಲಾವಣೆ ಮಾಡುವುದರಲ್ಲಿ ಒಂದು ನೀತಿಯನ್ನು ಹಾಕಿಕೊಂಡು ಒಂದು ಉತ್ತಮ ಕೆಲಸ ಮಾಡುತ್ತೇವೆಂದು ನನಗೆ ನಂಬಿಕೆ ಇದೆ. ನಾನು ಸಹಕಾರ ಖಾತೆಯಲ್ಲಿ ಕೆಲಸ ಮಾಡಿದವನಲ್ಲ. ಸಹಕಾರಿ ಖಾತೆಯ ಬಗ್ಗೆ ಕೊಟ್ಟಿರತಕ್ಕ ಪುಸ್ತಕದಲ್ಲಿ ಒಂದು ಮಾತನ್ನು ಏನು ಹೇಳಿದ್ದಾರೆಂದರೆ, ಯೋಜನಾಬದ್ಧ ದಿಸೆಯಲ್ಲಿ ಸಹಕಾರ ಸಂಸ್ಥೆಗಳು ಬಹಳ ಪ್ರಮುಖವಾದ ಪಾತ್ರವನ್ನು ವಹಿಸುವ ಚೈತನ್ಯದಾಯಕ ಶಕ್ತಿಯಾಗಿವೆ ಎಂದು ತಾವು ಹೇಳಿದ್ದೀರಿ. ಆದರೆ ಎಲ್ಲವನ್ನೂ ನಾನು ಬಿಡಿಸಿ ಬಿಡಿಸಿ ಹೇಳುವುದಕ್ಕೆ ಹೋಗುವುದಿಲ್ಲ. ಅದರೂ ಕೂಡ ಕೆಲವು ವಿಷಯಗಳನ್ನು ಹೇಳಬೇಕಾದುದು ಅನಿವಾರ್ಯವಾಗಿದೆ, ಸುಮಾರು ೨೨೮೨೪ ಸಹಕಾರ ಸಂಘಗಳು ನಮ್ಮ ರಾಜ್ಯದಲ್ಲಿ ಒಂದಲ್ಲೊಂದು ಕಾರ್ಯಗಳನ್ನು ಹಾಕಿಕೊಂಡು ನಾನಾ ಕ್ಷೇತ್ರದಲ್ಲಿ ಮಾಡುತ್ತಾ ಬರುತ್ತಿವೆ. ೩೫,೯೦೦ ವ್ಯವಸಾಯ ಕುಟುಂಬಗಳು ಸಹಕಾರ ಸಂಘಗಳ ಸದಸ್ಯತ್ವವನ್ನು ಒಪ್ಪಿಕೊಂಡು ನೂರಕ್ಕೆ ನೂರು ಹಳ್ಳಿಗಳು ಇದರ ವ್ಯಾಪ್ತಿಯಲ್ಲಿ ಬಂದಿವೆ ಎಂದು ಹೇಳಿದ್ದೀರಿ. ಮೇಲ್ನೋಟಕ್ಕೆ ಇದು ಬಹಳ ಚೆನ್ನಾಗಿ ಕಾಣುತ್ತದೆ

೧೦೦ಕ್ಕೆ ೧೦೦ ಹಳ್ಳಿಗಳು ಇದರ ವ್ಯಾಪ್ತಿಯೊಳಗೆ ಬಂದಿದೆ ಎಂದು ಹೇಳುವಾಗ, ಇದನ್ನೆಲ್ಲ ಮೇಲ್‌ನೋಟಕ್ಕೆ ನೋಡಿದಾಗ ಬಹಳ ಚೆನ್ನಾಗಿ ಕಾಣುತ್ತದೆಂದು ನಾನಾದರೂ ಭಾವಿಸುತ್ತಿದ್ದೇನೆ. ಮಾನ್ಯ ಮಂತ್ರಿಗಳು ಅವರು ಈ ಖಾತೆಯನ್ನು ವಹಿಸಿಕೊಂಡ ತಕ್ಷಣವೇ ಸಮಾಜದ ವ್ಯವಸ್ಥೆಯನ್ನು ಅದರ ದಿಕ್ಕನ್ನು ಬದಲಾಯಿಸುವುದರಲ್ಲಿ ಸಹಕಾರಿ ಕ್ಷೇತ್ರವನ್ನು ಸಾಧನೆಯಾಗಿ ಮಾಡಿಕೊಳ್ಳುತ್ತಾರೆ. ಅದರ ನೀತಿ ನಿರೂಪಣೆಯಾಗುತ್ತದೆ ಎಂದು ನಾನು ಭಾವಿಸಿದ್ದೆ. ಆದರೆ ಇಲ್ಲಿಯವರೆಗೂ ಆ ದಿಸೆಯಲ್ಲಿ ಏನೂ ಬದಲಾವಣೆಯಾಗಲಿಲ್ಲ. ಈ ವ್ಯವಸ್ಥೆಯನ್ನು ನೋಡಿಕೊಳ್ಳುವುದಕ್ಕೆ ಅಧಿಕಾರಿಗಳು ಇದ್ದಾರೆ, ಕಾನೂನು ಇದೆ, ಮೇಲೆ ವಿಚಾರಣೆಯನ್ನು ನೋಡಿಕೊಳ್ಳುವುದಕ್ಕೆ ರಿಜಿಸ್ಟ್ರಾರ್‌ರವರು ಇದ್ದಾರೆ, ಮಂತ್ರಿಗಳು ಇದ್ದಾರೆ, ಕಮಿಷನ್‌ರವರು ಇದ್ದಾರೆ, ಡೆಪ್ಯುಟಿ ರಿಜಿಸ್ಟ್ರಾರ್ ಇದ್ದಾರೆ, ಒಂದು ದೊಡ್ಡ ಆರ್ಮಿ ಆಫ್ ಆಫೀಸರ್ಸ್, ಇವರ ಒಂದು ದೊಡ್ಡ ಸೈನ್ಯವೇ ಇದೆ. ಸೆಕ್ಷನ್ ೧೪, ಸೆಕ್ಷನ್ ೨೯, ಸೆಕ್ಷನ್ ೨೩ ಪ್ರಕಾರ ಪ್ರತಿಯೊಬ್ಬ ಅಧಿಕಾರಿಯನ್ನು ತಾವು ನೇಮಕ ಮಾಡಿದ್ದೀರಿ. ಇಂಥ ಒಂದು ಕಾರ್ಯಕ್ರಮ ನಡೆದಿದೆಯೇ ವಿನಹ ಹೊಸದಾರಿ ಈ ಭಾಗದಲ್ಲಿ ಏನಾದರೂ ನಡೆದಿದೆಯೇ ಎನ್ನುವ ವಿಚಾರವನ್ನು ತಿರುವಿ ಹಾಕಿ ನೋಡಿದಾಗ ಏನೇನು ಕಾಣಲಿಲ್ಲ. ಮಾನ್ಯ ಮಂತ್ರಿಗಳು ಒಂದೇ ಮಾತಿನಲ್ಲಿ ಹೇಳಬಹುದು. ೧೯೮೨–೮೩ರ ವಿಷಯವನ್ನು ಕೊಟ್ಟಿದ್ದೇವೆ. ಈ ವರ್ಷದಲ್ಲಿ ಯಾವುದನ್ನೂ ಕೊಟ್ಟಿಲ್ಲವೆಂದು. ೧೯೮೪ಕ್ಕೂ ಏನು ಕೊಟ್ಟಿಲ್ಲ ಏತಕ್ಕೆಂದರೆ ನಾನು ಏನೂ ಮಾಡುವುದಕ್ಕೆ ಆಗಲಿಲ್ಲ ಎನ್ನುವ ಮಾತನ್ನು ಹೇಳಬಹುದಲ್ಲವೇ? ನಾನು ಈಗಾಗಲೇ ಹೇಳಿದಹಾಗೆ ಈ ಕ್ಷೇತ್ರ ಬಹಳ ದೊಡ್ಡ ಕ್ಷೇತ್ರ. ಸುಮಾರು ೧೪೯ ಕೋಟಿ ರೂಪಾಯಿಗಳಷ್ಟು ಹಣವನ್ನು ನಾವು ಇದರಲ್ಲಿ ಬಂಡವಾಳವನ್ನು ಷೇರ್ ಕ್ಯಾಪಿಟಲ್ ಆಗಿ ತೊಡಗಿಸಿದ್ದೇವೆ. ಸುಮಾರು ೪೦೪ ಕೋಟಿ ೬೧ ಲಕ್ಷ ರೂಪಾಯಿಗಳು ಠೇವಣಿ ಇದೆ. ೧೫೦೦ ಕೋಟಿ ರೂಪಾಯಿಗಳು ಬಂಡವಾಳ ಸಹಕಾರಿ ಕ್ಷೇತ್ರದಲ್ಲಿ ಇದೆ. ಇದು ಹೀಗೆ ಇರುವಾಗ ಈ ಕ್ಷೇತ್ರ ಬಹಳ ಸಣ್ಣ ಕ್ಷೇತ್ರವಲ್ಲ. ನಾನು ಒಂದೊಂದನ್ನು ಬಿಡಿಸಿ ಮಾತನಾಡುವುದಕ್ಕೆ ಪ್ರಯತ್ನ ಪಡುವುದಿಲ್ಲ. ನಮ್ಮ ಪಕ್ಷದ ಕೆಲವು ಮಾನ್ಯ ಮಿತ್ರರು ಕೆಲವು ವಿಷಯಗಳನ್ನು ಮಾತನಾಡಿದ್ದಾರೆ. ಕೆಲವರು ಷುಗರ್ ಫ್ಯಾಕ್ಟರಿಯ ಬಗ್ಗೆ ಮಾತನಾಡಿರುತ್ತಾರೆ. ನಾನು ಎಲ್ಲದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ೧೫೦೦ ಕೋಟಿ ರೂಪಾಯಿಗಳ ವ್ಯವಹಾರ ಇರತಕ್ಕಂಥ, ವರ್ಕಿಂಗ್ ಕ್ಯಾಪಿಟಲ್ ಇರತಕ್ಕಂಥ ವ್ಯವಸ್ಥೆ ಎಂದರೆ ಇದು ನಮ್ಮ ರಾಜ್ಯದ ಸಂಪತ್ತಿನ ವ್ಯವಸ್ಥೆಯನ್ನು ಯಾವ ದಿಕ್ಕಿನಲ್ಲಿ ತೆಗೆದುಕೊಂಡು ಹೋಗಿ ಸಾಧನೆ ಮಾಡಬೇಕು ಎನ್ನುವುದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಮಾನ್ಯ ಸಚಿವರು ಹೇಳಬಹುದು, ನಾನು ಕೂಡ ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡಿರುತ್ತೇನೆಂದು ನಾನು ಸಹಕಾರಿ ಮಂತ್ರಿಯಾಗಿದ್ದಾಗ ಅವರು ರಾಜ್ಯಮಟ್ಟದ ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರೂ ಕೂಡ ಆಗಿದ್ದರು. ಜಿಲ್ಲಾ ಬ್ಯಾಂಕ್ ಅಧ್ಯಕ್ಷರಾಗಿದ್ದರು. ಈ ಒಂದು ಬಾಬಿನಲ್ಲಿ ನಾವು ಎಷ್ಟು ಬಂಡವಾಳವನ್ನು ತೊಡಗಿಸಿದ್ದೇವೆ? ಸುಮಾರು ೩೨ ಲಕ್ಷ ೭೫ ಸಾವಿರ ವ್ಯವಸಾಯದ ಕುಟುಂಬಗಳು ಸದಸ್ಯತ್ವವನ್ನು ಪಡೆದಿದ್ದಾರೆಂದು ಹೇಳುವಾಗ ಅಲ್ಪಾವಧಿ ಸಾಲವನ್ನು ಪಡೆದ ವ್ಯವಸಾಯ ಕುಟುಂಬಗಳು ಎಷ್ಟು? ಮಧ್ಯಮಾವಧಿ ಸಾಲವನ್ನು ಪಡೆದ ವ್ಯವಸಾಯದ ಕುಟುಂಬಗಳು ಎಷ್ಟು? ಯಾವುದೇ ಸಾಲವನ್ನು ಪಡೆಯದಿರುವ ಕುಟುಂಬಗಳು ಎಷ್ಟು? ಅವರಿಂದ ಬಾಕಿ ಬಂದಿರುವುದು ಎಷ್ಟು? ಇದನ್ನೆಲ್ಲಾ ವಿಶ್ಲೇಷಣೆ ಮಾಡಿ ನೋಡಿದರೆ ನಮಗೆ ನಿರಾಸೆಯ ಚಿತ್ರ ಕಾಣುತ್ತದೆ. ನಿವೇನು ಮಾಡಿದಿರಿ, ನೀವೇ ಇದ್ದಿರಿ ಎನ್ನುವ ಮಾತನ್ನು ಉತ್ತರ ಹೇಳುವಾಗ ತಾವು ಹೇಳಬಹುದು ಆದು ಕಷ್ಟವೇನಲ್ಲ ಬಹಳ ದಿವಸಗಳ ಕಾಲ ಇಲ್ಲೇ ಇದ್ದೀರಿ, ಈಗತಾನೇ ಆ ಕಡೆ ಹೋಗಿದ್ದೀರಿ ಎಂದೂ ಹೇಳಬಹುದು. ಅದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಇದು ಎಲ್ಲರಿಗೂ ಸಂಬಂಧಪಟ್ಟ ವಿಚಾರ. ಸ್ವಾಮಿ, ನಾವು ಈ ಹಣ ಬಳಕೆಯ ಪಟ್ಟಿಯನ್ನು ಕೂಡ ನೋಡುತ್ತಿದ್ದೇವೆ, ಇದರಲ್ಲಿ ತಾವು ೩೨ ಲಕ್ಷ ೭೫ ಸಾವಿರ ಕುಟುಂಬಗಳ ಪೈಕಿ ದಾಮಾಷ ಶೇಕಡಾ ಎಷ್ಟು ಇದರಲ್ಲಿ ಸಾಲವನ್ನು ಬಿಡುಗಡೆ ಮಾಡಲಾಗಿದೆ. ಇನ್ನೂ ವ್ಯವಸಾಯ ಕಾರ್ಮಿಕರು ಅವರಿಗೆ ಎಷ್ಟು ಕೊಟ್ಟಿದ್ದೀರಿ? ಸಣ್ಣ, ದೊಡ್ಡ ರೈತರ ಸಂಖ್ಯೆ ಎಷ್ಟಿದೆ ಎಂಬುದನ್ನೆಲ್ಲ ವಿವರವಾಗಿ ಹೇಳಬೇಕಾಗಿತ್ತು. ತಮ್ಮ ಉತ್ತರದಲ್ಲಿ ಇದನ್ನು ಹೇಳಿಲ್ಲ. ಇಂಥ ಒಂದು ಪರಿಸ್ಥಿತಿ ಇರುವಾಗ, ಸ್ಟೇಟ್ ಬ್ಯಾಂಕ್‌ನಲ್ಲಿ ಹಣದ ಉಳಿತಾಯ ಕಾಣುತ್ತಿದೆ. ಇಟ್ಟಿರತಕ್ಕಂಥ ಹಣ ಉಳಿತಾಯವಾಗಿರುವುದು ಕಾಣುತ್ತಿದೆ. ಇವೊತ್ತು ಜಿಲ್ಲಾ ಬ್ಯಾಂಕ್‌ಗಳಿಂದ, ರಿಸರ್ವ್ ಬ್ಯಾಂಕ್‌ನಿಂದ ಸಾಲವನ್ನು ಪಡೆಯತಕ್ಕಂಥ ಸ್ಥಿತಿಯಲ್ಲಿ ರೈತರು ಇಲ್ಲ. ಆದರೆ ಅವರಿಗೆ ಕೊಡಬೇಕಾಗಿರುವ ಹಣ ಬ್ಯಾಂಕ್‌ನಲ್ಲಿ ಉಳಿತಾಯವಾಗಿರುತ್ತದೆ ಎಂದರೆ ಇದಕ್ಕೆ ಯಾರು ಕಾರಣರು? ಮಂತ್ರಿಗಳು ಕಾರಣರೇ, ಕಮಿಷನರ್ ಕಾರಣರೇ, ರಿಜಿಸ್ಟ್ರಾರ್ ಕಾರಣರೇ ಅಥವಾ ಅವರ ಕೈಕೆಳಗೆ ಇರತಕ್ಕಂಥ ಜನರು ಕಾರಣರೆಂದು ಹೇಳುವುದೇ? ಇದಕ್ಕೆ ಯಾರು ಕಾರಣರೆಂಬುದನ್ನು ವಿಚಾರ ತಾವು ಮಾಡ

ಬೇಕಾಗುತ್ತದೆ. ಇದನ್ನು ನೋಡಿಕೊಳ್ಳುವುದಕ್ಕೋಸ್ಕರವೇ, ಇವರ ಕಾರ್ಯಕ್ರಮಗಳನ್ನು ನಿರ್ವಹಣೆ ಮಾಡುವುದಕ್ಕೋಸ್ಕರವೇ ಅಧಿಕಾರಿಗಳು ಇದ್ದಾರೆ. ಆದರೆ ಸಂಘ ಸಂಸ್ಥೆಗಳಲ್ಲಿ ಕೆಲಸಮಾಡತಕ್ಕಂಥವರು, ಸಹಕಾರಿ ಸಂಘಗಳಲ್ಲಿ ನೇಮಕ ಆದಂಥ ಜನರು ಅಲ್ಲಿ ಇರುವಾಗ, ಅವರ ನೇಮಖಾತಿಯಾಗಲಿ, ಅವರಿಗೆ ಸಂಬಳ ಸಾರಿಗೆಯನ್ನು ಕೊಡುವುದಾಗಲಿ, ಅವರ ರಿಟೈರ್ ಏನು ಆಗುತ್ತಾರೆ ಅದೆಲ್ಲದಕ್ಕೆ ಮೊದಲು ಅವಕಾಶ ಇಲ್ಲದೆ ಇರುವುದರಿಂದ ೧೨೮(ಎ) ಅದರಬಗ್ಗೆ ತಿದ್ದುಪಡಿ ಮಾಡಿ ಅವರ ನೇಮಕಾತಿ, ಸರ್ವೀಸ್ ಬಗ್ಗೆ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಕೂಡ ಆಯಿತು. ಇದು ಸುಮಾರು ೧೯೭೬–೭೭ರಲ್ಲಿ ತಿದ್ದುಪಡಿ ಆದಾಗ್ಯೂ ಕೂಡ ಇಲ್ಲಿಯವರೆಗೆ ಇದರ ಬಗ್ಗೆ ಕಾಳಜಿ ಯಾರೂ ವಹಿಸಲಿಲ್ಲ. ಇವೊತ್ತು ನಾನು ಹೇಳುತ್ತಿದ್ದೇನೆ, ಹಣ ಹೇಗೆ ಉಳಿತಾಯವಾಗಿದೆ. ಎಂದು ೧೯೮೨–೮೩ರಲ್ಲಿ ಸ್ಟೇಟ್ ಬ್ಯಾಂಕ್‌ನಿಂದ ೯ ಕೋಟಿ ೭೪ ಲಕ್ಷ ೭೫ ಸಾವಿರ ರೂಪಾಯಿಗಳನ್ನು, ಇಟ್ಟಿದ್ದರೆ ಎಕ್ಸ್‌ಪೆಂಡೀಚರ್ ೩೧ನೇ ಮಾರ್ಚ್ ೧೯೮೨ಕ್ಕೆ ೫ ಕೋಟಿ ೯೭ ಲಕ್ಷ, ಅಂದರೆ ೩ ಕೋಟಿ ೭೭ ಲಕ್ಷ ಉಳಿತಾಯ. ನಿಮಗೆ ನಾನು ಹೇಳಬೇಕಾಗುತ್ತದೆ ಮಾರ್ಚ್‌ನಿಂದ ಇಲ್ಲಿಯವರೆಗೆ ಆಗಿರತಕ್ಕಂಥದ್ದರ ಬಗ್ಗೆ ಸಂಪ್ಲಿಮೆಂಟರಿ ಕೊಟ್ಟಿದ್ದರೆ ಚೆನ್ನಾಗಿ ಇರುತ್ತಿತ್ತು. ಅಗ್ರಿಕಲ್ಚರ್ ಫೈನಾನ್ಸ್ ಇನ್‌ಸ್ಟಿಟ್ಯೂಷನಲ್ಲಿ ೧ ಕೋಟಿ ೪೦ ಲಕ್ಷ, ಸೆಂಟ್ರಲ್ ಸ್ಪಾನ್ಸರ್ ಸ್ಕೀಮ್ ೪೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಇಷ್ಟೊಂದು ಜನ ಇಟ್ಟುಕೊಂಡು ಕೆಲಸ ಇಷ್ಟಾದರೆ ೩೨ ಲಕ್ಷ ೭೫ ಸಾವಿರ ವ್ಯವಸಾಯ ಕುಟುಂಬಗಳು ಸಹಕಾರಿ ಕ್ಷೇತ್ರದಲ್ಲಿ ಇದ್ದಾರೆಂದು ಹೇಳುವಾಗ, ಈ ರೀತಿಯಾದರೆ ಯಾವರೀತಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಹಳ್ಳಿಗಳಲ್ಲಿರತಕ್ಕಂಥ ರೈತರು ಎಷ್ಟು ಸಹಕಾರಿ ಸಂಘಗಳಲ್ಲಿ ಸಾಲವನ್ನು ಪಡೆದಿದ್ದಾರೆ ಎಂಬುದನ್ನು ಶಾಸ್ತ್ರೋಕ್ತವಾಗಿ ವರ್ಗೀಕರಣ ಮಾಡಲಿಕ್ಕೆ ಸಾಧ್ಯವಾಗಲಿಲ್ಲ, ಸಾಲ ಪಡೆಯದೆ ಅವಶ್ಯಕತೆ ಇರತಕ್ಕಂಥ ಜನ ಎಷ್ಟು ಜನರು ಇದ್ದಾರೆ, ಇವರಲ್ಲಿ ಎಷ್ಟು ಜನರಿಗೆ ಕೊಡಲಿಕ್ಕೆ ಸಾಧ್ಯವಾಗುತ್ತದೆ, ಎಷ್ಟರ ಮಟ್ಟಿಗೆ ದಾಮಾಶ ಕೊಡಲಿಕ್ಕೆ ಸಾಧ್ಯವಾಗುತ್ತದೆ, ೨೫ ಪರ್ಸೆಂಟ್, ೫೦ ಪರ್ಸೆಂಟ್, ೭೦ ಪರ್ಸೆಂಟ್ ಕೊಡಲಿಕ್ಕೆ ಸಾಧ್ಯವೇ ಎನ್ನುವುದನ್ನು ನೋಡಬೇಕು? ಅದನ್ನು ಕೊಡುವಾಗ ಜಿಲ್ಲಾ ಬ್ಯಾಂಕ್‌ನಿಂದ ರಿಸರ್ವ್‌ಬ್ಯಾಂಕ್‌ಗಳಿಂದ ಸಾಲ ತೆಗೆದುಕೊಂಡು ಪೂರೈಕೆ ಮಾಡಲು ಎಷ್ಟು ಬೇಕಾಗುತ್ತದೆ ಎನ್ನುವ ಬಗ್ಗೆ ನಮ್ಮಲ್ಲಿ ವ್ಯವಸ್ಥೆ ಇಲ್ಲ. ನಮ್ಮಲ್ಲಿ ಪ್ಲಾನಿಂಗ್ ಇಲ್ಲ. ಇಲ್ಲಿ ಒಂದು ಕೆಲಸವಾಗಿದೆ, ಕೆಲವರು ಸಹಕಾರಿ ಕ್ಷೇತ್ರದಲ್ಲಿ ಬೇರೆ ಬೇರೆ ದೇಶಗಳಿಂದ ಆಗಿರತಕ್ಕಂಥದ್ದನ್ನು ನೋಡಿಕೊಂಡು ಬರುವುದಕ್ಕೆ ಹೋಗಿದ್ದರು, ಮಾನ್ಯ ಸಚಿವರೂ ಕೂಡ ಹೋಗಿದ್ದರು ಎಂದು ಕಾಣುತ್ತದೆ, ಶಿಲಾಂಗ್, ಜಪಾನ್ ಇಲ್ಲೆಲ್ಲ ಹೋಗಿದ್ದರು. ತಾವು ಎಲ್ಲಿಗೆ ಹೋಗಿದ್ದಿರಿ?

ಶ್ರೀ ಆರ್. ಎಲ್. ಜಾಲಪ್ಪ.—ನಾನು ರಷ್ಯಾಕ್ಕೆ ಹೋಗಿದ್ದೆ.

ಶ್ರೀ ಕೆ. ಎಚ್. ರಂಗನಾಥ್.—ಅಲ್ಲಿ ಏನು?

ಶ್ರೀ ಆರ್. ಎಲ್ ಜಾಲಪ್ಪ.—ರಷ್ಯಾ, ಹಾಲೆಂಡ್ ಸೆಂಟ್ರಲ್ ಸೊಸೈಟಿ, ನೋಡಿಕೊಂಡು ಬಂದಿರುತ್ತೇನೆ. ಆದರೆ ಅಲ್ಲಿನ ವ್ಯವಸ್ಥೆ ಬೇರೆ ಇಲ್ಲಿನ ವ್ಯವಸ್ಥೆಯೇ ಬೇರೆ.

ಶ್ರೀ ಕೆ. ಎಚ್. ರಂಗನಾಥ್.—ನಮ್ಮ ವ್ಯವಸ್ಥೆಯೇ ಬೇರೆ, ಅಲ್ಲಿನ ವ್ಯವಸ್ಥೆಯೇ ಬೇರೆ ಎಂದು ತಾವು ಹೇಳುವುದಾದರೆ, ನಮ್ಮ ಸಮಾಜದ ಒಂದು ವ್ಯವಸ್ಥೆಯನ್ನು ತಾವು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕಾಗುತ್ತದೆ. ಬೇರೆ ದೇಶಗಳಲ್ಲಿ ಎಲ್ಲವನ್ನೂ ಶಾಸ್ತ್ರೀಯವಾಗಿ ಅಭ್ಯಾಸ ಮಾಡಿ ಎಲ್ಲಾ ಕೆಲಸಗಳನ್ನು ವ್ಯವಸ್ಥಿತವಾಗಿ ಮಾಡುತ್ತಾರೆ. ಅಲ್ಲಿನ ಜನರು ಸ್ವಯಂಪ್ರೇರಿತರಾಗಿ ಷೇರು ಬಂಡವಾಳ ಹಾಕುತ್ತಾರೆ. ಸರ್ಕಾರ ದಿಂದ ಅನುದಾನ ಪಡೆದರೆ ಅದನ್ನು ಸಕಾಲದಲ್ಲಿ ವಾಪಸ್ ಮಾಡುತ್ತಾರೆ. ಆದರೆ ಇಲ್ಲಿ ನಮ್ಮಲ್ಲಿ ಏನಾಗಿದೆ ಎಂದರೆ, ಯಾರಾದರೂ ಒಂದೂವರೆ ಸಾವಿರ ರೂಪಾಯಿಗಳ ಸಾಲ ಪಡೆಯಬೇಕಾದರೆ ಶೇಕಡಾ ೫ರ ಪ್ರಕಾರ ಹೆಚ್ಚುವರಿ ಷೇರುಗಳನ್ನು ಪಡೆಯಬೇಕಾಗುತ್ತದೆ. ಈ ರೀತಿಯಿಂದ ಷೇರು ಬಂಡವಾಳವನ್ನು ಕೂಡಿಸುವಂತಹ ಒಂದು ವ್ಯವಸ್ಥೆ ಬೇರೆ ದೇಶಗಳಲ್ಲಿ ಏನಾದರೂ ಇದೆಯೋ ?

ಶ್ರೀ ಆರ್. ಎಲ್. ಜಾಲಪ್ಪ.—ಅಲ್ಲಿ ಇಲ್ಲ. ಆದರೆ ನಮ್ಮ ಇಂಡಿಯಾ ದೇಶದಲ್ಲಿದೆ.

ಶ್ರೀ ಕೆ. ಎಚ್. ರಂಗನಾಥ್.—ನಮ್ಮ ರಾಜ್ಯದಲ್ಲಿ ಈಗಿನ ಒಂದು ವ್ಯವಸ್ಥೆಯನ್ನು ಬದಲಾವಣೆ ಮಾಡಿದರೆ ಕೇಂದ್ರ ಸರ್ಕಾರದವರು ಏನಾದರೂ ನಿಮಗೆ ದಂಡ ವಿಧಿಸುತ್ತಾರೆಯೇ ?

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ರಂಗನಾಥ್ ಅವರು ಬಹಳ ಹಿರಿಯ ಸದಸ್ಯರೂ ಹೌದು ಮತ್ತು ಅನುಭವಿಗಳೂ ಹೌದು. ಈ ಮೊದಲು ಸಹಕಾರ ಮಂತ್ರಿಗಳಾಗಿದ್ದರು. ಆದ್ದರಿಂದ ತಮಗೂ ಸಹ ಗೊತ್ತಿರುವಂತೆ ನಮಗೆ ಸಾಲ ಕೊಡುವಂಥ ಹಣಕಾಸಿನ ಸಂಸ್ಥೆಗಳು ಕೆಲವು ಕಟ್ಟುಪಾಡುಗಳನ್ನು ವಿಧಿಸಿವೆ. ಆದ್ದರಿಂದ ಬೈಲಾ ಪ್ರಕಾರ ಯಾರು ಷೇರು ಹಣ ಎಷ್ಟಿರುತ್ತದೋ ಅದರ ಹತ್ತರಷ್ಟು ಸಾಲ ಪಡೆಯಬಹುದಾಗಿದೆ. ಇದರಂತೆ ಸಾವಿರ ರೂಪಾಯಿಗಳ ಸಾಲ ಪಡೆಯಬೇಕಾದರೆ ನೂರು ರೂಪಾಯಿಗಳ ಷೇರನ್ನು ಪಡೆಯಬೇಕಾಗುತ್ತದೆ.

ಶ್ರೀ ಕೆ. ಎಚ್. ರಂಗನಾಥ್.—ಅದು ನನಗೂ ಗೊತ್ತು. ಆದರೆ ಇವೊತ್ತು ರೈತರ ಪರಿಸ್ಥಿತಿ ಏನಾಗಿದೆ ಎಂಬುದು ತಮಗೆ ಗೊತ್ತಿದೆಯೋ ? ತಮಗೆ ಗೊತ್ತಿದ್ದರೆ ಈಗಿನ ಬೈಲಾವನ್ನು, ಆಕ್ಟನ್ನು ಮತ್ತು ರೂಲ್ಸನ್ನು ಬದಲಾವಣೆ ಮಾಡಿ ಸಾಕಷ್ಟು ಹಣವನ್ನು ತಮ್ಮಲ್ಲಿಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲವೇ ? ಇದೇನು King Solomen's judgement ಇದ್ದಂತೆ ಇದೆಯೆ ? ನಾವು ಮಾಡಿದಂಥ ಕಾನೂನನ್ನು ನಮಗೆ ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲವೇ ? ರೈತರಿಗೆ ನೀವು ಸ್ವಯಂಪ್ರೇರಿತರಾಗಿ ಸಾಲ ಕೊಡಲು ಏತಕ್ಕೆ ಹಿಂಜರಿಯುತ್ತಿದ್ದೀರಿ ? ಸಾವಿರ ರೂಪಾಯಿಗಳ ಸಾಲ ಕೊಡುವಾಗ ಶೇಕಡಾ ಹತ್ತರಷ್ಟು ಷೇರು ಹಣವನ್ನು ಹಿಡಿದುಕೊಂಡು ಕೊಡುತ್ತೀರಿ. ಇದರಿಂದ ಅವರು ಮತ್ತೆ ಖಾಸಗಿಯವರ ಹತ್ತಿರ ಹೋಗಿ ಸಾಲ ಪಡೆಯುತ್ತಾರೆ. ಈಗ ತಾವು ಬೆಳೆ ಸಾಲ ಎಂದು ಕೊಡುತ್ತೀರಿ. ಈ ಸಾಲ ಪಡೆದ ನಂತರ ಅದು ಕಟಾವಾಗುವವರೆಗೂ ಅವರು ಹಣಕ್ಕಾಗಿ ಕಾಯಬೇಕಾಗುತ್ತದೆ. ಈ ಮಧ್ಯೆ ಅವರ ಮನೆಯ ಖರ್ಚಿಗೆ, ಮಕ್ಕಳ ವಿದ್ಯಾಭ್ಯಾಸದ ಖರ್ಚಿಗೆ ಹಾಗೂ ಮನೆಯಲ್ಲಿ ಯಾರಿಗಾದರೂ ಖಾಯಿಲೆ ಬಂದರೆ ಅದರ ಖರ್ಚಿಗೆ ಹಣ ಬೇಕಾಗುತ್ತದೆ. ಆದರೆ ಇದನ್ನೆಲ್ಲಾ ತಾವು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಅವರು ಖಾಸಗಿಯವರ ಹತ್ತಿರ ಹೋಗುತ್ತಾರೆ. ಅಲ್ಲಿನ ಬಡ್ಡಿ ಎಷ್ಟೆಂಬುದು ತಮಗೂ ಗೊತ್ತಿದೆ. ಈಗಿನ ನಿಮ್ಮ ಒಂದು ನೀತಿ ಹಾಗೂ ನಿರೂಪಣೆಯನ್ನು ಯಾವುದೋ ಕಾಲದಲ್ಲಿ ಮಾಡಿದ್ದು. ಈ ಆಧುನಿಕ ಕಾಲದಲ್ಲಿ ಇದನ್ನು ಏತಕ್ಕೆ ಬದಲಾವಣೆ ಮಾಡಬಾರದು ? ಈಗ ನಮ್ಮಲ್ಲಿ ೩೫ ಲಕ್ಷ ಕೃಷಿ ಕುಟುಂಬಗಳಿವೆ ಎಂದು ಹೇಳಿದ್ದೀರಿ. ಇಷ್ಟೊಂದು ಜನರನ್ನು ತಾವು ಸದಸ್ಯರನ್ನಾಗಿ ಮಾಡಿರುವುದು ನಮಗೆ ಅಂಕಿ ಅಂಶಗಳನ್ನು ತೋರಿಸಬೇಕೆಂದು ಮಾಡಿದ್ದೀರಾ ? ಈ ಇಲಾಖೆಯಲ್ಲಿ ತುಂಬಾ ಒಳ್ಳೆಯ ಅಧಿಕಾರಿಗಳು ಇದ್ದಾರೆ. ಅವರ ಪರಿಚಯ ನನಗಿದೆ. ಆದ್ದರಿಂದ ತಮ್ಮ ಅಧಿಕಾರಿಗಳ ಸಹಾಯದಿಂದ ಈಗಿನ ನಿಯಮಗಳನ್ನು ರೈತರಿಗೆ ಅನುಕೂಲವಾಗುವಂತೆ ಬದಲಾವಣೆ ಮಾಡಲು ತಾವು ಯೋಚನೆ ಮಾಡಿದ್ದರೆ ಯಾವರೀತಿ ಮಾಡುತ್ತೀರಿ ಎಂಬುದನ್ನು ನಮಗೆ ತಮ್ಮ ಉತ್ತರದಲ್ಲಿ ಹೇಳಬೇಕು. ಇದನ್ನು ಬದಲಾವಣೆ ಮಾಡದ ಹೊರತು ನಾವು ಏನೂ ಸುಧಾರಣೆ ಮಾಡುವುದಕ್ಕಾಗುವುದಿಲ್ಲ. ತಾವು ಕೊಟ್ಟಿರುವಂತಹ ವರದಿಯನ್ನು ನೋಡಿದರೆ ಈ ಜಿಲ್ಲಾ ಬ್ಯಾಂಕುಗಳು ಸಾಲ ಪಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. Credit limits sanctioned by Reserve Bank of India. ಇದನ್ನು ನೋಡಿದರೆ ಕೆಲವು ಜಿಲ್ಲಾ ಬ್ಯಾಂಕುಗಳು ಒಂದು ಕೋಟಿ ರೂಪಾಯಿಗಳನ್ನು ಕೂಡ ತೆಗೆದುಕೊಂಡು ಬರಲು ಸಾಧ್ಯವಾಗದ ಪರಿಸ್ಥಿತಿಯಲ್ಲಿವೆ. ಅಂದರೆ ಲಿಕ್ವಿಡಿಟಿ ಏನಾದರೂ ಇದೆಯೋ ? ಇಂತಹ ಸಮಯದಲ್ಲಿ ಮಾನ್ಯ ಜಾಲಪ್ಪನವರು ರಾಜಕೀಯ ಮಾಡುವುದಿಲ್ಲ, ಬಹಳ ನಿಸ್ಪಕ್ಷಪಾತ ದೃಷ್ಟಿಯಿಂದ ಹಾಗೂ ಸಮಾನ ದೃಷ್ಟಿಯಿಂದ ನೋಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೆ.

ಶ್ರೀ ಹುಚ್ಚಮಾಸ್ತಿಗೌಡ.—ಅವರ ಮೇಲೆ ಈಗಲೇ ಅನುಮಾನ ಮಾಡಬೇಡಿ.

ಶ್ರೀ ಕೆ. ಎಚ್. ರಂಗನಾಥ್.—ಆದರೆ ಒಂದೆರಡು ವಿಚಾರಗಳನ್ನು ನೋಡಿದ ಮೇಲೆ ಅನುಮಾನಪಡಬೇಕಾಗಿ ಬಂದಿದೆ. He is a good friend of mine. I am one of his well wishers. ಅವರು ಚೆನ್ನಾಗಿ ಬೆಳೆಯಲಿ ಎಂದು ಇದ್ದೆ. ಆದರೆ ಅವರು ಬೆಳೆಯುತ್ತಾ ಬೆಳೆಯುತ್ತಾ......

ಶ್ರೀ ಆರ್. ಎಲ್. ಜಾಲಪ್ಪ.—ನಿಮ್ಮ ಆಶೀರ್ವಾದ ನನ್ನ ಮೇಲಿದೆ. ಆದ್ದರಿಂದ ನಾನು ಬೆಳೆದೇ ಬೆಳೆಯುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಬೆಳೆಯುವುದು ಎಂದರೆ, ಎಲ್ಲರಿಗೂ ಸಹಾಯ ಮಾಡಬೇಕೆಂಬ ಉತ್ಕಟಾಂಕ್ಷೆ ನಿಮ್ಮ ಮನಸ್ಸಿನಲ್ಲಿರಬೇಕು. ಆದರೆ ಎರಡು–ಮೂರು ವಿಷಯಗಳು ನನಗೆ ಗೊತ್ತಾದ ಮೇಲೆ ಇವರು ಏತಕ್ಕೆ ಹೀಗಾದರು ಎಂದು ಯೋಚನೆಯಾಯಿತು. ಈ ಮೊದಲು ಇವರು ರಾಜ್ಯ ಮಟ್ಟದ ಭೂ ಅಭಿವೃದ್ಧಿ ಬ್ಯಾಂಕ್‌ನ ಅಧ್ಯಕ್ಷರಾಗಿದ್ದರು. ಆಗ ನಾನು ಸಹಕಾರ ಮಂತ್ರಿಯಾಗಿದ್ದೆ.

ನಮ್ಮಲ್ಲಿ ೧೭೭ ತಾಲ್ಲೂಕ್ ಭೂ ಅಭಿವೃದ್ಧಿ ಬ್ಯಾಂಕ್‌ಗಳಿವೆ. ಆ ಸಮಯದಲ್ಲಿ ಬಹುಭಾಗದಷ್ಟು ಡೈರೆಕ್ಟರ್‌ಗಳು ಡಿಫಾಲ್ಟರ್ಸ್ ಆಗುವಂತಹ ಪರಿಸ್ಥಿತಿ ಬಂದಿತ್ತು. ಆಗ ನಾನು ರಿಜಿಸ್ಟ್ರಾರ್ ಅವರಿಗೆ ಫೋನ್ ಮಾಡಿ ಕೇಳಿದೆ. ಆಗ ಅವರು ನನಗೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ, ಇದು ಬಿಟ್ಟು ಬೇರೆ ವಿಧಿಯೇ ಇಲ್ಲ ಎಂದು ಹೇಳಿದರು. ಆದರೆ ಇದು ರಾಜ್ಯಮಟ್ಟದ ಸಂಸ್ಥೆ. ಇಲ್ಲಿಗೆ ನಾವು ರಿಜರ್ವ್ ಬ್ಯಾಂಕಿನಿಂದ ಹಣ ತಂದಿರುತ್ತೇವೆ, ಆದಕಾರಣ ಈ ಬ್ಯಾಂಕ್‌ಗೆ ಇಂತಹ ಒಂದು ಪರಿಸ್ಥಿತಿ ಬಂತೇ ಎಂದು ನನಗೆ ಚಿಂತೆ ಆಯಿತು. ಮುಂದಿನ ಕ್ರಮ ತೆಗೆದುಕೊಳ್ಳಬೇಡಿ ಎಂದು ಅಧಿಕಾರಿಗಳಿಗೆ ನಾನೇನಾದರು ಹೇಳಿದ್ದರೆ ಅವರ ಕರ್ತವ್ಯ ಮಾಡಲು ನಾನೇ ಕರ್ತವ್ಯ ಚ್ಯುತಿ ಮಾಡಿದಂತೆ ಆಗುತ್ತದೆಂದು ಯೋಚನೆ ಮಾಡಿ ನಿಮ್ಮ ಕೆಲಸ ನೀವು ಮಾಡಿ ಎಂದು ನಾನು ಅಧಿಕಾರಿಗಳಿಗೆ ಹೇಳಿದೆ. ಆಗ ಇವರು ಕೂಡಲೇ ನನ್ನ ಬಳಿ ಓಡಿಬಂದರು. ಆಗ ನಾನು ಇವರಿಗೆ ನೀವು ಡಿಫಾಲ್ಟರ್ಸ್ ಆದಕಾರಣ ನಿಮ್ಮನ್ನು ತೆಗೆಯದೆ ವಿಧಿ ಇಲ್ಲ ಎಂದು ಹೇಳಿದೆ. ಆಗ ಇವರು ಏನು ಮಾಡುವುದು ಹಾಗೆ ಹೀಗೆ ಎಂದೆಲ್ಲಾ ಹೇಳಿದರು. ಅನಂತರ ನಾವು ನೀವೆಲ್ಲರೂ ಸೇರಿ ಸರ್ಕಾರಕ್ಕೆ ರಿವಿಜನ್ ಪಿಟಿಷನ್ ಹಾಕಿ ಎಂದು ಹೇಳಿದೆ. ಅದರಂತೆ ಹಾಕಿದರು. ನಂತರ ಸರ್ಕಾರದಿಂದ ಸ್ಟೇ ಕೊಡಲಾಯಿತು. ಆಗ ಇವರು ಉಳಿದುಕೊಂಡರು ನಮ್ಮ ರಾಜ್ಯ ಮಟ್ಟದ ಸಂಸ್ಥೆಯ ಬಹುತೇಕ ಡೈರೆಕ್ಟರ್ಸ್ ಡಿಫಾಲ್ಟರ್ಸ್ ಆದರೆ ಈ ಸಂಸ್ಥೆಗೆ ಸಾಲ ಕೊಡತಕ್ಕಂಥವರು ಏನು ತಿಳಿದುಕೊಳ್ಳುತ್ತಾರೆಂಬ ಚಿಂತೆ ನನಗೆ ಬಂದಿದ್ದರಿಂದ ಮಂತ್ರಿಯಾಗಿ ನಾನು ಈ ಕೆಲಸ ಮಾಡಿದೆ.

ಶ್ರೀ ಎಸ್. ಬಂಗಾರಪ್ಪ.—ಆಗ ಇವರೂ ಸಹ ಡಿಫಾಲ್ಟರ್ ಆಗಿದ್ದರೇ ?

ಶ್ರೀ ಆರ್. ಎಲ್. ಜಾಲಪ್ಪ.—ಹೌದು, ನಾನೂ ಡಿಫಾಲ್ಟರ್ ಆಗಿದ್ದೆ. ತಾವೇನೂ ಆಶ್ಚರ್ಯಪಡಬೇಕಾಗಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ತಾವು ಡಿಫಾಲ್ಟರ್ ಆಗಿಲ್ಲ ತಾನೆ ?

ಶ್ರೀ ಕೆ. ಎಚ್. . ರಂಗನಾಥ್.—ಆಗ ಇವರು ಮಾತ್ರವಲ್ಲ, ಬಹುತೇಕ ಮಂದಿ ಡೈರೆಕ್ಟರ್ಸ್ ಡಿಫಾಲ್ಟರ್ಸ್ ಆಗಿದ್ದರು.

ಶ್ರೀ ಜಿ. ಎಚ್. ಪಟೇಲ್.—ನಿಮ್ಮ ಕಾಲದಲ್ಲಿ ಡಿಫಾಲ್ಟರ್ಸ್ ಆದವರನ್ನು ಡೈರೆಕ್ಟರ್‌ಗಳನ್ನಾಗಿ ಮಾಡಬೇಕೆಂಬ ನಿಯಮ ಏನಾದರೂ ಇತ್ತೆ ?

ಶ್ರೀ ಕೆ. ಎಚ್. ರಂಗನಾಥ್.—ನಿಮಗೆ ಸಹಕಾರಿ ಕ್ಷೇತ್ರದ ಬಗ್ಗೆ ಅಷ್ಟೊಂದು ಅನುಭವ ಇಲ್ಲ ಬಿಡಿ. ಎಲ್ಲಾ ಸಹಕಾರ ಸಂಘಗಳು ಯಾವ ರೀತಿ ಇವೆ ಎಂಬುದನ್ನು ಹೇಳುತ್ತಿದ್ದೇನೆ. ಇಲ್ಲಿ ಕೆಲಸ ಮಾಡತಕ್ಕಂಥವರು, ಮೇಲ್ವಿಚಾರಣೆ ಮಾಡತಕ್ಕಂಥ ಪದಾಧಿಕಾರಿಗಳು ಒಬ್ಬರಿಗೊಬ್ಬರು ಹಾವು ತಳಕು ಹಾಕಿಕೊಂಡಂತೆ ಹಾಕಿಕೊಂಡಿರುತ್ತಾರೆ ಇದರಿಂದ ಬಿಡಿಸುವುದಕ್ಕೆ ಆಗದ ಪರಿಸ್ಥಿತಿ ಉಂಟಾಗಿದೆ.

೪-೦೦ ಪಿ. ಎಂ.

ಇದನ್ನು ಬಿಡಿಸಲಿಕ್ಕೆ ಸಾಧ್ಯವಿಲ್ಲ. ಇವತ್ತು ಪರಿಸ್ಥಿತಿ ಏನಾಗಿದೆ ಅಂದರೆ, ಮೊನ್ನೆ ಮಾನ್ಯ ಬಿ. ಜಿ. ಬಣಕಾರ್‌ರವರು ಒಂದು ಪ್ರಶ್ನೆಯನ್ನು ಹಾಕಿದ್ದರು. ತಾಲ್ಲೂಕು ಮಾರ್ಕೆಟ್ ಸೊಸೈಟಿಗಳು ಯಾವ ಪರಿಸ್ಥಿತಿಯಲ್ಲಿವೆ ಎಂದು ಪ್ರಶ್ನೆ ಹಾಕಿದ್ದರು. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ೧೪೪ ತಾಲ್ಲೂಕು ಮಾರ್ಕೆಟ್ ಸೊಸೈಟಿಗಳು ನಷ್ಟದಲ್ಲಿವೆ ಎಂದು ಹೇಳಿದ್ದಾರೆ. ನಷ್ಟ ಎಷ್ಟು ಅಂದರೆ ೧ ಕೋಟಿ ೭೯ ಲಕ್ಷದ ೨ ಸಾವಿರದ ೨೬೦ ರೂಪಾಯಿಗಳು. ಲಾಭದಲ್ಲಿರತಕ್ಕ ಸೊಸೈಟಿಗಳು ಎಷ್ಟು ಎಂದು ಕೇಳಿದ್ದಕ್ಕೆ, ಲಾಭದಲ್ಲಿರತಕ್ಕ ಸೊಸೈಟಿಗಳು ೧೩೫ ಸೊಸೈಟಿಗಳು ಅವು ೧೯೭೭-೭೮ ರಲ್ಲಿ ೪,೨೭,೨೬೦. ೧೯೭೮-೭೯ರಲ್ಲಿ ೧೩೫ ಸೊಸೈಟಿಗಳ ೨,೯೦,೦೦೦, ೧೯೭೯-೮೦ ರಲ್ಲಿ ೯೦ ಸೊಸೈಟಿಗಳು ೧ ಲಕ್ಷದ ೧೯ ಸಾವಿರದ ೬೨೪ ರೂಪಾಯಿಗಳ ಲಾಭ ಮಾಡಿರತಕ್ಕದ್ದು ಇದೆ. ೧೯೮೦-೮೧ರಲ್ಲಿ ೭೫ ಸೊಸೈಟಿಗಳು ೧ ಲಕ್ಷದ ೧೭ ಸಾವಿರ ನಷ್ಟ ಹೊಂದಿದೆ. ಒಟ್ಟು ೧೦ ಲಕ್ಷ ರೂಪಾಯಿಗಳ ಲಾಭ ಮಾಡಿದಂತಾಗಿದೆ. ನಷ್ಟವಾಗಿರುವುದು ೧ ಕೋಟಿ ೭೯ ಲಕ್ಷ ೨ ಸಾವಿರದ ೨೬೦ ರೂಪಾಯಿಗಳು. ಯಾರನ್ನು ಇವತ್ತಿನ ದಿವಸ ನಾವು ಅಪಾದನೆಗೆ ಗುರಿಮಾಡಬೇಕು ? ಯಾರನ್ನು ಶಿಕ್ಷೆ ಮಾಡಬೇಕು ಮೇಲ್ವಿಚಾರಕರನ್ನು ಮಾಡಬೇಕೆ ? ಸರ್ಕಾರವನ್ನು ಗುರಿಮಾಡಬೇಕೆ ? ೧೫೦೦ ಕೋಟಿ ರೂಪಾಯಿಗಳ ಬಂಡವಾಳವನ್ನು ಒದಗಿಸಿದ್ದೇವೆ. ೩೫ ಲಕ್ಷ ವ್ಯವಸಾಯ ಕುಟುಂಬಗಳನ್ನು ಸದಸ್ಯ

ರನ್ನಾಗಿ ಮಾಡಿದ್ದೇವೆ, ಇದು ಯಾರ ಸುಖಕೋಸ್ಕರ ? ಥ್ರೀಟೈರ್ ಆರ್ಗನೈಸೇಷನ್ ಗ್ರಾಮ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ, ರಾಜ್ಯಮಟ್ಟದಲ್ಲಿ ಇರತಕ್ಕದ್ದು ರೈತ ಏನು ಉತ್ಪಾದನೆ ಮಾಡುತ್ತಾನೆ ಅದನ್ನು.........

ಶ್ರೀ ಎಚ್. ಎ. ನಾರಾಯಣಗೌಡ.—ಎಲ್ಲಾ ಒಂದೇ ಎಂದು ಹೇಳಬೇಡಿ.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಸದಸ್ಯರು ಭೂ ಬ್ಯಾಂಕಿನ ಅಧ್ಯಕ್ಷರು ಅವರ ಬ್ಯಾಂಕಿನಲ್ಲಿ ಒಂದೇ ತರಹ ಜನ ಇಟ್ಟುಕೊಂಡಿದ್ದಾರೆ. ಅವರ ಬ್ಯಾಂಕ್ ಏನಿದೆ ಅದನ್ನು ನಾನು ನೋಡಿದ್ದೇನೆ, ಅದರ ವಿಚಾರವನ್ನು ಕೇಳಿದ್ದೇನೆ. ಸಮಾಜದ ವ್ಯವಸ್ಥೆ ಗತಿಯನ್ನು ಬದಲಾವಣೆ ಮಾಡುವುದಕ್ಕೆ ಇವತ್ತಿನ ದಿವಸ ಸಾಧ್ಯವಾಗಿಲ್ಲ. ಕೇವಲ ಕೆಲವೇ ಜನರಿಗೆ ಬದುಕಲಿಕ್ಕೆ ಅವರ ಬಾಳ್ವೆಗೆ ಅವರ ದೊಡ್ಡಸ್ಥಿಗೆ ಮಾಡುವುದಕ್ಕೆ ಸಾಧನವಾಗಿರತಕ್ಕ ಸಂಸ್ಥೆಗಳಾಗಿವೆ. ಅದು ಸಕ್ಕರೆ ಕಂಪನಿಯಾಗ ಬಹುದು, ಜಿಲ್ಲಾ ಬ್ಯಾಂಕುಗಳಾಗಿರಬಹದು, ರಾಜ್ಯಮಟ್ಟದಲ್ಲಿರತಕ್ಕ ಕನ್ಸೂಮರ್ ಫೆಡರೇಷನ್ ಆಗಿರಬಹುದು, ಮಾರ್ಕೆಟ್ ಫೆಡರೇಷನ್ ಆಗಿರಬಹುದು ನಿಮ್ಮ ಮಾರ್ಕೆಟ್ ಫೆಡರೆಷನ್ ಇತವತ್ತಿನ ದಿವಸ ಏನು ಮಾಡುತ್ತಿದೆ? ಯಾವ ಮಾಲನ್ನು ತೆಗೆದುಕೊಂಡು ಮಾರಾಟ ಮಾಡುತ್ತಾರೆ ? ಫೆಡರಲೈಸ್ ಮಾಡಿದ್ದೇವೆಂದು ವರದಿಯಲ್ಲಿ ಹೇಳಿದ್ದಾರೆ. ಕನ್ಸೂಮರ್ ಫೆಡರೇಷನ್ ಇವತ್ತಿನ ದಿವಸ ಏನು ಕೆಲಸ ಮಾಡಲಿಕ್ಕೆಸಾಧ್ಯವಾಗಿದೆ? ನನಗೆ ಕೆಲವು ಪರಿಚಯು ಇವೆ. ತಮ್ಮ ತಾಲ್ಲೂಕುವೈಸ್ ಕೆಲಸ ಮಾಡಿರತಕ್ಕ ಗ್ರಾಮ ಮಟ್ಟದ ವ್ಯವಸ್ಥೆ ಸಹಕಾರ ಸಂಘಗಳು ವಯಬಲ್ ಯೂನಿಟ್ಸ್ ಒಬ್ಬ ಗುಮಾಸ್ತನನ್ನು ಇಟ್ಟುಕೊಂಡು ಕನಿಷ್ಟ ಒಂದೂವರೆ ಲಕ್ಷ ರೂಪಾಯಿಗಳ ವ್ಯವಹಾರ ಮಾಡಿ ರೈತನಿಗೆ ಸಾಲ ಕೊಡು ವುದಕ್ಕೆ ಶಕ್ತಿಯುತವಾಗಿರತಕ್ಕ ಸಹಕಾರ ಸಂಘಗಳು ಎಷ್ಟು ? ಇದನ್ನು ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಬೇಕು. ನನ್ನ ತಾಲ್ಲೂಕಿನಲ್ಲಿ ೪ ಸಹಕಾರ ಸಂಘಗಳು ಇಡೀ ತಾಲ್ಲೂಕಿಗೆ ಕೆಲಸ ಮಾಡಲಿಕ್ಕೆ ಸಾಧ್ಯವಾಗಿದೆ. ಉತ್ತರ ಕನ್ನಡ ಜಿಲ್ಲೆ ವ್ಯವಸ್ಥಿತವಾಗಿ ಮಾಡುತ್ತಿತ್ತು, ಅದೂ ಇವತ್ತು ಹಾಳಾಗಿದೆ, ಅದೇರೀತಿ ದಕ್ಷಿಣ ಕನ್ನಡ ಜಿಲ್ಲೆಯ ಸಹಕಾರೀ ಕ್ಷೇತ್ರದಲ್ಲಿ ವ್ಯವಸ್ಥಿತವಾಗಿ ಕೆಲಸ ನಡೆಯುತ್ತಿತ್ತು ಇವತ್ತು ಅದೂ ಸಹ ಹಾಳಾಗಿದೆ. ಧಾರವಾಡಜಿಲ್ಲೆ ಮತ್ತು ಬೆಳಗಾಂ ಜಿಲ್ಲೆ ಗಳು ಸಹ ಅದೇ ರೀತಿ ಆಗಿವೆ. ನಾನು ಏತಕ್ಕೆ ಇದನ್ನು ಹೇಳುತ್ತೇನೆಂದರೆ, ನಾನು ರಾಜಕೀಯ ವನ್ನು ಇಲ್ಲಿ ಬೆರಸುವುದಿಲ್ಲ, ನಾನು ಸಹಕಾರ ಮಂತ್ರಿಯಾಗಿದ್ದಾಗ ಇದೇ ಸದನದಲ್ಲಿ ಸದಸ್ಯರಾಗಿದ್ದ ಮಾನ್ಯ ಎಚ್. ಡಿ. ಚೌಡಯ್ಯನವರು ಅಂದು ನಮ್ಮ ಪಕ್ಷದಲ್ಲಿರಲಿಲ್ಲ, ಅವರು ಮಂಡ್ಯ ಜಿಲ್ಲಾ ಬ್ಯಾಂಕಿನ ಅಧ್ಯಕ್ಷರಾಗಿದ್ದರು, ನಾನು ಅವರ ಬ್ಯಾಂಕಿನ ಬಗ್ಗೆ ಮೆಚ್ಚಿಗೆಯನ್ನು ವ್ಯಕ್ತಮಾಡಿದ್ದೇನೆ. ಅದೊಂದು ಜಿಲ್ಲಾ ಬ್ಯಾಂಕನ್ನು ಬಿಟ್ಟರೆ ಹಳೇ ಮೈಸೂರಿನಲ್ಲಿ ವ್ಯವಸ್ಥಿತವಾಗಿ ಕೆಲಸಮಾಡತಕ್ಕ ಬ್ಯಾಂಕುಗಳು ಇಲ್ಲವೆನ್ನುವ ಮಾತನ್ನು ಹೇಳಿದ್ದೇನೆ. ತಾವೇ ಅಧ್ಯಕ್ಷರಾಗಿ ಕೆಲಸ ಮಾಡಿದಂತಹ ಬ್ಯಾಂಕನ್ನು ೬೪ನೇ ಕಲಂ ಪ್ರಕಾರ ಅನ್ಯಾಯ ನಡೆದಿದೆ ಎಂದು ಎನ್‌ಕ್ವಾಯರಿ ಮಾಡಲಿಕ್ಕೆ ಹೊರಟಿದ್ದೀರಿ, ಯಾವ ಕಾರಣದಿಂದ ಹೊರಟಿದ್ದೀರಿ ? ಡಿಪಾಸಿಟ್ ಇಟ್ಟಿರತಕ್ಕವರ ಪರಿಸ್ಥಿತಿ ಏನಾಗುತ್ತದೆ. ಎರಡು ಮೂರುವರ್ಷಗಳಿಂದ ಎಷ್ಟೋ ಜನಗಳ ಡಿಪಾಸಿಟ್ ಇದೆ. ತಾವೇ ಅಧ್ಯಕ್ಷರಾಗಿದ್ದಂತಹ ಬ್ಯಾಂಕು ತಮಗೆ ಗೊತ್ತಿದೆ ಏತಕೋಸ್ಕರ ಆಗಿದೆ ಎನ್ನುವುದು, ಒಂದೊಂದು ಸಾರಿ ಒಳ್ಳೆಯ ಅಧಿಕಾರಿಗಳು ಇರುತ್ತಾರೆ, ಆದರೂ ಕೂಡ ನೀವು ಯಾರದೋ ಒತ್ತಡಕ್ಕೆ ಸಿಲುಕಿ ಈ ರೀತಿ ಮಾಡುವುದಕ್ಕಾಗುತ್ತದೆಯೋ ? ನನಗೆ ಗೊತ್ತಿದೆ, ಬೆಂಗಳೂರಿನಲ್ಲಿ ವ್ಯವಸ್ಥಿತ ವಾಗಿ ಸೇವೆ ಮಾಡಿರತಕ್ಕ ಸಹಕಾರ ಸಂಘ ಎಂದರೆ ಅದೇ ಚೆನ್ನಾಗಿ ಕೆಲಸ ಮಾಡಿದೆ. ಡೆಪ್ಯೂಟಿ ರಿಜಿಸ್ಟ್ರಾರ್‌ರವರು ನಮ್ಮ ಜಿಲ್ಲೆಯಲ್ಲೂ ಸಹ ಇದ್ದರು ಆಗ ಅವರು ಚಿಕ್ಕ ಅಧಿಕಾರಿಗಳಾಗಿದ್ದರು ಚೆನ್ನಾಗಿ ಕೆಲಸಮಾಡುತ್ತಾರೆ. ಈಗ ಅವರನ್ನು ಒತ್ತಾಯ ಮಾಡಿ ತಾವು ಅಧ್ಯಕ್ಷರಾಗಿದ್ದಂತಹ ಬ್ಯಾಂಕನ್ನು ಸೂಪರ್‌ಸೀಡ್ ಮಾಡಲಿಕ್ಕೆ ಹೊರಟಿದ್ದೀರಿ, ಅವರು ಹೈಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡಿದ್ದಾರೆ ಇದನ್ನು ಏತಕ್ಕೆ ಮಾಡುತ್ತೀರಿ ? ಸಹಕಾರಿ ಕ್ಷೇತ್ರದಲ್ಲಿ ಹಾಗೆ ಹೀಗೆ ಎಂದು ದೊಡ್ಡದಾಗಿ ಭಾಷಣ ಮಾಡುತ್ತೇವೆ, ಸಮ್ಮೇಳನಗಳನ್ನು ಮಾಡುತ್ತೇವೆ, ಸಹಕಾರ ಸಂಘಗಳಲ್ಲಿ ಹಸ್ತಕ್ಷೇಪ ಮಾಡಕೂಡದು ಹಾಗೆ, ಹೀಗೆ, ಎಂದು ಹೇಳುತ್ತೇವೆ. ಇಲ್ಲಿ ಸೆಕ್ಷನ್ ೩೦ (ಎ) ಇರತಕ್ಕದ್ದು ಎಂದು ಹೇಳುತ್ತಾರೆ ನಾನು ಒಪ್ಪುತ್ತೇನೆ. ಸೆಕ್ಷನ್ ೩೦ (ಎ) ನಾನೇ ಒಪ್ಪಿ (ಎ)ನ್ನು ನನ್ನ ಕಾಲದಲ್ಲೇ ತರಲಾಯಿತು. ಏಕೆಂದರೆ ಬೀದರ್ ಜಿಲ್ಲೆ ಬಿಟ್ಟರೆ ರಾಯಚೂರು, ಬಳ್ಳಾರಿ, ಜಿಲ್ಲಾ ಬ್ಯಾಂಕುಗಳಲ್ಲಿ ಒಂದು ಬಿಡಿಗಾಸು ಕೂಡ ವಸೂಲಿ ಮಾಡುವುದಕ್ಕೆ ಸಾಧ್ಯವಾಗದ ಪರಿಸ್ಥಿತಿ ಇತ್ತು. ಒಂದೊಂದು ಸಾರಿ ಪದ ಬಳಸಬೇಕಾದರೆ ಯಾವ ಪದ ಬಳಸಬೇಕು ಎಂದು ಯೋಚನೆ ಮಾಡಬೇಕಾಗುತ್ತದೆ. ಹೆಗ್ಗಣಗಳೇ ಬಂದಿವೆ ಎಂದು ಹೇಳಬೇಕಾಗುತ್ತದೆ. ಅಲ್ಲಿ ಏನು ಮಾಡಿದ್ದಾರೆಂದರೆ ವೆಂಕಾ, ತಿಮ್ಮ, ಬೊಮ್ಮ, ಶೀನ ಎಂದು ಇದು ೧೯೫೯, ೬೧ನೇ ಇಸವಿಯಿಂದ ಸತತವಾಗಿ ನಡೆದುಕೊಂಡು ಬಂದಿದೆ.

ಇವತ್ತಿನ ದಿವಸ ನಿಮ್ಮಿಂದ ಹಣ ವಸೂಲಿ ಮಾಡಲಿಕ್ಕೆ ಸಾಧ್ಯವಾಗಿಲ್ಲ. ಎಕ್ಸಿಕ್ಯೂಷನ್‌ನಲ್ಲಿರತಕ್ಕ ಹಣ ಎಷ್ಟು? ಅದರ ಬಡ್ಡಿ ಎಷ್ಟು? ಇವರು ಎಲ್ಲಾ ಕಡೆಗೂ ಇದ್ದಾರೆ. ಲೈಕ್‌ಮೈಂಡೆಡ್, ಇವರೆಲ್ಲಾ ಸೋಶಿಯಲಿಸ್ಟ್, ಕಮ್ಯುನಿಸ್ಟ್ ಇದ್ದಹಾಗೆ. ಜಾತಿ ಮತ ದೇಶ, ಯಾವುದೂ ಇಲ್ಲ, ಕೋ-ಆಪರೇಟೀವ್, ಸಂಸ್ಥೆಗಳನ್ನು ಅಪರೇಟ್ ಮಾಡುವಾಗ ಕೇವಲ ಅಪರೇಟಿವ್ ಎಂದು, ಇವರೆಲ್ಲಾ ಒಂದೇ ಜಾತಿ ಅಲ್ಲಿರತಕ್ಕವರೆಲ್ಲ ಒಂದೇ ಜಾತಿ. ೩೮ ಲಕ್ಷದ ೯೧ ಸಾವಿರದ ೯೮೩ ಪಿಟೀಷನ್‌ಗಳು ೬೦ ಕೋಟಿ ೮೮ ಲಕ್ಷದ ೭೬ ಸಾವಿರ ರೂಪಾಯಿಗಳು ವಸೂಲಾಗದೆ ಇರತಕ್ಕ ಹಣ. ಇದಕ್ಕೆ ಯಾರು ಜವಾಬ್ದಾರರು ಅಧಿಕಾರಿಗಳು ಏತಕ್ಕೆ ಇರಬೇಕು? ನನ್ನ ಕಾಲದಲ್ಲಿ ಜಾಯಿಂಟ್ ರಿಜಿಸ್ಟ್ರಾರ್‌ಗೆ ಬಂದು ನಿಂತು ಹೋಗಿಬಿಡುತ್ತಿದ್ದರು. ಅವರ ಸಿ. ಆರ್. ಗಳನ್ನು ಆ ತರಹ ಮಾಡಿಬಿಡುತ್ತಿದ್ದರು. ಎಲ್ಲಾ ಇಲಾಖೆಗಳಲ್ಲಿಯೂ ಐ. ಎ. ಎಸ್. ಅಧಿಕಾರಿಗಳನ್ನು ನಾವು ಮಾಡಿ ಇಟ್ಟಿದೇವೆ. ಅಲ್ಲಿ ಕಾರಣಾಂತರಗಳಿಂದ ಒಳ್ಳೆಯ ಅಧಿಕಾರಿಗಳು ಬಹಳ ಕಾಲ ಅಲ್ಲಿ ಇರಲಿಲ್ಲ. ಮೊದಲು ಅಲ್ಲಿ ಒಬ್ಬರು ಪಾಟೀಲರು ಇದ್ದರು, ತದನಂತರ ಮರಿದೇವೇಗೌಡರು, ತಮ್ಮಯ್ಯನವರು, ಟಿ. ವಿ. ರೆಡ್ಡಿಯವರು ಬಂದಿದ್ದರು. ಅಲ್ಲಿಂದ ಮುಂದೆ ಸತತವಾಗಿ ಐ. ಎ. ಎಸ್. ಅಧಿಕಾರಿಗಳೇ ಇದ್ದಾರೆ. ಅಲ್ಲಿ ರಿಜಿಸ್ಟ್ರಾರ್‌ಗಳಾಗಿ ಬರುತ್ತಾರೆ ಎರಡು ಮೂರು ತಿಂಗಳುಗಳಲ್ಲೇ ಬೇರೆ ಕಡೆ ಹೋಗುತ್ತಾರೆ. ಅಲ್ಲಿಯೇ ಕೆಲಸಮಾಡತಕ್ಕವರಿಗೆ ಜಾಯಿಂಟ್ ರಿಜಿಸ್ಟ್ರಾರ್ ಆದಮೇಲೆ ಮುಂದಕ್ಕೆ ಪ್ರಮೋಷನ್ ಇರಲಿಲ್ಲ. ಅಲ್ಲಿಗೆ ನಿಂತು ಹೋಗುತ್ತಿತ್ತು, ಅಡಿಶನಲ್ ರಿಜಿಸ್ಟ್ರಾರ್ ಹುದ್ದೆ ಕ್ರಿಯೇಟ್ ಮಾಡಲಾಯಿತು ವ್ಯವಸಾಯ ಇಲಾಖೆಯಲ್ಲಿ ಅಡಿಶನಲ್ ಹುದ್ದೆ ಕ್ರಿಯೇಟ್ ಮಾಡಿದರು ಇವತ್ತು ಇಲಾಖೆಯಲ್ಲಿ ೬೦ ಕೋಟಿ ರೂಪಾಯಿಗಳು ವಸೂಲಿಯಾಗದೆ ನಿಂತಿದೆ ಇದನ್ನು ವಸೂಲಿ ಮಾಡಲಿಕ್ಕೆ ಸಾಧ್ಯವಿದೆಯೇ ತಿಮ್ಮ, ಬೊಮ್ಮ, ಶೀನ, ಎಂದು ಬರೆದು ಅವರಿಂದ ಹೆಬ್ಬೆಟ್ಟು ರುಜು ಹಾಕಿಸಿಕೊಂಡು ಸಾಲ ಕೊಡಲಾಗಿದೆ ಅವರಿಂದ ಸಾಲ ವಸೂಲಿ ಮಾಡಲಿಕ್ಕೆ ಎಷ್ಟು ವರ್ಷಗಳು ಬೇಕು? ನಿಮ್ಮ ಎನ್‌ಕ್ವಾಯರಿ ಸೆಲ್ ಏನು ಕೆಲಸ ಮಾಡುತ್ತಿದೆ?

ಮಾನ್ಯ ಅಧ್ಯಕ್ಷರೇ ತಾವು ಇವತ್ತು ಎಲ್ಲಾ ಜಿಲ್ಲಾ ಬ್ಯಾಂಕ್‌ಗಳಿಗೂ ಸೆಕ್ಷನ್ ೬೦ರ ಪ್ರಕಾರ ನೋಟೀಸ್ ಕೊಟ್ಟಿದ್ದೀರಿ, ಆ ರೀತಿ ತಾವು ನೋಟೀಸ್ ಕೊಟ್ಟರೆ ತಮ್ಮ ಡಿಪಾಜಿಟ್ ಹಣಕ್ಕೆ ಅಲ್ಲಿ ತೊಂದರೆ ಬರುತ್ತದೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ತಾವು ನಮ್ಮ ಕೆಲಸಕ್ಕೆ ಶಹಬಾಷ್ ಗಿರಿಯನ್ನು ಕೊಡಬೇಕೆಂದು ಹೇಳಿದ್ದಕ್ಕೆ ಈ ಮಾತನ್ನು ಹೇಳಬೇಕಾಯಿತು. ಇವತ್ತು ಎಷ್ಟು ಜಿಲ್ಲಾ ಬ್ಯಾಂಕ್‌ಗಳು ಡಿಫಾಲ್ಟ್ ಆಗಿವೆ ಎನ್ನುವುದಕ್ಕೆ ತಮ್ಮ ಹತ್ತಿರ ಏನಾದರೂ ಲೆಕ್ಕ ಇದೆಯೇ? ಮಾನ್ಯ ಬಿ.ಜಿ. ಬಣಕಾರರು ಈ ಸದನದಲ್ಲಿ ಒಂದು ಪ್ರಶ್ನೆಯನ್ನು ಕೇಳಿದಾಗ ಅದಕ್ಕೆ ಮಾನ್ಯ ಮಂತ್ರಿಗಳು ಸುಮಾರು ೪೦೦ ಇವೆ ಎಂದು ಉತ್ತರ ಕೊಟ್ಟಿದ್ದು ನನಗೆ ಜ್ಞಾಪಕ ಇದೆ. ಆದ್ದರಿಂದ ನಾನು ಇವತ್ತು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ತಮ್ಮ ಇಲಾಖೆಯಲ್ಲಿರುವಂಥ ಅಧಿಕಾರಿಗಳು ಏನು ಮಾಡುತ್ತಾರೆ? ಮೇಲಿನ ಅಧಿಕಾರಿಗಳು ಕೆಳಗಿನ ಅಧಿಕಾರಿಗಳ ಮೇಲೆ ಹತೋಟಿ ಇರುವುದಿಲ್ಲವೇ? ಮತ್ತೆ ಜಿಲ್ಲಾ ಬ್ಯಾಂಕ್‌ಗಳಲ್ಲಿ ಯಾರು ಯಾರು ಸಾಲವನ್ನು ಪಡೆದುಕೊಂಡಿರುತ್ತಾರೋ ಅವರೆಲ್ಲರೂ ಜೂನ್ ೩೦ನೇ ತಾರೀಖಿನೊಳಗೆ ಕೊಡಬೇಕೆಂದು ತಾವು ಒಂದು ಆಜ್ಞೆಯನ್ನು ಹೊರಡಿಸಿದ್ದೀರಿ. ಆದರೆ ಆ ಅವಧಿಯೊಳಗಾಗಿ ತಾವು ಎಷ್ಟು ಸಾಲವನ್ನು ವಸೂಲು ಮಾಡಿದ್ದೀರಿ? ತಾವು ಕೊಟ್ಟಿರತಕ್ಕಂಥ ವರದಿಯನ್ನು ನೋಡಿದಾಗ ಅದರಲ್ಲಿ ಸುಮಾರು ೧೬ ಜಿಲ್ಲೆಗಳಲ್ಲಿ ಬರಗಾಲ ಪರಿಸ್ಥಿತಿ ಇದೆಯೆಂದು ಹೇಳಿದ್ದೀರಿ. ಆದರೆ ರೈತರು ಬರಗಾಲ ಪರಿಸ್ಥಿತಿಯಲ್ಲಿ ಇರುವಾಗ ಆತ ಪಡೆದುಕೊಂಡಿರತಕ್ಕಂಥ ಸಾಲವನ್ನು ಯಾವ ರೀತಿಯಲ್ಲಿ ಮರುಪಾವತಿ ಮಾಡುವುದಕ್ಕೆ ಆಗುತ್ತದೆ? ಇವತ್ತು ಜಿಲ್ಲಾ ಬ್ಯಾಂಕುಗಳೇ ದುಸ್ಥಿತಿಯಲ್ಲಿವೆ. ಆದರೆ ಇನ್ನು ಉಳಿದ ಪ್ರಾಥಮಿಕ ಬ್ಯಾಂಕ್‌ಗಳು ಯಾವ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಆಗುತ್ತದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ಅರ್ಥ ಮಾಡಿಕೊಳ್ಳಬೇಕು. ತಾವು ಇವತ್ತು ರೈತರಿಗೆ ಅಲ್ಪಾವಧಿ ಸಾಲ ಮತ್ತು ಧೀರ್ಘಾವಧಿ ಸಾಲವೆಂದು ಕೊಡುತ್ತೀರಿ. ಆದರೆ ತಮ್ಮ ತಾಲ್ಲೂಕಿನಲ್ಲಿ ತಾವು ಎಷ್ಟು ಪ್ರಮಾಣದ ಹಣವನ್ನು ವಸೂಲಿ ಮಾಡಿಸಿದ್ದೀರಿ? ಸ್ವಾಮಿ, ನಾನು ಈ ಸಂದರ್ಭದಲ್ಲಿ ಒಂದು ವಿಷಯವನ್ನು ಮಾನ್ಯ ಸದನದ ಗಮನಕ್ಕೆ ತರಬಯಸುತ್ತೇನೆ. ಈಗ ಒಬ್ಬ ರೈತ ಒಂದು ಸೊಸೈಟಿಯಲ್ಲಿ ಸುಮಾರು ೧೫೦೦ ರೂಪಾಯಿಗಳನ್ನು ಸಾಲ ಪಡೆದುಕೊಂಡಿರುತ್ತಾನೆ. ಆತ ಆ ಸಾಲವನ್ನು ತೀರಿಸಲು ಮತ್ತೆ ೧೫೦೦ ರೂಪಾಯಿಗಳನ್ನು ಬೇರೆಯವರಿಂದ ಪಡೆದುಕೊಂಡು, ಆ ಹಣವನ್ನು ವಾಪಸ್ಸು ಕೊಡುವುದಕ್ಕೆ ಮತ್ತೆ ಸಾಲ ಮಾಡಿಯೇ ಆತನಿಗೆ ವಾಪಸ್ಸು ಕೊಡಬೇಕು. ಇದರಿಂದ ಏನಾಗುತ್ತದೆ ಎಂದರೆ ಅವನು ೧೫೦೦ ರೂಪಾಯಿಗಳನ್ನು ಸಾಲವಾಗಿ ಪಡೆದರೆ ಆ ಸಾಲವನ್ನು ಅವನು ಮತ್ತೆ ಸಾಲ ಮಾಡಿಯೇ ತೀರಿಸಬೇಕಾಗುತ್ತದೆ. ಅವನು ಸೊಸೈಟಿಗೆ ನಾಲ್ಕೈದು ಸಾರಿ ಸುತ್ತಬೇಕಾದರೆ

ಸುಮಾರು ೨೫೦ ರೂಪಾಯಿಗಳು ಖರ್ಚಾಗಿರುತ್ತದೆ. ಮತ್ತೆ ೧೦೦೦ ರೂಪಾಯಿಗಳು ಸೊಸೈಟಿ ಸಾಲ ಕಟ್ಟಿ ಇನ್ನು ಉಳಿದ ೨೫೦ ರೂಪಾಯಿಗಳಲ್ಲಿ ಆ ದಿವಸ ಆತನು ಬಿರ್ಯಾನಿಗಿರ್ಯಾನಿ ತಿಂದು ತಂಪಾಗಿ ಮನೆಗೆ ಹೋಗುತ್ತಾನೆ. ಈ ರೀತಿ ಮಾಡಿ ಇವತ್ತು ಸುಮಾರು ಜನ ಸೊಸೈಟಿಯ ಸಾಲವನ್ನು ತೀರಿಸಿದ್ದಾರೆ. ಇವತ್ತು ಒಂದು ತಾಲ್ಲೂಕಿನಲ್ಲಿ ಸುಮಾರು ೨೫–೩೦ ಸೊಸೈಟಿಗಳು ಬರುತ್ತವೆ, ಆ ಎಲ್ಲಾ ಸೊಸೈಟಿಗಳಿಗೂ ಒಬ್ಬ ಅಧಿಕಾರಿ ಇರುತ್ತಾನೆ, ಈ ಸೊಸೈಟಿಗಳಲ್ಲಿ ಸಾಲವನ್ನು ಪಡೆದು ಕೊಂಡವರು ಆ ಅಧಿಕಾರಿಗಳಿಗೂ ಕೂಡ ಶೇಕಡ ಒಂದು ಪರ್ಸೆಂಟ್ ಅಥವಾ ಎರಡು ಪರ್ಸೆಂಟ್ ಕಮಿಷನ್ ಕೊಡಬೇಕು. ರೈತನು ಸಾಲವನ್ನು ತೆಗೆದುಕೊಂಡು ಅಭಿವೃದ್ಧಿ ಮಾಡಿ ಮತ್ತೆ ಸಾಲ ವನ್ನು ವಾಪಸ್ಸು ಕೊಡುವುದಾದರೂ ಏನು? ಅವರು ಎಷ್ಟು ಖರ್ಚು ಮಾಡಬೇಕೋ ಅಷ್ಟು ಹಣವನ್ನು ಖರ್ಚು ಮಾಡದೆ ಸೇವಿಂಗ್ಸ್ ಮಾಡಿದ್ದಾರೆಂದು ಹೇಳಿದ್ದಾರೆ. ಆದರೆ ಅವರ ಸಿಬ್ಬಂದಿ ವರ್ಗಕ್ಕೆ ಎಷ್ಟು ಹಣ ಇಟ್ಟಿದ್ದಾರೆಯೋ ಅಷ್ಟು ಹಣವನ್ನು ಸಹ ಖರ್ಚು ಮಾಡಿದ್ದಾರೆ. ಅದರಲ್ಲಿ ಮಾತ್ರ ಹಣವನ್ನು ಉಳಿಸುವುದಿಲ್ಲಾ. ಆದರೆ ಅವರಿಗೆ ಏನೇನು ಸೌಲಭ್ಯಗಳು ಬೇಕೋ ಆ ಎಲ್ಲಾ ಸೌಲಭ್ಯಗಳನ್ನು ಅವರು ಒದಗಿಸಿಕೊಂಡಿದ್ದಾರೆ. ಇವರಿಗೆ ಇಟ್ಟಿರತಕ್ಕಂಥ ಹಣ ಸುಮಾರು ೩೬೪ ಕೋಟಿ ರೂಪಾಯಿಗಳು. ಆದರೆ ಖರ್ಚು ಮಾಡಿರತಕ್ಕಂಥ ಹಣ ೩೬೨ ಕೋಟಿ ರೂಪಾಯಿಗಳು. ಆದರೆ ಮಾನ್ಯ ಮಂತ್ರಿಗಳಿಗೆ ನಾನು ಇನ್ನೊಂದು ಸಲಹೆಯನ್ನು ಕೊಡಬಯಸುತ್ತೇನೆ. ತಮ್ಮ ಚುನಾವಣೆಯ ಪದ್ಧತಿಯನ್ನು ತಾವು ಸಂಪೂರ್ಣವಾಗಿ ಬದಲಾವಣೆ ಮಾಡಬೇಕು. ಕಾರಣವೇನೆಂದರೆ ಇವತ್ತು ಯಾರು ಬೇಕಾದರೂ ಷೇರುದಾರರಾಗಿದ್ದರೆ ಅವರು ಜಿಲ್ಲಾ ಬ್ಯಾಂಕ್ ಅಧ್ಯಕ್ಷರಾಗಬಹುದು. ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾಗಬಹುದು. ಷುಗರ್ ಫ್ಯಾಕ್ಟರಿ ಅಧ್ಯಕ್ಷರಾಗಬಹುದು. ಅವನು ಒಂದು ಸಾರಿ ೧೦೦ ರೂಪಾಯಿಗಳನ್ನು ಖರ್ಚು ಮಾಡಿದರೆ ಯಾವ ಬ್ಯಾಂಕ್ ಅಧ್ಯಕ್ಷನಾದರೂ ಕೂಡ ಆಗಬಹುದು. ಒಬ್ಬ ಸದಸ್ಯರೇ ೭–೮ ವರ್ಷಗಳ ಕಾಲ ಅಧ್ಯಕ್ಷರಾಗಿರುತ್ತಾರೆ. ಆದ್ದರಿಂದ ಈ ಚುನಾವಣೆಯ ಪದ್ಧತಿಯನ್ನು ಬದಲಾವಣೆ ಮಾಡಬೇಕು, ಅವರಲ್ಲಿ ಮಾತನಾಡಿಕೊಂಡು ಬೇರೆ ಯವರಿಗೆ ಅವಕಾಶ ಕೊಡುವುದಿಲ್ಲ. ಆ ಸೊಸೈಟಿಯನ್ನು ಮುಳುಗಿಸುವುದಕ್ಕೆ ಎಷ್ಟು ಏರ್ಪಾಡು ಬೇಕೋ ಅಷ್ಟು ಏರ್ಪಾಡನ್ನು ಸಹ ಮಾಡಿಕೊಂಡಿರುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಒಂದು ವರ್ಷ ಅವಕಾಶ ಸಿಕ್ಕಿದರೆ ಸಾಕು ಎಷ್ಟು ಬೇಕೋ ಅಷ್ಟು ಮುಳುಗಿಸುತ್ತಾರೆ.

ಶ್ರೀ ಚನ್ನಬಸವನಗೌಡ.—ಮಾನ್ಯ ಅಧ್ಯಕ್ಷರೇ, ಸುಮಾರು ೮ ವರ್ಷಗಳಿಂದ ನಡೆಯದೆ ಇರ ತಕ್ಕಂಥ ಅವ್ಯವಹಾರ ಈ ವರ್ಷದಲ್ಲಿಯೇ ನಡೆದಿದೆಯೇ

ಶ್ರೀ ಕೆ.ಹೆಚ್. ರಂಗನಾಥ್.—ನಾನು ಈ ವರ್ಷದಲ್ಲಿಯೇ ಇಷ್ಟೊಂದು ಅವ್ಯವಹಾರ ನಡೆದಿದೆ ಯೆಂದು ಹೇಳಲಿಲ್ಲ......

ಶ್ರೀ ಎಸ್.ಆರ್. ಲಕ್ಷ್ಮಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ಖಾತೆಯ ಮಂತ್ರಿ ಗಳಾಗಿದ್ದಾಗ ಶ್ರೀ ಮಾನ್ ಕೆ. ಹೆಚ್. ಪಾಟೀಲ್‌ರವರ ವರದಿಯು ಸರ್ಕಾರದ ಕೈ ಸೇರಿತ್ತು. ಆಗ ಅವರು ಚುನಾವಣೆಯ ಪದ್ಧತಿಯನ್ನು ಬದಲಾವಣೆ ಮಾಡಬೇಕೆಂದು ಹೇಳಿದ್ದೀರಾ?

ಶ್ರೀ ಕೆ.ಹೆಚ್. ರಂಗನಾಥ್.—ಸ್ವಾಮಿ ಆ ವರದಿ ನನ್ನ ಕಾಲದಲ್ಲಿ ಬರಲಿಲ್ಲ. ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಕಾನೂನು ಮಂತ್ರಿಗಳಿಗೆ ಹೇಳಿ ಕೋ–ಅಪರೇಟಿವ್ ಸೊಸೈಟೀಸ್ ಆಕ್ಟನ್ನು ಕನ್ನಡಕ್ಕೆ ತರ್ಜುಮೆ ಮಾಡಿಸಬಾರದೆ? ನಮ್ಮ ಲೈಬ್ರರಿಯಲ್ಲಿ ಆ ಆಕ್ಟ್‌ಗೆ ಸಂಬಂಧಪಟ್ಟ ಒಂದು ಪುಸ್ತಕವೂ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ ಇದನ್ನು ಸರ್ಕಾರದ ಮುದ್ರಣಾಲಯದಲ್ಲಿ ಮುದ್ರಿಸಲು ಸಾಧ್ಯವಾಗದಿದ್ದಕ್ಕೆ ನಾವು ಖಾಸಗೀಯವರಿಗೆ ಕೊಟ್ಟು ಮುದ್ರಿಸುತ್ತಿದ್ದೇವೆ. ಆದಷ್ಟು ಬೇಗ ಎಲ್ಲಾ ಪುಸ್ತಕಗಳು ಬರುತ್ತವೆ.

ಶ್ರೀ ಕೆ.ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಆದ್ದರಿಂದ ನಾನು ಅವರಿಗೆ ಒಂದು ಸಲಹೆಯನ್ನು ಮಾಡುತ್ತೇನೆ. ಅದು ಏನೆಂದರೆ ಅವರು ಆದಷ್ಟು ಬೇಗ ಒಂದು ಹೆಣ್ಣು ಹುಡುಕಿ ಒಂದು ಮದುವೆ ಮಾಡಿಕೊಂಡರೆ ಒಳ್ಳೆಯದು. ಕಾರಣವೇನೆಂದರೆ ಅವರ ಜೊತೆಯಲ್ಲಿದ್ದವರಿಗೆ ಕೆಲವರಿಗೆ ಆಗಲೇ ಮದುವೆಯಾಗಿದೆ. ಅವರಿಗೆ

ನಾನು ಅನೇಕ ವರ್ಷಗಳಿಂದ ಈ ಮಾತನ್ನು ಹೇಳಿ ಹೇಳಿ ಸಾಕಾಯಿತು. ಆದ್ದರಿಂದ ಈಗ ಅವರಿಗೆ ಒಂದು ಒಳ್ಳೆಯ ಗಂಧದ ಹಾರವನ್ನು ತರಿಸಿ ಹಾಕುತ್ತೇನೆ, ಆದಷ್ಟು ಬೇಗ ಮುದ್ರಿಸಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ಮಾನ್ಯ ಸದಸ್ಯರು ಪ್ರತಿ ವರ್ಷ ನನಗೆ ಈ ಮಾತನ್ನು ಹೇಳುತ್ತಲೇ ಇರುತ್ತಾರೆ. ಮದುವೆ ಮಾಡಿಕೊಳ್ಳಬೇಕಾದವನು ನಾನು. ನನಗೆ ಆ ಬಗ್ಗೆ ಆಸಕ್ತಿ ಇಲ್ಲ. ಆದ್ದರಿಂದ ಅವರು ಅಷ್ಟು ಶ್ರಮ ಪಡುವುದು ಬೇಡ. ನನ್ನ ಬಗ್ಗೆ ಹೇಳುವುದನ್ನು ಬಿಟ್ಟು ಅವರು ಈ ಸದನದಲ್ಲಿ ಒಳ್ಳೆಯ ಸಲಹೆಗಳನ್ನು ಕೊಡಲೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ —ಸ್ವಾಮಿ ನನಗೆ ಮೊದಲೇ ಗೊತ್ತಿದ್ದರೆ ನಾನು ಯಾವುದಾದರೊಂದು ಹೆಣ್ಣು ಹುಡುಕಿ ಅವರಿಗೆ ಮದುವೆ ಮಾಡಿಸುತ್ತಿದ್ದೆ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ ಮದುವೆ ಮಾಡಿಕೊಳ್ಳಲು ನಾನು ಪ್ರಯತ್ನ ಮಾಡಬೇಕೇ ಹೊರತು ಬೇರೆಯವರು ಎಷ್ಟು ಪ್ರಯತ್ನ ಪಟ್ಟರೂ ಅದು ಆಗುವುದಿಲ್ಲ

ಶ್ರೀ ಜೆ.ಹೆಚ್. ಪಟೇಲ್ —ಮಾನ್ಯ ಅಧ್ಯಕ್ಷರೇ, ನನಗೆ ಒಂದು ಇಂಗ್ಲೀಷ್ ಗಾದೆ ಜ್ಞಾಪಕಕೆ ಬರುತ್ತದೆ ಅದು ಏನೆಂದರೆ Married ones are likely to repent, unmarried ones are sure to repent.

SRI A. LAKSHMISAGAR.—I don't mind repenting but married people are repenting.

ಶ್ರೀ ಪಿ. ರಾಮದೇವ್.—ಕಳೆದ ಐದಾರು ದಿವಸಗಳಿಂದ ಈ ಮಾತನ್ನು ಪದೇ ಪದೇ ನಮ್ಮ ಬಗ್ಗೆ ಆಡುತ್ತಲೇ ಬಂದಿದ್ದಾರೆ.

ಅಧ್ಯಕ್ಷರು.—ನಿಮ್ಮ ಬಗ್ಗೆ ಅಲ್ಲ, ಲಕ್ಷ್ಮೀ ಸಾಗರ್ ಬಗ್ಗೆ ಇವರು ಹೇಳಿದ್ದು.

ಶ್ರೀ ಪಿ. ರಾಮದೇವ್.—ಇಲ್ಲ ಸ್ವಾಮಿ, ನನ್ನ ಬಗ್ಗೆಯೇ ಅವರು ಹೇಳುತ್ತಿದ್ದಾರೆ. ನಮಗೆ ಸರಿಯಾಗಿ ಕೆಲಸ ಮಾಡಲು ಆಗುತ್ತಿಲ್ಲ. ನಾನು ಸಭಾಧ್ಯಕ್ಷರ ರಕ್ಷಣೆ ಕೇಳುತ್ತಿದ್ದೇನೆ.

ಶ್ರೀ ಕೆ. ಎಚ್. ರಂಗನಾಥ್.—ಹೋದ ಸಾರಿ ಇಲ್ಲಿ ಬ್ರಹ್ಮಚಾರಿಗಳ ಒಂದು ದೊಡ್ಡ ಕಂಪನಿ ಇತ್ತು. ಏಳೆಂಟು ಜನರು ಇದ್ದರು. ಆಗ ನಾನು 'ನಿಮ್ಮದೇ ಒಂದು ಪಡೆ ಮಾಡಿಕೊಳ್ಳಿ, ರಾಮದೇವ್‌ರನ್ನು ಲೀಡರ್ ಮಾಡಿಕೊಳ್ಳಿ. ಎಂದು ಹೇಳಿದ್ದೆ. ಕೆಲವರು ಈಗ ಮದುವೆ ಆಗಿಬಿಟ್ಟಿದ್ದಾರೆ. ಕಷ್ಟ ಗೊತ್ತಾದ ಹಾಗೆಲ್ಲಾ ಅವರುಗಳು ಮದುವೆಯಾಗಿಬಿಟ್ಟರು.

SRI A. LAXMISAGAR.—This is the conspiracy of arathi people.

ಡಾ|| ವಿ. ಎಸ್. ಆಚಾರ್ಯ.—ಮಕ್ಕಳಲ್ಲಿ ವಿಸ್ಡಮ್ ಟೀತ್ ಎಂದು ಬರುತ್ತದೆ. ಆದರೆ ಅದು ಶೇಕಡಾ ನಾಲ್ಕು ಜನರಿಗೆ ಅದು ಕೊನೆಯತನಕ ಬರುವುದೇ ಇಲ್ಲ.

ಶ್ರೀ ಎನ್. ಹುಚ್ಚ ಮಾಸ್ತಿ ಗೌಡ.—ಮದುವೆ ಆದವರು ಮಾಡಿಕೊಂಡ ಸಹಕಾರ ಸಂಘಗಳು ಚೆನ್ನಾಗಿ ನಡೆಯುತ್ತವೆ. ಮದುವೆಯಾಗದವರು ಮಾಡಿಕೊಂಡಿದ್ದು ಚೆನ್ನಾಗಿ ನಡೆಯುವುದಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಹಾಗೇನಿಲ್ಲ, ರಾಮದೇವ್ ಅವರು ಇದಕ್ಕೆ ಹೊರತಾಗಿದ್ದಾರೆ. ಮಲ್ಲೇಶ್ವರಂ ಸಹಕಾರ ಸಂಘದಲ್ಲಿ ರಾಮದೇವ್ ಇದ್ದಾರೆ. ಅದು ಚೆನ್ನಾಗಿಯೇ ನಡೆಯುತ್ತಿದೆ. ಅಲ್ಲವೇ, ರಾಮದೇವ್ ಅವರೇ ?

ಶ್ರೀ ಎ. ಲಕ್ಷ್ಮೀಸಾಗರ್.—ರಾಮದೇವ್ ಇರುವ ಸಹಕಾರ ಸಂಘ ಚೆನ್ನಾಗಿ ನಡೆಯುತ್ತದೆ. ಮದುವೆ ಆಗಿದ್ದವರು ಇರುವ ಸಹಕಾರ ಸಂಘಗಳೇ ಚೆನ್ನಾಗಿ ನಡೆಯುವುದಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಎಲ್ಲರೂ ಅವರ ಹಾಗೆ ಇಲ್ಲ. ಅಲ್ಲಿ ಕೃಷ್ಣಪ್ಪನವರು ಇದ್ದಾರೆ.

ಶ್ರೀ ಪಿ. ರಾಮದೇವ್.—ನನ್ನನ್ನು ಮತ್ತು ಕೃಷ್ಣಪ್ಪನವರನ್ನು ದಯಮಾಡಿ ಹೋಲಿಸಬೇಡಿ.

ಶ್ರೀ ಕೆ. ಎಚ್. ರಂಗನಾಥ್.—ಇದೇನು, ಒಬ್ಬರ ಗುಟ್ಟನ್ನು ಇನ್ನೊಬ್ಬರು ತಿಳಿದುಕೊಂಡು ಬಿಟ್ಟಿದ್ದಾರೆ. ಸ್ವಾಮಿ, ಈ ಕಾನೂನನ್ನು ಬದಲಾವಣೆ ಮಾಡತಕ್ಕದ್ದು ಅವಶ್ಯಕತೆ ಇದೆ. ಇವತ್ತು ಅಪೆಕ್ಸ್ ಬ್ಯಾಂಕ್ ಒಳ್ಳೆಯ ಸುಸ್ಥಿತಿಯಲ್ಲಿದೆ. ಲಾಭ ಸಂಪಾದಿಸಿ ಚೆನ್ನಾಗಿದೆ 'ಸ್ವಲ್ಪ ಬಿಗಿಯಿಂದ ಇದ್ದಾರೆ' ಆದರೆ ಇವತ್ತು ತಾಲ್ಲೂಕು ಮಟ್ಟದಲ್ಲಿ ವ್ಯವಸಾಯ ಸೇವಾ ಸಂಘಗಳು ಬಹಳ ದುಸ್ಥಿತಿಯಲ್ಲಿವೆ. They are not in a position to meet the credit requirements of the villages as such. ಇಂತಹ ಪರಿಸ್ಥಿತಿ ಇರುವಾಗ ಗ್ರಾಮೀಣ ಬ್ಯಾಂಕ್‌ಗಳ ಶಾಖೆ ಏಕೆ ತೆರೆಯುವುದು ? ಈ ಪ್ಯಾರಲಲ್ ಇನ್ಸ್ಟಿಟ್ಯೂಷನ್ಸ್ ಏಕೆ ಮಾಡುತ್ತೀರಿ ? ಇವತ್ತು ಪಿ.ಎಲ್.ಡಿ ಬ್ಯಾಂಕ್ ಇಟ್ಟುಕೊಂಡು ಪ್ರಯೋಗ ಮಾಡುತ್ತೇವೆ ಎಂದು ಹೊರಟಿದ್ದೀರಿ. ಅದೇನೆ ಇರಲಿ, ನಮ್ಮ ಜಿಲ್ಲೆಯಲ್ಲಿ ಜಿಲ್ಲಾ ಬ್ಯಾಂಕ್ ಬಹಳ ಚೆನ್ನಾಗಿ ಇದೆ. ಇವತ್ತು ಅದು ನಾಲ್ಕೈದು ಜನರ ಕೈಯಲ್ಲಿ ಇದೆ. ಅವರು ಅಧಿಕಾರಕ್ಕೆ ಬಂದು ಆರು ವರ್ಷ ಆಯಿತು. ಎರಡು ಮೂರು ತಿಂಗಳು ಮಧ್ಯೆ ಬಿಟ್ಟುಬಿಡುತ್ತಾರೆ. ಮತ್ತೆ ಆರು ವರ್ಷಗಳ ಕಾಲ ಇರುತ್ತಾರೆ. ಇವುಗಳ ಉದ್ದೇಶ ಆದರೂ ಏನು ? ಗ್ರಾಮ ಮಟ್ಟದಿಂದ ಹಿಡಿದು ರಾಜ್ಯಮಟ್ಟದವರೆಗೆ ವ್ಯವಸ್ಥಿತವಾಗಿ ನಡೆಯತಕ್ಕಂಥ ರೀತಿಯಲ್ಲಿ ಕೆಲಸ ಮಾಡಬೇಕು. ಹೆಚ್ಚಿನ ಜನರಿಗೆ ಸಹಾಯಕವಾಗುವಂತಹ ರೀತಿಯಲ್ಲಿ ಇರಬೇಕು. ಸ್ವಾಮಿ, ಈಗ ಎಸ್.ಎಫ್.ಡಿ.ಎ. ಎಮ್.ಎಫ್.ಎ.ಎಲ್. ಪ್ರೋಗ್ರಾಂ ಗಳಿವೆ. ಎಸ್.ಎಫ್.ಡಿ.ಎ.ನಲ್ಲಿ ರೈತ ಸಾಲ ತೆಗೆದುಕೊಂಡರೆ ರೈತನಿಗೆ ನೂರಕ್ಕೆ ಇಪ್ಪತ್ತರಷ್ಟು ಸಬ್ಸಿಡಿ ಕೊಟ್ಟಿರುತ್ತಾರೆ. ಆದರೆ ಸಾಲ ತೆಗೆದುಕೊಳ್ಳಲಿಕ್ಕೆ ಸೊಸೈಟಿಯೇ ಇಲ್ಲದೇ ಇರತಕ್ಕ ಪರಿಸ್ಥಿತಿಯಲ್ಲಿ ಅವರು ಯಾವ ರೀತಿಯಲ್ಲಿ ಸಾಲವನ್ನು ತೆಗೆದುಕೊಳ್ಳುತ್ತಾರೆ ? ಕೇಂದ್ರ ಸರ್ಕಾರದವರು ಕೊಡತಕ್ಕ ಅನುಕೂಲದ ಉಪಯೋಗವನ್ನು ಅವರಿಗೆ ಪಡೆದುಕೊಳ್ಳುವುದಕ್ಕೆ ಸಾಧ್ಯ ಆಗಿದೆಯೇ ? ಹರಿಜನರಿಗೆ ಗಿರಿಜನರಿಗೆ ಕೊಟ್ಟಿದ್ದೇವೆ ಎಂಬ ಮಾತನ್ನು ಹೇಳಿದ್ದೇವೆ ಎಂಬ ಮಾತನ್ನು ಹೇಳಿದ್ದೀರಿ. ಹರಿಜನರಿಗೆ ಕೊಟ್ಟಿದ್ದು ಎಷ್ಟು ಸ್ವಾಮಿ ? ತಾಲ್ಲೂಕು ಭೂ ಅಭಿವೃದ್ಧಿ ಬ್ಯಾಂಕು ಹರಿಜನರಿಗೆ ಕೊಟ್ಟಿರುವ ಹಣ ಎಷ್ಟು? ಅರವತ್ನಾಲ್ಕು ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಅದು ಸಾಕೇ ? ಒಂದು ಪೊಟೊಟೊ ಸ್ಕೀಮು ಇಂಟ್ರೋಡ್ಯೂಸ್ ಮಾಡಿದರು. ಮಳೆ ಬಾರದೇ ಇರತಕ್ಕಂಥ ಪ್ರದೇಶದಲ್ಲಿ ಒಂದು ಎಕರೆ, ಎರಡು ಎಕರೆ ಇರತಕ್ಕಂಥವರು ಇದನ್ನು ಮಾಡಿಕೊಳ್ಳಲು ಅನುಕೂಲವಾಗುತ್ತದೆ ಎಂದು ಒಂದು ಪ್ರೋಗ್ರಾಮ್ ಬಂತು. ಆದರೆ ಅದರ ಉಪಯೋಗ ಇವತ್ತಿನ ದಿವಸ ಆಗಿಲ್ಲ. ಇವತ್ತು ವಸೂಲಿಗಾಗಿ ತಮಗೆ ಒಟ್ಟು ಬರತಕ್ಕದ್ದು ಡಿಮ್ಯಾಂಡ್ ಡಿಸಿಸಿ ಬ್ಯಾಂಕ್ ಮುಖಾಂತರ ನಾನು ಡಿಸ್ಟ್ರಿಕ್ಟ್ ವೈಸ್ ಹೇಳುವುದಿಲ್ಲ. ಒಟ್ಟಿನಲ್ಲಿ ನೂರು ಕೋಟಿ ನಾಲ್ಕು ಲಕ್ಷ ಎಂಬತ್ತೊಂದು ಸಾವಿರ ರೂಪಾಯಿ ಡಿಮ್ಯಾಂಡ್ ಇರತಕ್ಕದ್ದು, ಕಲೆಕ್ಷನ್ ಆಗಿರುವುದು ಎಷ್ಟು ಸ್ವಾಮಿ ? ಕಲೆಕ್ಷನ್ ಆಗಿರುವುದು ೨೬ ಕೋಟಿ ೩೭ ಲಕ್ಷ ೧೧ ಸಾವಿರ ಮಾತ್ರ. ಇದು ಮಾರ್ಚ್ ೮೩ರ ಕೊನೆಯವರೆಗೆ ಆಗಿರುವುದು. ನೂರು ಕೋಟಿ ಬರಬೇಕಾಗಿರುವಾಗ, ಹದಿನಾರು ಜಿಲ್ಲೆಗಳು ಕ್ಷಾಮ ಪೀಡಿತವಾಗಿವೆ ಎಂದು ಹೇಳಿದ್ದೀರಿ. ಜಿಲ್ಲಾ ಬ್ಯಾಂಕುಗಳ ಪರಿಸ್ಥಿತಿ ಹೇಗಿದೆ ಎಂದು ತಾವು ಹೇಳಿದ್ದೀರಿ. ಅಂಕಿ ಅಂಶಗಳನ್ನು ಕೊಡುವಾಗ ಬೆಂಗಳೂರು ಡಿವಿಜನ್‌ನಲ್ಲಿ ಬರಬೇಕಾಗಿರುವುದು ಒಟ್ಟು ೧೯ ಕೋಟಿ ೮೩ ಲಕ್ಷ ಇದ್ದರೆ, ೨ ಕೋಟಿ ೮೩ ಲಕ್ಷ ಮಾತ್ರ ವಸೂಲಾಗಿದೆ. ಮೈಸೂರು ಡಿವಿಜನ್ನಿನಲ್ಲಿ ೨೯ ಕೋಟಿ ೨೦ ಲಕ್ಷ ಡಿಮ್ಯಾಂಡ್ ಇದ್ದರೆ ೧೦ ಕೋಟಿ ೯೦ ಲಕ್ಷ ವಸೂಲಾಗಿದೆ. ಇದರಲ್ಲಿ ೭ ಕೋಟಿ ಮಂಡ್ಯ ಜಿಲ್ಲೆಯಿಂದ ಬರುತ್ತದೆ. ಆದ್ದರಿಂದ ಈ ಸಂಖ್ಯೆ ಸ್ವಲ್ಪ ಮೇಲಕ್ಕೆ ಹೋಗಿದೆ. ಮೈಸೂರು ಜಿಲ್ಲೆ ೪೬ ಲಕ್ಷ, ಮಂಡ್ಯ ಜಿಲ್ಲೆ ೫ ಕೋಟಿ ೨೯ ಲಕ್ಷ, ದಕ್ಷಿಣ ಕನ್ನಡ ಜಿಲ್ಲೆ ೯೬ ಲಕ್ಷ ಮತ್ತು ಕೊಡಗು ಜಿಲ್ಲೆಯಲ್ಲಿ ೩ ಕೋಟಿ ೩೮ ಲಕ್ಷ ರೂಪಾಯಿ ವಸೂಲಾಗಿದೆ. ಕೊಡಗು ಮತ್ತು ಮಂಡ್ಯ ಸೇರಿ ೧೦ ಕೋಟಿಗೆ ಏರಿದೆ. ಬೆಳಗಾವಿ ಜಿಲ್ಲೆ ವಿಭಾಗದಲ್ಲಿ ಡಿಮ್ಯಾಂಡ್ ಇದ್ದದ್ದು ೩೪ ಕೋಟಿ. ಇದರಲ್ಲಿ ೬ ಕೋಟಿ ೪೪ ಲಕ್ಷ ರೂಪಾಯಿ ವಸೂಲಾಗಿದೆ. ಗುಲ್ಬರ್ಗಾ ಡಿವಿಜನ್ನಿನಲ್ಲಿ ೧೬ ಕೋಟಿ ೫೪ ಲಕ್ಷ ಡಿಮ್ಯಾಂಡ್ ಇದ್ದರೆ, ೪ ಕೋಟಿ ೧೧ ಲಕ್ಷ ವಸೂಲಾಗಿದೆ. ಇದೇನು ತೋರಿಸುತ್ತದೆ ? ಏತಕ್ಕೆ ಈಗ ಖರೀಬ್ ಬೆಳೆ ಬರುವ ವರೆಗೆ ಇದನ್ನು ಮುಂದುವರಿಸಬಾರದು ? ಇದನ್ನು ಮಾಡುವುದರಲ್ಲಿ ಏನು ತೊಂದರೆ ಇದೆ ? ಈ ಅಂಕಿಅಂಶಗಳು ಕಣ್ಮುಂದೆ ಇರುವಾಗ ರಿಜಿಡ್ ಆಗಿದ್ದುಕೊಂಡು ರೈತ ಸಂಘವನ್ನು ಬಯ್ಯುವುದು ಏಕೆ? ಎಷ್ಟು ಜನ ಬಡವರಿಗೆ ಅವರಲ್ಲಿ ಐದು ಎಕರೆ,ಹತ್ತು ಎಕರೆ ಕೆಳಗೆ ಇರತಕ್ಕಂಥವರೆಗೆ, ೨೫ ಎಕರೆ ಖುಷ್ಕಿಜಮೀನು ಕೆಳಗೆ ಇರತಕ್ಕಂಥವರಿಗೆ ತಾವು ಕೊಟ್ಟ ಅನುಕೂಲವನ್ನು ಪಡೆಯುವುದಕ್ಕೆ ಸಾಧ್ಯವಾಗಿದೆ? ತಾವು ಅಂಕಿ ಸಂಖ್ಯೆಗಳನ್ನು ಈ ಸಭೆಯ ಮುಂದೆ ಇಡಬೇಕು. ಸಣ್ಣ ರೈತರು, ದೊಡ್ಡ ರೈತರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಸೇರಿದವರು ಇವರುಗಳಿಗೆ ಶಾರ್ಟ್ ಟರ್ಮ್‌ಲೋನ್ ಕೊಡಲಾಗಿದ್ದು, ಡಿಮ್ಯಾಂಡ್ ಇರುವುದು ೭೫ ಕೋಟಿ ೫೪ ಲಕ್ಷ. ಕಲೆಕ್ಷನ್ ಆಗಿರತಕ್ಕಂಥಾದ್ದು ೨೨ ಕೋಟಿ ಮಾತ್ರ. ಅಂದರೆ, ಮಾರ್ಚ್ ೩೧,

೧೯೮೩ರ ವರೆಗೆ ಇನ್ನೂ ೫೫ ಕೋಟಿ ಚಿಲ್ಲರೆ ಕೋಟಿ ರೂಪಾಯಿಗಳು ವಸೂಲಾಗಬೇಕಾಗಿದೆ. ಇದರಲ್ಲಿ ಹೆಬ್ಬೆಟ್ಟು ಒತ್ತಿಸಿಕೊಂಡು, ಯಾರ ಯಾರದೋ ಹೆಸರಿನಲ್ಲಿ ಎಷ್ಟು ತೆಗೆದುಕೊಂಡಿದ್ದಾರೋ ಗೊತ್ತಿಲ್ಲ. ಪರಿಸ್ಥಿತಿಯನ್ನು ಅಭ್ಯಾಸ ಮಾಡಿ ಅಂಕಿಅಂಶಗಳನ್ನು ತರಿಸಿಕೊಂಡಿದ್ದೀರೋ ?

೪–೩೦ ಪಿ.ಎಂ.

ತಾವು ಎನ್ನುವಾಗ ಶ್ರೀಮಾನ್ ಚನ್ನಬಸವನ ಗೌಡರು ಹೇಳಿದ ಹಾಗೆ ಸರ್ಕಾರ, ಸರ್ಕಾರದ ಅಧಿಕಾರಿಗಳು ಹಾಗೂ ಇದನ್ನು ನಿರ್ವಹಣೆ ಮಾಡತಕ್ಕಂತಹ ಮಂಡಲಿ ಆ ದೃಷ್ಟಿಯಿಂದ ಹೇಳುತ್ತಿದ್ದೇನೆ. ಇದರ ಬಗ್ಗೆ ಕಾಳಜಿ ವಹಿಸತಕ್ಕಂತಹದ್ದು ಬಹಳ ಅವಶ್ಯಕತೆ ಇದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಗ್ರಿಕಲ್ಚರಲ್ ಕ್ರೆಡಿಟ್ ಎಂದು ಹೇಳುವಾಗ, ಒಂದು ಕಡೆ ರಾಷ್ಟ್ರೀಕೃತ ಬ್ಯಾಂಕುಗಳು ಎಲ್ಲಿ ಕೆಲಸ ಮಾಡುತ್ತವೆಯೋ ಅದೇ ಊರಿನಲ್ಲಿ ಇವರೂ ಕೆಲಸ ಮಾಡುವುದು. ಅವರು ಆ ಊರಿನಿಂದ ೧೦ ಮೈಲಿಗಿಂತ ದೂರ ಇದ್ದರೆ ಇಲ್ಲ ಎಂದು ಹೇಳಿಬಿಡುತ್ತಾನೆ. ಕೆಲವು ಸೊಸೈಟಿಗಳನ್ನು ಜಿಲ್ಲಾ ಬ್ಯಾಂಕುಗಳಿಗೆ ಕೊಟ್ಟಿದ್ದೀರಿ. ಅವು ಒಂದೂ ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ತಿಳಿದು ಇವರಿಗೆ ಕೆಲವು ಸೊಸೈಟಿಗಳನ್ನು ಕೊಟ್ಟಿದ್ದೀರಿ. ಗ್ರಾಮೀಣ ಬ್ಯಾಂಕುಗಳಿಗೆ ಕೆಲವು ಸೊಸೈಟಿಗಳನ್ನು ಕೊಟ್ಟಿದ್ದೀರಿ. ಅಪೆಕ್ಸ್ ಬ್ಯಾಂಕ್ ಅವು ನೇರವಾಗಿ ಅವರದೇ ಆದ ಬ್ರಾಂಚಸ್‌ನ್ನು ಮಾಡಿಕೊಂಡು ನಡೆಸುತ್ತಿದ್ದಾರೆ. ನಮ್ಮ ಜಿಲ್ಲೆಯನ್ನೇ ಉದಾಹರಣೆಗೆ ತೆಗೆದುಕೊಂಡು ಹೇಳುವುದಾದರೆ, ನಮ್ಮ ತಾಲ್ಲೂಕಿನಲ್ಲಿ ರೈತರ ಅನುಕೂಲಕ್ಕೋಸ್ಕರ ಫಾರ್ಮರ್ಸ್ ಸರ್ವೀಸ್ ಕೋ–ಆಪರೇಟಿವ್ ಸೊಸೈಟೀಸ್ ಎಂದು ಮಾಡಿದ್ದೆವು ಅಂತಹವುಗಳು ಎರಡು ಇರಬಹುದು ಅವುಗಳನ್ನು ನಮ್ಮ ಜಿಲ್ಲಾ ಬ್ಯಾಂಕಿಗೆ ಸೇರಿಸುತ್ತೀರಂತೆ, ಆ ತೀರ್ಮಾನ ಏಕೆ ತೆಗೆದುಕೊಂಡಿದ್ದೀರಿ ?

ಶ್ರೀ ಆರ್.ಎಲ್. ಜಾಲಪ್ಪ.—ತೆಗೆದುಕೊಂಡಿಲ್ಲ.

ಶ್ರೀ ಕೆ.ಎಚ್. ರಂಗನಾಥ್.—ತೆಗೆದುಕೊಳ್ಳಬೇಕು ಎಂದು ಇದ್ದೀರಾ ?

ಶ್ರೀ ಆರ್.ಎಲ್. ಜಾಲಪ್ಪ.—ಅದು ಗೊತ್ತಿಲ್ಲ.

ಶ್ರೀ ಕೆ.ಎಚ್. ರಂಗನಾಥ್.—ಆ ರೀತಿ ತೆಗೆದುಕೊಳ್ಳಬೇಕೆಂದು ಯೋಚನೆ ಮಾಡಿದ್ದೀರೋ ? ನಮ್ಮ ಜಿಲ್ಲಾ ಬ್ಯಾಂಕು ಎಲ್ಲರಿಗೂ ಸಾಲ ಕೊಡತಕ್ಕಂತಹ ಪರಿಸ್ಥಿತಿಯಲ್ಲಿದೆಯೋ ? If there is any Bank which deserves to be superseded under Section 6, it is Chitradurga Bank. Why do you go to Bangalore District Central Co-operative Bank ?

ಶ್ರೀ ಆರ್.ಎಲ್. ಜಾಲಪ್ಪ.—ಅವರ ತಾಲ್ಲೂಕಿನ ವ್ಯವಸಾಯ ಸೇವಾ ಸಹಕಾರಿ ಸೊಸೈಟಿಗಳು ಏನು ಎಂಬುದು ನನಗೆ ಗೊತ್ತಿಲ್ಲ. ಮೊದಲು ಕಮರ್ಷಿಯಲ್ ಬ್ಯಾಂಕ್‌ಗೆ ಕೊಡುವಾಗ ಅಂಡರ್ ಸ್ಟ್ಯಾಂಡಿಂಗ್ ಏನು ಇತ್ತು ಎಂದರೆ ಅವೊತ್ತು ಜಿಲ್ಲಾ ಬ್ಯಾಂಕುಗಳು ವೀಕ್ ಆಗಿದ್ದವು. ರೈತರಿಗೆ ಸಾಲ ಕೊಡುವುದಕ್ಕಾಗುತ್ತಿರಲಿಲ್ಲ. ತಾವು ಹೇಳುವ ವಿಚಾರ ಏನು ಇದೆ ಎಂಬುದನ್ನು ತರಿಸಿ ನೋಡುತ್ತೇನೆ ಮತ್ತು ನಾಳೆ ಉತ್ತರದಲ್ಲಿ ಹೇಳುತ್ತೇನೆ. ಇದರಲ್ಲಿ ಏನೇನು ಕೆಲಸಗಳಾಗಿವೆಯೋ ಏನೋ ಅದರಲ್ಲಿ ತಾವೂ ಜವಾಬ್ದಾರರಾಗಿದ್ದೀರಿ.

ಶ್ರೀ ಕೆ.ಎಚ್. ರಂಗನಾಥ್.—ಇವತ್ತು ಎಲ್ಲಾ ಜಿಲ್ಲಾ ಬ್ಯಾಂಕುಗಳು ಸ್ಟ್ರಾಂಗ್ ಆಗಿವೆಯೋ ?

ಶ್ರೀ ಆರ್.ಎಲ್. ಜಾಲಪ್ಪ.—ನಾವೂ ನೀವೂ ಎಲ್ಲರೂ ಇದರಲ್ಲಿ ಕೆಲಸ ಮಾಡಿರುವವರು. ತಾವು ಸೊಸೈಟಿಯ ಸದಸ್ಯರಾಗಿಲ್ಲದಿದ್ದರೂ ತಾವೂ ಇದರ ಆಡಳಿತವನ್ನು ವಹಿಸಿಕೊಂಡಿದ್ದಂತಹವರು. ತಮಗೂ ಗೊತ್ತಿದೆ. ತಮ್ಮ ಕಾಲದಲ್ಲಿಯೇ ಸೊಸೈಟಿಗಳನ್ನು ರೀಆರ್ಗನೈಜೇಷನ್ ಮಾಡಿತ್ತು. ಎಲ್ಲೆಲ್ಲಿ ವೀಕ್ ಬ್ಯಾಂಕುಗಳು ಇವೆಯೋ ಅಂತಹ ಕಡೆ ಈ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಇವರೂ ಡೀಫಾಲ್ಟರ್ ಆಗಿದ್ದಾರೋ.

ಶ್ರೀ ಕೆ.ಎಚ್. ರಂಗನಾಥ್.—ಇಲ್ಲ, ಇಲ್ಲ......

ಶ್ರೀ ಆರ್. ಎಲ್. ಜಾಲಪ್ಪ.—ಇದರ ಉದ್ದೇಶ ಏನು ಇತ್ತು ಎಂದರೆ, ಜಿಲ್ಲಾ ಬ್ಯಾಂಕುಗಳು ಪುನರ್‌ಚೈತನ್ಯ ಪಡೆದರೆ ಸಾಲ ಮಾಡುವ ಜವಾಬ್ದಾರಿಯನ್ನು ವಾಪಸ್ಸು ಕೊಡಬೇಕು ಎಂದು ಇತ್ತು. ಇವರ ತಾಲ್ಲೂಕಿನ ಸೊಸೈಟಿಗಳ ಬಗ್ಗೆ ಏನು ಪ್ರಪೋಸಲ್ಸ್ ಬಂದಿದೆಯೋ: ಗೊತ್ತಿಲ್ಲ. ಏನಿದೆ ಎಂದು ನಾಳೆ ಹೇಳುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್.—ನಾನು ಏತಕ್ಕಾಗಿ ಇದನ್ನು ಪ್ರಸ್ತಾಪ ಮಾಡಿದೆ ಎಂದು ಹೇಳಿದರೆ, ಕೆಲ ಕೆಲವು ಬ್ಯಾಂಕುಗಳ ಬ್ರಾಂಚಸ್‌ಗಳನ್ನು ತೆಗೆದಿದ್ದೀರಿ. ನಮ್ಮ ಜಿಲ್ಲೆಯಲ್ಲಿ ತೆಗೆದಿದ್ದೀರಿ. ಹಾಗೆ ತುಮಕೂರು ಜಿಲ್ಲೆಯಲ್ಲಿ ತೆಗೆದಿದ್ದೀರಿ. ಜಿಲ್ಲಾ ಬ್ಯಾಂಕುಗಳ ಹಣಬರಹ ಈ ಪರಿಸ್ಥಿತಿ ಇರುವಾಗ ಅದನ್ನು ಮಾಡಬೇಡಿ. ರೈತರಿಗೆ ಸಾಲವನ್ನು ಕೊಡತಕ್ಕಂತಹ ದೃಷ್ಟಿಯಿಂದ ಅದನ್ನು ಉಳಿಸಿಕೊಂಡು ಹೋಗಿ ಎಂದು ಕೇಳುತ್ತಿದ್ದೇನೆ. ನಾನೇನು ಅಪಾದನೆ ಮಾಡುತ್ತಿಲ್ಲ. ನಿಮ್ಮ ಕೈಯಲ್ಲಿ ಲೇಖಣಿ ಇದೆ ಅದು ಈ ರೀತಿಯ ನಿರ್ಣಯ ತೆಗೆದುಕೊಂಡರೆ ನಾನು ಏನು ಮಾಡುವುದಕ್ಕಾಗುತ್ತದೆ? ಇದರ ಬಗ್ಗೆ ನನ್ನ ಕಳಕಳಿ ಏನು ಇದೆ ಎಂದು ಹೇಳುವುದಾದರೆ, ಇಂತಹ ಒಂದು ಪರಿಸ್ಥಿತಿಯಲ್ಲಿ ನಾವು ಯಾವ ರೈತನಿಗೆ ಸಾಲ ಕೊಡುವ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಾಗಿಲ್ಲ. ರೈತ ಕಾರ್ಮಿಕರಿಗೆ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಾಗಿಲ್ಲ.

ಕುರಿ ಸಾಕಾಣಿಕೆ ಸಹಾಯ ಮಾಡುವುದಕ್ಕೆ ರಾಜ್ಯದಲ್ಲಿ ಇಂಡಸ್ಟ್ರೀಯಲ್ ಡೆವಲಪ್‌ಮೆಂಟ್ ಬ್ಯಾಂಕ್ ಎಂದು ಇತ್ತು. ಅದನ್ನು ಮೊದಲು ಪ್ರಾಥಮಿಕ ಬ್ಯಾಂಕುಗಳನ್ನು ಮಾಡಿದ್ದೆವು. ರಿಜರ್ವ್ ಬ್ಯಾಂಕ್‌ನಿಂದ ಸೂಚನೆ ಬಂತು ಎಂದು ಹೇಳಿ ಅಲ್ಲಿರತಕ್ಕಂತಹ ಹಣವನ್ನು ಜಿಲ್ಲಾ ಬ್ಯಾಂಕುಗಳ ಮುಖಾಂತರ ಕೊಡಬೇಕು ಎಂದು ಹೇಳಿ ಅವರಿಗೆ ವಹಿಸಿಕೊಟ್ಟಾಯಿತು. ಅಪೆಕ್ಸ್ ಬ್ಯಾಂಕ್‌ನವರಿಗೆ ನೀವು ಅವರಿಗೆ ಹಣವನ್ನು ಕೊಡಿ ಎಂದು ಹೇಳಿದ್ದೆವು. ನಮ್ಮ ಚಿತ್ರದುರ್ಗ ಜಿಲ್ಲಾ ಬ್ಯಾಂಕ್‌ನವರು ಎಷ್ಟು ಜನರಿಗೆ ಹಣ ಕೊಟ್ಟಿದ್ದಾರೆ ಸ್ವಾಮಿ ? ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಬ್ಯಾಂಕ್ ಈ ಕುರಿ ಸಾಕಾಣಿಕೆ ಮಾಡುವುದಕ್ಕೆ ವಿಶ್ವೇಶ್ವರಯ್ಯನವರು ಹೋಬಳಿಗೆ ಒಂದೊಂದು ಸೊಸೈಟಿಗಳನ್ನು ಮಾಡಿ ಅಲ್ಲಿರತಕ್ಕಂತಹ ಕೈಗಾರಿಕೆಗಳಿಗೆ ವ್ಯವಸ್ಥೆ ಮಾಡಬೇಕು ಎಂದು ಮಾಡಿದರು. ಅದೂ ಕೂಡ ವಿಫಲವಾಯಿತು. ಅಂತಹವುಗಳನ್ನೆಲ್ಲಾ ಮರ್ಜ್ ಮಾಡಿದ ಮೇಲೂ ಅದರ ಮುಖಾಂತರ ಎಷ್ಟು ಜನಗಳಿಗೆ ಹಣವನ್ನು ಕೊಟ್ಟಿದ್ದೀರಿ ತಾವು ? ತಾವು ಕೊಟ್ಟಿರತಕ್ಕಂತಹ ಅಂಕಿಅಂಶಗಳ ಪ್ರಕಾರವೇ ನಾವು ನೋಡುವುದಾದರೆ, ರೈತ ಕಾರ್ಮಿಕರಿಗೆ, ಏನೂ ಇಲ್ಲದಂತಹವರಿಗೆ, ಅತಿ ಸಣ್ಣ ರೈತರಿಗೆ ೧೦೦ಕ್ಕೆ ೩೩.⅓ ರಷ್ಟು ಸಬ್ಸಿಡಿ ಬರುತ್ತದೆ. ಸಣ್ಣ ರೈತರಿಗೆ ೧೦೦ಕ್ಕೆ ೨೫ರಷ್ಟು ಸಬ್ಸಿಡಿ ಬರುತ್ತದೆ. ಇದಕ್ಕೆ ಚ್ಯುತಿ ಬರತಕ್ಕಂತಹ ರೀತಿಯಲ್ಲಿ ಜಿಲ್ಲಾ ಬ್ಯಾಂಕುಗಳು ಕೆಲಸ ಮಾಡಿವೆ, ಗ್ರಾಮ ಮಟ್ಟದಲ್ಲಿ ಇರತಕ್ಕಂತಹ ಸಹಕಾರಿ ಸಂಘಗಳು ಈ ರೀತಿ ಕೆಲಸ ಮಾಡಿವೆ. ಇದಕ್ಕೆ ಕಾರಣ ಯಾರು ? ಯಾರೂ ಇದನ್ನು ನೋಡುವುದು ಬೇಡವೇ ? ಎಷ್ಟು ದಿವಸ ಹೀಗೇ ಮುಂದುವರಿಸಿಕೊಂಡು ಹೋಗಬೇಕು ? ನೀವು ಹೇಳಬಹುದು ನನ್ನ ಕಾಲದಲ್ಲಾಯಿತು ಎಂದು. ನನ್ನ ಕಾಲದಲ್ಲಿಯೋ ಆದರೂ ಯಾವ ಬ್ಯಾಂಕುಗಳನ್ನು ಈ ತರಹ ಆಗಿ ಎಂದು ಹೇಳಿದ್ದೇನೆ ಶ್ರೀಮಾನ್ ಜಾಲಪ್ಪನವರೆ.

ಶ್ರೀ ಆರ್. ಎಲ್. ಜಾಲಪ್ಪ.—ನಾನು ಯಾವುದಕ್ಕೆ ಹೇಳಿದ್ದೇನೆ ?

ಶ್ರೀ ಕೆ.ಹೆಚ್. ರಂಗನಾಥ್.—ಅದಕ್ಕೇ, ತಾವೇ ಅಧ್ಯಕ್ಷರಾಗಿದ್ದಂತಹ ಬ್ಯಾಂಕಿನ ಪರಿಸ್ಥಿತಿ ಎಷ್ಟು ಇದೆ ಅಂತ ಹೇಳಬೇಕಾದರೆ, ಬೆಂಗಳೂರು ಜಿಲ್ಲಾ ಬ್ಯಾಂಕು......

ಶ್ರೀ ಪಿ. ರಾಮದೇವ್.—ಬೆಂಗಳೂರು ಜಿಲ್ಲಾ ಬ್ಯಾಂಕಿನ ಬಗ್ಗೆ......

ಶ್ರೀ ಕೆ.ಹೆಚ್. ರಂಗನಾಥ್.—ಬೇಡವೋ ?

ಶ್ರೀ ಪಿ. ರಾಮದೇವ್.—ಬೇಡ ಅಂತ.

ಶ್ರೀ ಕೆ.ಹೆಚ್. ರಂಗನಾಥ್.—ನಿಮಗೆ ಏನು ತೊಂದರೆ ? ಬೆಂಗಳೂರು ಜಿಲ್ಲಾ ಬ್ಯಾಂಕಿನ ಬಗ್ಗೆಯೇ ಮಾತನಾಡಬೇಕು ಎಂದು ನನಗೇನೂ ಇಲ್ಲ. ಯಾವ ಯಾವ ಜಿಲ್ಲಾ ಬ್ಯಾಂಕಿನ ಪರಿಸ್ಥಿತಿ ಏನಿದೆ ಎಂದು ಅವರೇ ಕೊಟ್ಟಿದ್ದಾರೆ.

ಶ್ರೀ ಆರ್. ಎಲ್. ಜಾಲಪ್ಪ.—ವಿರೋಧಪಕ್ಷದ ಲಾಬಿಯಲ್ಲಿ ೮ ದಿವಸಗಳಿಂದಲೂ ಇದೇ ಕೆಲಸ ನಡೆದಿದೆ. ಅದನ್ನು ಯಾರೋ ತಂದು ಕೊಟ್ಟಿದ್ದಾರೆ. ಅದನ್ನು ತೆಗೆದುಕೊಂಡು ಬಂದು ಇವರು ಇಲ್ಲಿ ಹೇಳುತ್ತಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್.—ಇಲ್ಲ ಇಲ್ಲ. ಯಾರೋ ತಂದು ಕೊಟ್ಟಿದ್ದಾರೆ ಅದನ್ನು ತೆಗೆದುಕೊಂಡು ಬಂದು ಇಲ್ಲಿ ಹೇಳುತ್ತಿದ್ದಾರೆ ಅಂದರೆ ಅರ್ಥ ಬೇರೆಯಾಗುತ್ತದೆ. I am not a paid agent of anybody. Let the Hon'ble Minister be cautions while using words, Let him not uses it lightly, What does he mean by that ?

(INTERRUPTIONS)

SRI MANIK RAO PATIL.—The Minister should have some sense of responsibility.

SRI R.L. JALAPPA.—Why do you take it so seriously?

SRI MANIK RAO PATIL.—You have no business to cast aspersions.

ಶ್ರೀ ಧರ್ಮಸಿಂಗ್.—ಇವರು ಇದೇ ರೀತಿಯಾಗಿ ಬಹಳ ಲಘುವಾಗಿ ಹೇಳುತ್ತಾರೆ. ಯಾರೋ ತಂದುಕೊಟ್ಟಿದ್ದಾರೆಂದು ಈ ರೀತಿಯಾಗಿ ಮಾತನಾಡುವುದು ಈ ಮಂತ್ರಿಗಳಿಗೆ ಅಭ್ಯಾಸವಾಗಿ ಬಿಟ್ಟಿದೆ. ಯಾವಾಗಲೂ ಲಘುವಾಗಿ ಮಾತನಾಡತಕ್ಕಂತಹದ್ದು ಇವರ ಅಭ್ಯಾಸ. ಮೊನ್ನೆ ಕೂಡ ನಾನು ಮಾತನಾಡುವಾಗ ಇದೇ ಶಬ್ದ ಬಳಕೆಯನ್ನು ಮಾಡಿದ್ದರು. ಇವತ್ತೂ ಕೂಡ ಯಾರೋ ತಂದುಕೊಟ್ಟಿದ್ದಾರೆಂದು ಹೇಳಿದರೆ ಹೇಗೆ ? ಪ್ರಜಾಪ್ರಭುತ್ವದಲ್ಲಿ ಈ ರೀತಿ ಅವರು ಹೇಳುತ್ತಿರುವುದು ಸರಿಯಾದುದಲ್ಲ. ಅವರು ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು. ಈ ರೀತಿಯಾಗಿ ಯಾರೋ ತಂದು ಕೊಟ್ಟಿದ್ದಾರೆ ಎಂದು ಹೇಳಿದರೆ ಏನು ಅರ್ಥ ? ಇದು ಸರಿಯಾದುದಲ್ಲ.

(ಗೊಂದಲ)

It appears that he has not realised that he is a Minister.

ಶ್ರೀ ಮಾಣಿಕ್‌ರಾವ್ ಪಾಟೀಲ್.—ಲಂಗು ಲಗಾಮು ಇಲ್ಲದೆ ಮಾತನಾಡಬಾರದು. ತಾವು ತುಂಬಾ ಜವಾಬ್ದಾರಿಯಿಂದ ಈ ಸದನದಲ್ಲಿ ವರ್ತನೆ ಮಾಡಬೇಕು. ತಾವು ಮಂತ್ರಿಗಳಾಗಿದ್ದೀರಿ.

(ಗೊಂದಲ)

ಅಧ್ಯಕ್ಷರು.—ಏನಾಯಿತು ಎಂದು ತಾವು ಇಷ್ಟು ಸೀರಿಯಸ್ಸಾಗಿ ಹೇಳುತ್ತಿದ್ದೀರಿ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಯಾರೋ ಬಂದು ಇದನ್ನು ತಂದು ಕೊಟ್ಟಿದ್ದಾರೆ ಏನೋ ಮಾತನಾಡುತ್ತಿದ್ದಾರೆ, ಈ ರೀತಿ ಅವರು ಹೇಳುತ್ತಿದ್ದಾರೆ. He has passed a very sarcastic remark.

ಶ್ರೀ ಎನ್. ಚಿಕ್ಕೇಗೌಡ.—೮ ದಿವಸಗಳಿಂದ ವಿರೋಧಪಕ್ಷದ ಲೊಂಜ್‌ನಲ್ಲಿ ಇದೇ ನಡೆದಿದೆ ಎಂದು ಹೇಳಿದರೆ ಏನರ್ಥ ? ಇದು ಸರಿಯಾದುದಲ್ಲ.

(ಗೊಂದಲ)

ಶ್ರೀ.ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರು ಅದನ್ನು ಅಭ್ಯಾಸ ಮಾಡಿಕೊಂಡು ಬಂದಿದ್ದಾರೆ. ಅದಕ್ಕಾಗಿಯೇ ಅಷ್ಟೊಂದು ವಿವರವಾಗಿ ಹೇಳುತ್ತಿದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್.—ನಾನು ಇಲ್ಲಿ ಸಾರ್ವಜನಿಕ ಕೆಲಸ ಮಾಡುವುದಕ್ಕೋಸ್ಕರ ಬಂದಿದ್ದೇನೆ. This Government is accountable to this august House including the Minister. They should not feel that they are above this august house. They are accountable and every action of their's accountable. ನಮಗೆ ಇಲ್ಲಿ ಅವರನ್ನು ಜಗ್ಗಿಸಿ ಕೇಳತಕ್ಕಂತಹ ಅಧಿಕಾರ, ಹಕ್ಕು ಇದೆ. ಇಲ್ಲದೆ ಹೋದರೆ ಡೆಮಾಕ್ರಸಿ ಎಂದು ಬಾಯಲ್ಲಿ ಹೇಳಿದರೆ ಡೆಮಾಕ್ರಸಿ ಆಗುವುದಿಲ್ಲ.

ನನ್ನ ಜೀವನದಲ್ಲಿ ಸುಮಾರು ವರ್ಷಗಳಿಂದ ನಾನು ಈ ಮನೆಯ ಸದಸ್ಯನಾಗಿದ್ದೇನೆ. ನಾನು ಯಾರೋ ಹೇಳಿದಂತೆ ಕೆಲಸ ಮಾಡುವುದಕ್ಕೆ ಬಂದವನಲ್ಲ. ನಾನು ತಮ್ಮ ಬಗ್ಗೆ ಅಭಿಮಾನವನ್ನು ಇಟ್ಟುಕೊಂಡಿದ್ದೇನೆ, ತಾವು ಏಕೆ ಈ ಕೆಲಸವನ್ನು ಮಾಡುವುದಕ್ಕೆ ಹೊರಟಿದ್ದೀರಿ ? ಶ್ರೀಮಾನ್ ಚೌಡಯ್ಯನವರು ಒಂದು ಮಾತನ್ನು ಹೇಳುತ್ತಿದ್ದರು, ನಾನು ಅಲ್ಲಿ ಮಂತ್ರಿಯಾಗಿದ್ದಾಗ ಅವರು ಚೆನ್ನಾಗಿ ಕೆಲಸ ಮಾಡಿದಂತಹ ಕಾಲದಲ್ಲಿ ಶಹಭಾಷ್‌ಗಿರಿ ಕೊಟ್ಟಂತಹ ಮನುಷ್ಯ ನಾನು. ಆ ಒಂದು ಅಭಿಪ್ರಾಯವನ್ನು ಉಳ್ಳಂತಹವನು ನಾನು. ಉದಾಹರಣೆಗೆ ಹೇಳುವಾಗ ತಾವೇ ಕೊಟ್ಟಿರ ತಕ್ಕಂತಹದ್ದರಲ್ಲೇ ಇದೆ. ಎಲ್ಲಾ ಜಿಲ್ಲಾ ಬ್ಯಾಂಕುಗಳು ಇವೆ. ಯಾವ ಜಿಲ್ಲಾ ಬ್ಯಾಂಕುಗಳು ಕ್ರೆಡಿಟ್ ಲಿಮಿಟ್‌ನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಾಗತಕ್ಕಂತಹ ಪರಿಸ್ಥಿತಿಯಲ್ಲಿವೆ ಎಂಬುದು ತಾವೇ ಕೊಟ್ಟರತಕ್ಕಂತಹ ಅಂಕಿಅಂಶಗಳಲ್ಲಿ ಇದೆ. ಇದರ ಪ್ರಕಾರವೇ ಹೇಳುವುದಾದರೂ ನಾನು ಅದಕ್ಕೆ ತದನಂತರ ಹೇಳುತ್ತೇನೆಂದು ಹೇಳಿದೆ. ಕೇಳಿದ್ದರಿಂದ ನಾನು ಹೇಳಿದೆ. ತಾವು ಅಧ್ಯಕ್ಷ ರಾಗಿದ್ದಂತಹ ಕಾಲದಲ್ಲಿ financial position of the bank for the last 7 years—1975-76, 1976-77, 1977-78, 1978-79, 1979-80, 1980-81, and 1982-83.

ಇನ್ನು ಫಂಡ್ಸ್ ವಿಚಾರದಲ್ಲಿ ರಿಸರ್ವ್ ಫಂಡ್ ಅಂಡ್ ಅದರ್ಸ್ ಬಗ್ಗೆ ಎಷ್ಟು ಇದೆ ಎನ್ನು ವುದನ್ನು ಹೇಳುತ್ತೇನೆ. ೧೯೭೫ ರಿಂದ ೧೯೮೩ ರವರೆಗೆ ೯ ವರ್ಷಗಳ ಒಂದು ವಿವರಣೆಯನ್ನು ಕೊಡಲು ಅಪೇಕ್ಷೆ ಪಡುತ್ತೇನೆ. ವಿವರ ಈ ರೀತಿ ಇದೆ:—

(ಲಕ್ಷ ರೂಪಾಯಿಗಳು)

2. Funds :	30-6-1975	Reserve Fund	...	7.30
		Others	...	23.47
	30-6-1976	Reserve Fund	...	7.30
		Others	...	24.63
	30-6-1977	Reserve Fund	...	7.30
		Others	...	26.18
	30-6-1978	Reserve Fund	...	7.87
		Others	...	28.44
	30-6-1979	Reserve Fund	...	7.95
		Others	...	30.23
	30-6-1980	Reserve Fund	...	10.47
		Others	...	42.87
	30-6-1981	Reserve Fund	...	10.47
		Others	...	41.75
	30-6-1982	Reserve Fund	...	10.47
		Others	...	45.36
	30-6-1983	Reserve Fund	...	10.47
		Others	...	48.68

ಇನ್ನು ಡಿಪಾಸಿಟ್ಸ್ ಬಗ್ಗೆ ಹೇಳುತ್ತೇನೆ. ಇದು ಬಹಳ ಮುಖ್ಯವಾದುದು.

(ಲಕ್ಷ ರೂಪಾಯಿಗಳಲ್ಲಿ)

Deposits :	30-6-1975	...	331.89
	30-6-1976	...	336.84
	30-6-1977	...	417.45
	30-6-1978	...	476-05

30-6-1979	...	504.11
30-6-1980	...	636.50
30-6-1981	...	754.86
30-6-1982	...	910.46
30-6-1983	...	1263.98

should not the Bank be congratulated for this ?

SRI R.L. JALAPPA.—I am very happy. ಮಾನ್ಯ ಸದಸ್ಯರು ಬೆಂಗಳೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ಡಿಪಾಸಿಟ್ಸ್ ಬಗ್ಗೆ ಹೇಳಿದರು. ಅದೇ ರೀತಿಯಾಗಿ ಬೇರೆ ಬೇರೆ ಜಿಲ್ಲೆಯಲ್ಲಿರತಕ್ಕಂಥ ಬ್ಯಾಂಕ್‌ನ ಒಂದು ಕಂಪ್ಯಾರಟೀವ್ ಸ್ಟೇಟ್‌ಮೆಂಟ್‌ನ್ನು ಕೊಟ್ಟರು ನಮಗೆ ಸಮಾಧಾನವಾಗುತ್ತದೆ. ಆ ಬ್ಯಾಂಕುಗಳಲ್ಲೂ ಸಹ ಡಿಪಾಸಿಟ್ಸ್ ಜಾಸ್ತಿ ಆಗಿದೆಯೋ ಇಲ್ಲವೋ ಎನ್ನುವುದು ಗೊತ್ತಾಗುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್.—೧೯೮೦ ರಿಂದಲೂ ಈ ಅಧ್ಯಕ್ಷರು ಇದ್ದಾರೆ. ಆ ಅಧ್ಯಕ್ಷರ ಒಂದು ಅವಧಿಯಲ್ಲಿ ೯ ಕೋಟಿ, ೧೦ ಕೋಟಿ, ೧೨ ಕೋಟಿಯಷ್ಟು ಡಿಪಾಸಿಟ್ ಹೆಚ್ಚಾಗಿರುವುದರ ಕಡೆ ತಾವು ಗಮನ ಕೊಡಬೇಕು. Progressively this is increase of deposits. ಹೀಗೆ ಅವರು ಡಿಪಾಸಿಟ್ಸ್ ಜಾಸ್ತಿ ಮಾಡಿರುವಾಗ why do you take action–Enquiry under Section 64. That is the point I was driving at.

ಶ್ರೀ ಪಿ. ರಾಂದೇವ್.—ಈ ಡಿಪಾಸಿಟ್ಸ್ ಯಾವ ಮೂಲದಿಂದ ಬಂತು ?

ಶ್ರೀ ಕೆ. ಹೆಚ್. ರಂಗನಾಥ್.—ನೀವು ಆ ರೀತಿ ಅಳತೆ ಮಾಡುವುದು ತಪ್ಪು. ಜೊತೆಗೆ ಅವರು ಯಾವ ರೀತಿಯಾಗಿ ಸಾಲ ಕೊಟ್ಟಿದ್ದಾರೆ ಎನ್ನುವ ಅಂಕಿ ಸಂಖ್ಯೆಗಳನ್ನು ಸಹ ತಮ್ಮ ಮುಂದೆ ಇಡುತ್ತೇನೆ.

(ಲಕ್ಷ ರೂಪಾಯಿಗಳಲ್ಲಿ)

Short Term Loan (Agrl.) :	30-6-1975	...	152.39
	30-6-1976	...	133.63
	30-6-1977	...	146.63
	30-6-1978	...	133.96
	30-6-1979	...	121.74

೧೯೮೦ರಲ್ಲಿ ಮಾನ್ಯ ಮಂತ್ರಿಗಳು ಅಧ್ಯಕ್ಷರಾಗಿದ್ದ ಕಾಲದಲ್ಲಿ ಈ ಕೆಳಕಂಡ ಅಂಕಿಸಂಖ್ಯೆಗಳು.

30-6-1980	...	196.00
30-6-1981	...	281.61
30-6-1982	...	337.15
30-6-1983	...	238.10

ಇನ್ನು ಮೀಡಿಯಂ ಟರ್ಮ್ ಲೋನ್ ಬಗ್ಗೆ ಸ್ವಲ್ಪ ವಿವರಿಸುತ್ತೇನೆ. ಈ ರೀತಿಯಾಗಿ ಕೊಟ್ಟಿದ್ದಾರೆ.

(ಲಕ್ಷ ರೂಪಾಯಿಗಳಲ್ಲಿ)

Medium Term Loan :	30-6-1975	...	43.27
	30-6-1976	...	54.97
	30-6-1977	....	96.89
	30-6-1978	...	91.61

30-6-1979	...	80.10
30-6-1980	...	99.05
30-6-1981	...	98.84
30-6-1982	...	131.57

ಈ ಸಾಲಿನಲ್ಲಿ ಮೀಡಿಯಂ ಟರ್ಮ್ ಲೋನ್ ಕೊಡುವಾಗ ಈ ಬ್ಯಾಂಕ್‌ನಲ್ಲಿ ಏನು ಡಿಪಾಸಿಟ್ ಇತ್ತು ಅದನ್ನು ಸ್ವಲ್ಪ ಬಳಸಿಕೊಂಡು ಅವರಿಗೆಲ್ಲಾ ಹಣ ಹಂಚಿದ್ದಾರೆ. ಇದರಲ್ಲಿ ಸ್ವಾರ್ಥ ಏನೂ ಇಲ್ಲ. ಈ ರೀತಿ ಮಾಡಿದ್ದಕ್ಕೆ ಬ್ಯಾಂಕೆ ಸರಿಯಿಲ್ಲ ಎಂದು ಹೇಳುವುದು ಸರಿಯೇ? ೩೦-೬-೧೯೮೨ ರಲ್ಲಿ ನೋಡಿ ೧೩೧.೫೭ ಲಕ್ಷ ರೂಪಾಯಿಗಳಷ್ಟು ಹಣ ಮೀಡಿಯಂ ಟರ್ಮ್ ಲೋನ್ ಆಗಿ ಕೊಟ್ಟಿದ್ದಾರೆ.

ಇನ್ನು ನಾನ್ ಅಗ್ರಿಕಲಚರ್ ಲೋನ್ಸ್ ಬಗ್ಗೆ ತಮಗೆ ಸ್ವಲ್ಪ ವಿವರವನ್ನು ಕೊಡುವುದಕ್ಕೆ ಬಯಸುತ್ತೇನೆ. ಅದು ಈ ರೀತಿ ಇದೆ:

(ಲಕ್ಷ ರೂಪಾಯಿಗಳಲ್ಲಿ)

Non Agricultural Loans :	30-6-1975	...	207.65
	30-6-1976	...	196.89
	30-6-1977	...	252.67
	30-6-1978	...	241.49
	30-6-1979	...	204.82
	30-6-1980	...	316.32
	30-6-1981	...	336.52
	30-6-1982	...	408.76
	30-6-1983	...	559.63

ತಾವು ಇದರಲ್ಲಿ ಏನು ನೋಡಿದ್ದೀರಿ ಹೇಳಿ.

ಶ್ರೀ ಆರ್. ಎಲ್. ಜಾಲಪ್ಪ.—ತಾವು ಇಷ್ಟರವರೆಗೂ ಕೂಡ ಲೋನ್ ಅಡ್ವಾನ್ಸ್‌ಸ್ ಬಗ್ಗೆ ಹೇಳಿದಿರಿ. ಹಾಗೆಯೇ ವಸೂಲಾತಿ ಬಗ್ಗೆ ಏನು ಇದೆ ಅದನ್ನೂ ಕೂಡ ಹೇಳುತ್ತೀರಾ?

ಶ್ರೀ ಕೆ.ಎಚ್. ರಂಗನಾಥ್.—ಅದನ್ನೂ ಸಹ ಹೇಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಡಿಪಾಸಿಟ್ ಜಾಸ್ತಿ ಮಾಡಿದರೆ ಷೋಕಾಸ್ ನೋಟೀಸ್ ಕೊಡುವುದಿಲ್ಲ. ಎಲ್ಲಾದರೂ ಇರ್ರೆಗ್ಯುಲಾರಿಟೀಸ್ ಇದ್ದರೆ ಹಣಕಾಸು ಸಾಧನೆಗೆ ಮೀರಿದ ಅಕ್ರಮ ಗಳು ಇದ್ದರೆ ಅದಕ್ಕೆ ಷೋಕಾಸ್ ನೋಟೀಸ್ ಕೊಡುತ್ತೇವೆ.

SRI K. H. RANGANATH.—There are irregularities and they are reliable one. ಒಮಿಷನ್ ಅಂಡ್ ಕಮೀಷನ್‌ಗೂ ಷೋಕಾಸ್ ನೋಟೀಸ್ ಕೊಡ ತಕ್ಕಂಥಾದ್ದರಲ್ಲಿ ಅರ್ಥವಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ.—ಕಲ್ಬುರ್ಗಿಯಲ್ಲಿ ಸುಪ್ರೀಂಕೋರ್ಟಿಗೆ ಹೋಗಬೇಕಾಗಿದ್ದ ಒಂದು ಕೇಸನ್ನು ತಾವು ವಿತ್‌ಡ್ರಾ ಮಾಡಿಕೊಂಡು ಮತ್ತೆ ಅವರನ್ನು ಪ್ರೆಸಿಡೆಂಟ್ ಮಾಡಿದ್ದೀರಿ ಆ ವಿಚಾರವನ್ನು ಏತಕ್ಕೆ ತಾವು ಹೇಳುವುದಿಲ್ಲ?

(೫-೬ ಜನ ಸದಸ್ಯರು ಮಾತನಾಡಲು ಎದ್ದು ನಿಂತುಕೊಂಡರು)

ಶ್ರೀ ಹೆಚ್. ಎ. ನಾರಾಯಣಗೌಡ.—ಶ್ರೀಮಾನ್ ಕೆ. ಹೆಚ್. ರಂಗನಾಥ್‌ರವರು ಲೋನ್ಸ್ ಅಂಡ್ ಅಡ್ವಾನ್ಸ್‌ಸ್ ಬಗ್ಗೆ ಹೇಳಿದರು. ಅವರು ೧೯೭೫ ರಿಂದ ೧೯೮೩ರ ವರೆಗೂ ಇರತಕ್ಕಂಥ ಒಂದು

ಕಂಪೇರೇಟಿವ್ ಸ್ಟೇಟ್‌ಮೆಂಟ್ ಅನ್ನು ಇಲ್ಲಿ ಕೊಟ್ಟರು. ಬೆಂಗಳೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ಒಂದು ಪ್ರಗತಿಪರವಾದಂತ ಅಂಕಿಸಂಖ್ಯೆಗಳನ್ನು ಇಲ್ಲಿ ಕೊಟ್ಟರು, ಬಹಳ ಸಂತೋಷ. ಅದರಲ್ಲಿ ಸತ್ಯಾಸತ್ಯತೆ ಇದ್ದರೂ ಇರಬಹುದು. ಅದರೆ ಆವರು ವಸೂಲಾತಿ ಬಗ್ಗೆ ಅಂಕಿಅಂಶ ಗಳನ್ನು ಕೊಟ್ಟಾಗ ಯಾವರೀತಿ ನಡೆದಿದೆ, ಮತ್ತು ಇನ್ನೂ ಇತರೇ ಕಾರ್ಯಕ್ರಮಗಳು ಅಲ್ಲಿ ಯಾವರೀತಿ ನಡೆದಿದೆ, ಎನ್ನುವುದನ್ನೂ ಸಹ ಇದೇ ಸಂದರ್ಭದಲ್ಲಿ ಹೇಳಿದ್ದರೆ ಚೆನ್ನಾಗಿತ್ತು. ಉದಾಹರಣೆಗೆ ಅಲ್ಲಿ ನೇಮಕಾತಿ ವಿಷಯದ ಬಗ್ಗೆ ಇನ್ನೂ ಇತರೇ ವಿಷಯಗಳ ಬಗ್ಗೆ ಅಲ್ಲಿ ಯಾವ ರೀತಿ ನಡೆದಿದೆ ಎನ್ನುವುದರ ಬಗ್ಗೆಯೂ ಹೇಳಿದ್ದರೆ ಚೆನ್ನಾಗಿತ್ತು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಮಾನ್ಯ ಸದಸ್ಯರು ಹಿಂದೆ ಸಹಕಾರ ಮಂತ್ರಿಗಳಾಗಿದ್ದವರು, ಇದರಲ್ಲಿ ಬಹಳ ಅನುಭವಸ್ಥರಾಗಿದ್ದಾರೆ, ಆದುದರಿಂದ ಅದರ ಬಗ್ಗೆಯೂ ಹೇಳಿದ್ದರೆ ಚೆನ್ನಾಗಿತ್ತು ಎಂದು ನನಗೆ ಅನಿಸುತ್ತದೆ. ಅವರು ಇದುವರೆಗೆ ಅಲ್ಲಿ ಕೊಟ್ಟಂಥ ಲೋನ್ಸ್ ಅಂಡ್ ಅಡ್ವಾನ್ಸಸ್ ಬಗ್ಗೆ ಹೇಳಿದರೆ ವಿನಹ ವಸೂಲಾತಿ ಬಗ್ಗೆ ಹೇಳಲಿಲ್ಲಾ ಮಾನ್ಯ ಸದಸ್ಯರು ಅಲ್ಲಿ ನಡೆದಿರತಕ್ಕಂಥ ನಾನಾ ಅಂಶ ಗಳನ್ನೂ ಚೆನ್ನಾಗಿ ವಿಚಾರ ಮಾಡಿ ಕಾನೂನು ರೀತ್ಯಾ ಅವರು ನಡೆದುಕೊಂಡಿದ್ದಾರೆಯೇ ಎನ್ನು ವುದನ್ನು ಹೇಳಿದ್ದರೆ ಚೆನ್ನಾಗಿತ್ತು. ಅಲ್ಲಿಯ ವಸೂಲಾತಿಯ ಬಗ್ಗೆಯೂ ತಾವು ಅಂಕಿಅಂಶ ಕೊಡು ತ್ತೀರಾ ?

ಶ್ರೀ ಕೆ. ಹೆಚ್. ರಂಗನಾಥ್.—ಎಲ್ಲವನ್ನೂ ಹೇಳುತ್ತೇನೆ. ಹೇಳುವುದಕ್ಕೆ ಅವಕಾಶ ಕೊಟ್ಟರೆ ಹೇಳುತ್ತೇನೆ.

(ಗೊಂದಲ)

ಶ್ರೀ ಪಿ. ರಾಂದೇವ್.—ತಾವು ಡಿಪಾಸಿಟ್ ಮಾಡಿರತಕ್ಕಂಥ ವಿಚಾರದಲ್ಲಿ ಹೇಳಿದ್ದೀರಿ. ಅವರು ಜಾಸ್ತಿ ಡಿಪಾಸಿಟ್ ಮಾಡಿರತಕ್ಕಂಥ ವಿಚಾರದ ಬಗ್ಗೆ ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ನೀವು ಈ ಹಿಂದೆ ಸಹಕಾರ ಮಂತ್ರಿಗಳಾಗಿರುವುದರಿಂದ ನಿಮಗೆ ಚೆನ್ನಾಗಿ ಗೊತ್ತಿದೆ, ತುಂಬಾ ಅನುಭವವೂ ಇದೆ. ಕೆಲವು ನೇರವಾದ ಅಪಾದನೆಗಳೂ ಬಂದಿರುವುದರಿಂದ ೧೯–೮–೧೯೮೩ ರಂದು ಸರ್ಕಾರದವರು ಷೋಕಾಸ್ ನೋಟೀಸ್ ಕೊಟ್ಟಿದ್ದಾರೆ. ಅದರಲ್ಲಿ ಎಲ್ಲ ವಿವರಗಳೂ ಇವೆ. ಅಲ್ಲಿ ಸಿಬ್ಬಂದಿ ನೇಮ ಕಾತಿ ಬಗ್ಗೆ, ಇನ್ನೂ ಕೆಲವು ಇರ್‍ರೆಗ್ಯುಲಾರಿಟೀಸ್ ನಡೆದಿರುವುದರಿಂದಲೇ ಷೋಕಾಸ್ ನೋಟೀಸ್ ಕೊಟ್ಟಿರುವುದು. ಅದರ ಬಗ್ಗೆ ತಾವೇನೂ ಇದುವರೆಗೆ ಹೇಳಲಿಲ್ಲವಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ನಾನು ಮಾನ್ಯ ಮಂತ್ರಿಗಳಿಗೆ ಒಂದೇ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ, ತಾವು ಏಕಾಏಕಿ ಇಂಥ ವಿಷಯಗಳಲ್ಲಿ ಕೈ ಹಾಕುವುದಕ್ಕೆ ಹೋಗ ಬೇಡಿ.

ಶ್ರೀ ಪಿ. ರಾಂದೇವ್.—ಅವರೂ ಏಕದಂ ಕೈ ಹಾಕುವುದಕ್ಕೆ ಹೋಗಿಲ್ಲಾ.

ಶ್ರೀ ಕೆ. ಹೆಚ್. ರಂಗನಾಥ್.—ಅವರು ಆ ರೀತಿ ಮಾಡಿದ್ದಾರೆ ಅದರಿಂದ ನಾನು ಹೇಳುತ್ತಿದ್ದೇನೆ. ನನ್ನ ಹತ್ತಿರ ಅವರು ಕೊಟ್ಟಿರುವ ಷೋಕಾಸ್ ನೋಟೀಸ್ ಅದಕ್ಕೆ ಅವರು ಏನು ಉತ್ತರ ಬರೆದಿದ್ದಾರೆ ಅವೆಲ್ಲವೂ ಇದೆ, ಜಾಯಿಂಟ್ ರಿಜಿಸ್ಟ್ರಾರ್ ಫೈಂಡಿಂಗ್ಸ್ ಮತ್ತು ಅವರ ಆರ್ಡರ್ ಆ ಕಾಗದಗಳೂ ಸಹ ನನ್ನ ಹತ್ತಿರ ಇವೆ. ಅವೆಲ್ಲವನ್ನೂ ಹೇಳಬೇಕು ಎಂದರೆ ನನಗೆ ಇನ್ನು ೩೦ ನಿಮಿಷ ಗಳ ಕಾಲ ಕಾಲಾವಕಾಶ ಕೊಟ್ಟರೆ ಹೇಳುತ್ತೇನೆ. ಅಲ್ಲಿ ಸಾಲ ಕೊಟ್ಟದ್ದು ಮತ್ತು ವಸೂಲಾತಿ ಆದದ್ದು ಎಲ್ಲವನ್ನೂ ಹೇಳುತ್ತೇನೆ. ಬ್ಯಾಟರಾಯನಪುರದ ಸಹಕಾರ ಸಂಘ ಸೊಸೈಟಿ, ಇನ್ನೂ ಇತರೇ ಜಿಲ್ಲಾ ಸಹಕಾರ ಸಂಘದ್ದು ಎಲ್ಲವನ್ನೂ ಹೇಳುತ್ತೇನೆ. ಈಗ ಮಾನ್ಯ ವ್ಯವಸಾಯ ಮಂತ್ರಿ ಗಳು ಸಭೆಯಲ್ಲಿ ಇಲ್ಲ. ಅವರೂ ಇದ್ದಿದ್ದರೆ ಚೆನ್ನಾಗಿತ್ತು. ಆ ಸೊಸೈಟಿಗಳ ವಿಚಾರವೆಲ್ಲಾ ನನಗೆ ಗೊತ್ತಿದೆ. ಸ್ವಾಮಿ, ನಾನು ಇಲ್ಲಿ ಯಾರ ಪರವಾಗಿಯೂ ಬಂದಿಲ್ಲ. ಅಲ್ಲದೆ ತಮಗೆ ಹೇಳಬೇಕಾದರೆ I am not petty made after anybody. I have not come for that purpose at all. I have nothing against the Minister. ನನ್ನ ಕಿವಿಗೆ, ಕಣ್ಣಿಗೆ ಬಿದ್ದ ವಿಚಾರವನ್ನು ಈ ಸದನದ ಮುಂದೆ ಇಡುವಂಥ ವ್ಯಕ್ತಿ ನಾನು. ಏನಾದರೂ ತಪ್ಪು ಇದ್ದರೆ ತಪ್ಪುಮಾಡಬಾರದು ಎಂದು ಹೇಳುವ ವ್ಯಕ್ತಿ ನಾನು. ತಪ್ಪು ಮಾಡಿದರೆ ಅದನ್ನು ಸರಿಮಾಡಬೇಕು ಎನ್ನುವುದಾಗಲಿ ಅಥವಾ ಆ ಬಗ್ಗೆ ಏನಾದರೂ ದೋಷರೋಪಣೆ ಮಾಡಬೇಕು ಎನ್ನುವುದಾಗಲೀ ಮಾಡುವಂಥ ವ್ಯಕ್ತಿ ನಾನು ಅಲ್ಲ, ಅದು ನನ್ನ ಕರ್ತವ್ಯವೂ ಅಲ್ಲ. ಈಗ ನಾನು

ಯಾವ ಯಾವ ವಿಷಯಗಳ ಬಗ್ಗೆ ಪಾಯಿಂಟ್‌ಔಟ್ ಮಾಡಿದ್ದೇನೆ, ಅದರ ಬಗ್ಗೆ ಸರ್ಕಾರದ ಉದ್ದೇಶ ಏನು ಇದೆ ಅದು ಇಂದಿನ ಸಮಾಜದ ವ್ಯವಸ್ಥೆಯನ್ನು ಬದಲಾವಣೆ ಮಾಡಿ ಸಾಧನೆ ಮಾಡತಕ್ಕಂಥ ಕೆಲಸವಾಗಬೇಕು, ಇಲ್ಲದೇ ಹೋದರೆ ಈವಾಗ ಈ ಸಂಸ್ಥೆಗಳ ವರ್ಕಿಂಗ್ ಕ್ಯಾಪಿಟಲ್ ೧೫೦೦ ಕೋಟಿ ರೂಪಾಯಿಗಳು ಏನು ಇದೆ ಅದನ್ನು ಸ್ವಾರ್ಥಸಾಧನೆಗಾಗಿ ಬಳಸಿಕೊಳ್ಳುವುದರ ಮುಖಾಂತರ ಮಾಡುವುದಾದರೆ, ಆ ಬಗ್ಗೆ ರಾಜಕೀಯವಾಗಿ ತೊಂದರೆ ಕೊಡುವುದಾದರೆ ನಿಮ್ಮ ನಿರೀಕ್ಷೆ ವಿಫಲಗೊಳ್ಳುತ್ತದೆ. ಅದು ಸರಿಯಲ್ಲ ಎಂದು ಹೇಳುವುದಕ್ಕೆ ನಾನು ಎದ್ದು ನಿಂತಿದ್ದೇನೆ.

ನನಗೆ ಯಾರ ಮೇಲೂ ವೈಯುಕ್ತಿಕವಾಗಿ ಏನೂ ಇಲ್ಲ. ನಿಮಗೆ ಎಂದಾದರೂ ಕೂಡ ನಾನು ಬೇರೆ ರೀತಿಯಲ್ಲಿ ಮಾತನ್ನು ಆಡಿದ್ದೇನೆಯೇ? ಮಾನ್ಯ ಸದಸ್ಯರಾದ ನಾರಾಯಣ ಗೌಡರು ರಿಕವರಿ ಬಗ್ಗೆ ಮಾತನಾಡಲು ಹೇಳಿದ್ದಾರೆ.

ಶ್ರೀ ಆರ್. ಎಲ್. ಜಾಲಪ್ಪ.—ವೈಯುಕ್ತಿಕವಾಗಿ ನಮಗೆ ಏನೂ ವ್ಯತ್ಯಾಸ ಇಲ್ಲ. ಮುಂದೆಯೂ ಬರುವುದಿಲ್ಲ.

SRI K. H. RANGANATH.—I am only concerned with the Government of Karnataka. I want the Government of Karnataka to be very good and to cater to the needs of all sections of the society. I need not be greatful to anybody. I am only greateful to the people of Karnataka and I am only concerned with the Government of Karnataka. Beyond that I have no interest at all. Let me make it very clear. ತಪ್ಪು ಆದರೆ ಅದನ್ನು ಇಲ್ಲಿ ಹೇಳಬೇಕಾಗುತ್ತದೆ. ನಾನ್ ಪ್ಲಾನ್‌ನಲ್ಲಿ ೩.೬೦ ಲಕ್ಷ ರೂಪಾಯಿಗಳು ಖರ್ಚಾಗಿದೆ. ಇಂಥ ಪರಿಸ್ಥಿತಿ ಇರುವಾಗ, ಹೀಗೆ ಮಾಡುತ್ತಾ ಹೋದರೆ ರಾಜ್ಯದ ಜನತೆಗೆ ತೊಂದರೆಯಾಗುವುದಿಲ್ಲವೇ? ರೈತರಿಗೆ ತೊಂದರೆಯಾಗುವುದಿಲ್ಲವೇ? ಕಾರ್ಮಿಕರಿಗೆ ತೊಂದರೆಯಾಗುವುದಿಲ್ಲವೆ? ನಾನು ಇಲ್ಲಿ ದೂರು ದೃಷ್ಟಿಯಿಂದ ಮಾತನಾಡುತ್ತಿದೆಯೇ ವಿನಹಃ ವೈಯುಕ್ತಿಕವಾಗಿ ಏನೂ ಹೇಳುತ್ತಿಲ್ಲ, ತಮ್ಮ ಸಹಕಾರೀ ಕ್ಷೇತ್ರ ಪಕ್ಷಾತೀತವಾಗಿ ಇರಬೇಕು ಎಂದು ನಾನು ಹೇಳುತ್ತಿದ್ದೇನೆ. ಎಲ್ಲೆಲ್ಲಿ ತಪ್ಪು ಆಗುತ್ತಿದೆ ಎಂದು ನಮ್ಮ ಕಿವಿಗೆ ಬಿದ್ದರೆ ಅದನ್ನು ನಾನು ಇಲ್ಲಿ ಹೇಳಬೇಕಾಗುತ್ತದೆ. ನಾನು ಅದಕ್ಕೋಸ್ಕರ ಹೇಳುತ್ತಿದ್ದೇನೆ. ಜಿಲ್ಲಾ ಬ್ಯಾಂಕುಗಳ ಚುನಾವಣೆ, ಮಾರ್ಕೆಟಿಂಗ್ ಫೆಡರೇಷನ್ ಚುನಾವಣೆ, ಕನ್‌ಸ್ಯೂಮರ್ಸ್ ಫೆಡರೇಷನ್ ಚುನಾವಣೆ, ಅಪೇಕ್ಸ್‌ಬ್ಯಾಂಕ್ ಚುನಾವಣೆಗಳ ಮೂಲಕ ಆಗತಕ್ಕ ಚುನಾವಣೆ ಇದು ಸರಿಯಲ್ಲ. ಇದನ್ನು ಬದಲಾವಣೆ ಮಾಡಬೇಕು. ಸಕ್ಕರೆ ಕಾರ್ಖಾನೆಗಳ ಆಕ್ಟನ್ನು ಬದಲಾವಣೆ ಮಾಡಬೇಕು ಎಂದು ಹೇಳಿದ್ದೇನೆ. ಒಂದು ನಯಾಪೈಸೆ ಬಂಡವಾಳವನ್ನು ಇಲ್ಲಿ ಹಾಕದೆ, ಒಂದು ನಯಾಪೈಸೆ ಇಲ್ಲದಿದ್ದರೂ ಕೂಡ ಒಟ್ಟು ಬಂಡವಾಳದ ಮಹಿಮಾಟನ್ನು ತನ್ನದೇ ಎನ್ನುವ ರೀತಿಯಲ್ಲಿ ಕೆಲಸ ಮಾಡತಕ್ಕದ್ದಕ್ಕೆ ಕಾನೂನಿನಲ್ಲಿ ಅವಕಾಶವಿದೆ. ಇದನ್ನು ಬದಲಾವಣೆ ಮಾಡಬೇಕು. ಈ ಎಲ್ಲಾ ದೃಷ್ಟಿಯನ್ನು ನಾವು ನೋಡಿ ಸಹಕಾರಿ ಕ್ಷೇತ್ರ ಬೆಳೆಯಬೇಕಾದಲ್ಲಿ ನಾವು ಇದರ ಬಗ್ಗೆ ಸರಿಯಾಗಿ ಯೋಚನೆ ಮಾಡಬೇಕಾಗುತ್ತದೆ ಇಲ್ಲ, ನಮ್ಮ ಸ್ವಇಚ್ಛೆ ಇಲ್ಲಿರಬೇಕು ಎಂದು ಹೇಳುವುದಾದರೆ ತಾವು ಮಾಡಿದ್ದನ್ನೇ ಮಾಡಬಹುದು. ಆದರೆ ಇಂಥ ಒಂದು ಲಾಕ್ಯುನಾ ಇದೆ ಅದನ್ನು ಮಾಡಬೇಡಿರಿ ಎಂದು ಹೇಳುತ್ತೇನೆ. ಮಾಡುತ್ತೇವೆ ಎಂದು ಹೇಳಿದರೆ ನಮ್ಮದು ಏನು? 'ಉಪ್ಪು ತಿಂದವನು ನೀರು ಕುಡಿಯುತ್ತಾನೆ'. ಸಹಕಾರ ಆಕ್ಟ್‌ನಲ್ಲಿ ಈ ರೀತಿಯಾಗಿ ಬದಲಾವಣೆಗಳು ಆಗಬೇಕಾಗಿದೆ. ಇದು ಒಂದು ಪಕ್ಷದ ಪ್ರಶ್ನೆಯಲ್ಲ. ದೇಶದಲ್ಲಿ ಕೋ-ಆಪರೇಟಿವ್ ಕ್ಯಾಪಿಟಲಿಸಂ ಬಂದರೆ ಬಹಳ ಕಷ್ಟವಾಗುತ್ತದೆ. ನಮಗೆ, ನಿಮ್ಮ ಮಂತ್ರಿಮಂಡಲ ಇತ್ತು. ನಿಮ್ಮ ಸರ್ಕಾರ ಇತ್ತು ನೀವು ಮಾಡಲಿಲ್ಲ ಎಂದರೆ ನಾವು ಮಾಡಲಿಲ್ಲ, ನೀವು ಮಾಡಿರಿ ಎಂದು ಹೇಳುತ್ತೇವೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಸದಸ್ಯರು ಬಹಳವಾಗಿ ಹೇಳಿದ್ದಾರೆ. ಬಹುಶಃ ನಾನು ಉತ್ತರ ಕೊಟ್ಟಮೇಲೆ ನನಗೆ ಗ್ಯಾರಂಟಿ ಇದೆ ಅವರು ಸ್ಯಾಟಿಸ್‌ಫೈ ಆಗುತ್ತಾರೆಂದು. I know him for the last several years. He was with me when I was the President. After hearing my reply I am sure that he will appreciate me.

ಶ್ರೀ ಕೆ. ಎಚ್. ರಂಗನಾಥ್.—ನಾನು ಏನನ್ನೂ ನೋಡದೆ ಕನ್‌ಕ್ಲೂಷನ್‌ಗೆ ಬರುವುದಿಲ್ಲ. ಮತ್ತು ಇಲ್ಲಿ ಮಾತನಾಡುವಾಗ ಯಾವುದನ್ನೂ ಪರೀಕ್ಷೆ ಮಾಡದೆ ಈ ಒಂದು ಅಭಿಪ್ರಾಯಕ್ಕೆ ನಾನು ಬರಲಿಲ್ಲ. ಕೊಟ್ಟಿರತಕ್ಕ ಷೋಕಾಸ್ ನೋಟೀಸನ್ನು ಓದಿದ್ದೇನೆ, ರಿಪ್ಲೈ ಕೂಡ ಓದಿದ್ದೇನೆ. ಆ ಬ್ಯಾಂಕ್‌ನ ವಹಿವಾಟನ್ನೂ ಕೂಡ ನೋಡಿದ್ದೇನೆ. ಅದರ ಬಗ್ಗೆ ನನ್ನ ಹತ್ತಿರ ರಿಕಾರ್ಡ್ಸ್ ಕೂಡ ಇವೆ. ಮಾನ್ಯ ನಾರಾಯಣಗೌಡ ಅವರು ಜಿಲ್ಲಾ ಬ್ಯಾಂಕ್‌ನ ಅಧ್ಯಕ್ಷರಾಗಿ ಬಹಳ ವರ್ಷಗಳಿಂದ ಕೆಲಸ ಮಾಡಿದವರು. ಅವರು ರಿಕವರಿ ಬಗ್ಗೆ ನನ್ನನ್ನು ಕೇಳಿದ್ದಾರೆ. ಇದು ೧೯೭೫ರಲ್ಲಿ ೩೦ ಪರ್ಸೆಂಟ್ ಇದ್ದು, ೭೬ರಲ್ಲಿ ೬೪ ಪರ್ಸೆಂಟ್, ೭೭ರಲ್ಲಿ ೩೬ ಪರ್ಸೆಂಟ್, ೭೮ರಲ್ಲಿ ೪೪ ಪರ್ಸೆಂಟ್, ೭೯ರಲ್ಲಿ ೪೦ ಪರ್ಸೆಂಟ್, ೮೦ರಲ್ಲಿ ೬೦ ಪರ್ಸೆಂಟ್, ೮೧ರಲ್ಲಿ ೫೬ ಪರ್ಸೆಂಟ್, ೮೨ರಲ್ಲಿ ೬೩ ಪರ್ಸೆಂಟ್. ಅಡ್ವಾನ್ಸ್‌ಸ್ ಇದಕ್ಕೆ ಲೆಕ್ಕ ಹಾಕಿದರೆ ಇನ್ನೂ ಸ್ವಲ್ಪ ಜಾಸ್ತಿಯಾಗುತ್ತದೆ. ಇಷ್ಟು ವರ್ಷದ್ದು ಲಾಭವನ್ನೂ ಸಹ ತಾವು ಕೇಳಬೇಕು. ೧೯೭೫ರಲ್ಲಿ ಒಂದು ಸಾವಿರ, ೭೬ರಲ್ಲಿ ೨.೨೬ ಲಕ್ಷ ರೂಪಾಯಿಗಳು. ೭೭ರಲ್ಲಿ ೩೩ ಸಾವಿರ ರೂಪಾಯಿಗಳು, ೭೮ರಲ್ಲಿ ೬.೬೨ ಲಕ್ಷ ರೂಪಾಯಿಗಳು. ೭೯ರಲ್ಲಿ ೩.೩೯ ಲಕ್ಷ ರೂಪಾಯಿಗಳು, ೮೦ರಲ್ಲಿ ೫.೭೬ ಲಕ್ಷ ರೂಪಾಯಿಗಳು, ೮೧ರಲ್ಲಿ ೨.೮೬ ಲಕ್ಷ ರೂಪಾಯಿಗಳು, ೮೨ರಲ್ಲಿ ೫.೪೯ ಲಕ್ಷ ರೂಪಾಯಿಗಳು, ೮೩ರಲ್ಲಿ ಏನೂ ಇಲ್ಲ ಎಂದು ಇದೆ. ಆಡಿಟ್ ರಿಪೋರ್ಟ್ ೭೯, ೮೦, ೮೧ಕ್ಕೆ 'ಬಿ' ಸರ್ಟಿಫಿಕೇಟ್ ಕೊಟ್ಟು ೮೨ಕ್ಕೆ 'ಸಿ' ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಇವರಿಗೆ ತಲೆ ಕೆಟ್ಟಿದೆಯೋ ಏನೋ ಗೊತ್ತಾಗಲಿಲ್ಲ. ಆಡಿಟ್ ರಿಪೋರ್ಟ್ ಇದರ ಬಗ್ಗೆ ನಾನು ಹೇಳುವಾಗ, ಸಹಕಾರಿ ಕ್ಷೇತ್ರದಲ್ಲಿ ತಪ್ಪು ಮಾಡಿದವರಿಗೆ ಕಂಪನಿ ಆಕ್ಟ್‌ಗಳಲ್ಲಿ ಯಾವ ಶಿಕ್ಷೆಯನ್ನು ಕೊಡಬೇಕು ಎಂದು ಹೇಳಿದ್ದಾರೋ ಅದರ ಪ್ರಕಾರ ಶಿಕ್ಷೆಯಾಗಬೇಕು ಎನ್ನತಕ್ಕ ಮಾತನ್ನು ಹೇಳಿದ್ದಾರೆ. It is in the record, When he was in the Council he has said it several times, He has repeated so many times on the floor of the House. ಇಂಥ ಪರಿಸ್ಥಿತಿ ಇರುವಾಗ ಆಡಿಟನ್ನು ಬೇರೆ ಮಾಡಬೇಕು. ಆಡಿಟರ್ಸ್ ಮತ್ತು ಇವರು ಒಂದೇ ಆದರೆ ಸರಿಯಾದ ರೀತಿಯಲ್ಲಿ ತನಿಖೆಯಾಗುವುದಿಲ್ಲವೆಂದು ಹೇಳಿ ಆಡಿಟ್‌ನ್ನು ಬೇರೆ ಮಾಡಬೇಕು ಎಂದು ಮಾಡಲಾಗಿದೆ. ಆದಾಗ್ಯೂ ಕೂಡ ಇವರು ಈ ರೀತಿಯಾಗಿ ಸರ್ಟಿಫಿಕೇಟನ್ನು ಕೊಡಬೇಕಾದರೆ ಏನು ಇದು? ಯಾರ ಕೈ ಚಳಕದಿಂದ ಈ ರೀತಿಯಾಗಿ ಕೊಡುತ್ತಾರೋ ಗೊತ್ತಾಗುವುದಿಲ್ಲ. ಇದರಿಂದ ಸರ್ಕಾರದ ಮತ್ತು ನಮ್ಮ ಸದುದ್ದೇಶ ಏನು ಇದೆಯೋ ಅದಕ್ಕೆ ಬೇರೆಯಾಗಿ ಇವುಗಳು ಕೆಲಸ ಮಾಡಿದಂತಾಗುತ್ತದೆ. ಈ ಸದುದ್ದೇಶದಿಂದ ಇವು ಬೇರೆಯಾಗಿ ಕೆಲಸಮಾಡಿ ಇದು ನಿಮಗೆ ಗೊತ್ತಾಗದೆ ಇದ್ದರೆ ನೀವು ದೊಡ್ಡ ತಪ್ಪು ಮಾಡಿದಂತಾಗುತ್ತದೆ, ಇದನ್ನು ತಾವು ಮಾಡಬೇಡಿ.

ಸಭಾಧ್ಯಕ್ಷರು.—ಮಾನ್ಯ ಸದಸ್ಯರು ಜಾಗ್ರತೆಯಾಗಿ ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಕೆ. ಎಚ್. ರಂಗನಾಥ್.—ನಾನು ಇನ್ನು ೧೦-೧೫ ನಿಮಿಷದಲ್ಲಿ ಮುಗಿಸಬೇಕು ಎಂದರೆ ಆಗುವುದಿಲ್ಲ, ನಾಳೆ ಬೇಕಾದರೆ ನಾನು ಮಾತನಾಡುತ್ತೇನೆ.

ಅಧ್ಯಕ್ಷರು.—ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನ ಮಾಡಿದಂತೆ ನಾವು ಹೋಗಬೇಕಾಗುತ್ತದೆ. ತಾವು ಮುಂದುವರಿಸಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೇ, ಕೆಲವು ಸದಸ್ಯರು ಸೂಚನೆ ಕೊಟ್ಟ ಪ್ರಕಾರ ಅವರು ನಾಳೆ ಊರಿಗೆ ಹೋಗಬೇಕು ಎಂದು ಕಾಣುತ್ತದೆ. ಅದಕ್ಕೆ ನನ್ನದೇನೂ ಆಕ್ಷೇಪ ಇಲ್ಲ. ತಮಗೆ ಗೊತ್ತಿರುವ ಹಾಗೆ ೨೩ನೇ ತಾರೀಖು ಅಪ್ರೋಪ್ರಿಯೇಷನ್ ಬಿಲ್ ಪಾಸ್ ಆಗಬೇಕು. ಇದಕ್ಕೆ ಮಾನ್ಯ ಸದಸ್ಯರ ಒಪ್ಪಿಗೆ ಇದ್ದರೆ, ಅದಕ್ಕೆ ಒಳಪಟ್ಟು ಏನು ಬದಲಾವಣೆ ಮಾಡಿದರೂ ನನ್ನ ಆಕ್ಷೇಪ ಇಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇವತ್ತು ನಾವುಗಳು ಊರಿಗೆ ಹೋಗಬೇಕಾಗಿದೆ, ಸೋಮವಾರ ೮ ಗಂಟೆಗೆ ಬೇಕಾದರೂ ತಾವು ಕುಳಿತುಕೊಳ್ಳಬಹುದು.

೫-ಪಿ.ಎಂ.

ಶ್ರೀ ಎಂ. ಮಹದೇವ್.—ಬೆಳಿಗ್ಗೆ ೧೦ ಗಂಟೆಯಿಂದ ೫ ಗಂಟೆತನಕ ಕುಳಿತಿದ್ದೇವೆ. ಮಾನ್ಯ ರಂಗನಾಥ್ ಅವರು ಮಂತ್ರಿಗಳಾಗಿದ್ದವರು, ಅವರಿಗೆ ಸಾಕಷ್ಟು ಅನುಭವವಿದೆ, ಅವರಿಗೆ ಇನ್ನೂ

ಅರ್ಧ ಗಂಟೆ ಬೇಕು. ಆದುದರಿಂದ ದಯವಿಟ್ಟು ಸಭೆಯನ್ನು ಮುಂದೂಡಿ ಮುಂದಿನ ದಿವಸ ಅವರು ಮಾತನಾಡಲಿ.

೫-೦೦ ಪಿ.ಎಂ.

ಅಧ್ಯಕ್ಷರು.—ತಾವೇ ಒಪ್ಪಿಕೊಂಡಿರುವ ಹಾಗೆ ಕೇಳುವುದಕ್ಕೆ ಚೆನ್ನಾಗಿದೆ. ಇನ್ನೊಂದು ಅರ್ಧ ಗಂಟೆ ಕುಳಿತು ಕೇಳುವುದಕ್ಕೆ ತೊಂದರೆಯೇನು?

ಶ್ರೀ ಎಂ. ಮಹದೇವ್.—೧೦ ಗಂಟೆಯಿಂದ ೫ ಗಂಟೆವರೆಗೆ ಒಂದೇ ಸಮ ಕುಳಿತಿದ್ದೇವೆ. ಸಭೆಯನ್ನು ಸೋಮವಾರಕ್ಕೆ ಮುಂದೂಡೋಣ

ಅಧ್ಯಕ್ಷರು.—ತಾವು ಕನ್‌ಕ್ಲೂಡ್ ಮಾಡಿ, ಆಮೇಲೆ ಅಡ್ಜರ್ನ್ ಮಾಡೋಣ.

ಶ್ರೀ ಕೆ.ಹೆಚ್. ರಂಗನಾಥ್.—ಈಗ ಮಾನ್ಯ ಮುಖ್ಯ ಮಂತ್ರಿಗಳಿಗಿದ್ದಾರೆ, ಬಹಳ ಒಳ್ಳೆಯದು. ಏಕೆಂದರೆ, ನಾನು ಕೆಲವು ವಿಷಯಗಳನ್ನು ಹೇಳಿದರೆ ಬಹಳ ಮಟ್ಟಿಗೆ ರೀಜನಬಲ್ ಆಗಿ ಇರುವುದಕ್ಕಾಗುತ್ತದೆ. ಸ್ವಾಮಿ, ಸಾಲದ ವಸೂಲಿಗೆ ಗಡುವು ೩೦-೬-೧೯೮೩ ಎಂದು ತಾವು ನಿಗದಿ ಮಾಡಿದಿರಿ. ತಾವು ಕೊಟ್ಟಿರುವಂಥ ಮಾಹಿತಿಯನ್ನು ನೋಡುವುದಾದರೆ, ಅಲ್ಪಾವಧಿ ಸಾಲ ೭೫ ಕೋಟಿ ರೂಪಾಯಿಗಳು ಬರಬೇಕಾದಂಥ ಹಣದಲ್ಲಿ ೨೨ ಕೋಟಿ ರೂಪಾಯಿಯಷ್ಟು ಆಗಿದೆ ಅಂದರೆ ೩೧-೩-೧೯೮೩ರಷ್ಟು ಹೊತ್ತಿಗೆ ನಮಗೆ ಮುಂಗಾರು ಫಸಲು ಬರತಕ್ಕಂಥಾದ್ದು ಅಕ್ಟೋಬರ್ ಅಷ್ಟು ಹೊತ್ತಿಗೆ. ಅಲ್ಲಿಯವರೆಗೆ ಇದನ್ನು ಮುಂದುವರಿಸಿಕೊಂಡು ಹೋದಪಕ್ಷದಲ್ಲಿ ಅನುಕೂಲ ವಾಗುತ್ತದೆ. ಎಲ್ಲಾ ಬ್ಯಾಂಕ್‌ಗಳಿಗೂ ಕೂಡ ಶಕ್ತಿ ಬರುತ್ತದೆ, ೬೪ ಪರ್ಸೆಂಟ್ ವಸೂಲಿಯಾದರೆ ರೀಪೇಯಿಂಗ್, ಬಾರೋಯಿಂಗ್ ಕೆಪಾಸಿಟಿ ಬರುತ್ತದೆ, ಎಷ್ಟೋ ಬ್ಯಾಂಕುಗಳಿಗೆ ಇವತ್ತು ಈ ಕೆಪಾಸಿಟಿ ಬಂದಿರಲಾರದು. ಮಾನ್ಯ ಮಂತ್ರಿಗಳೂ ಇದ್ದಾರೆ, ಮಾನ್ಯ ಮುಖ್ಯ ಮಂತ್ರಿಗಳೂ ಇದ್ದಾರೆ. ನಾನು ಕೇಳಿಕೊಳ್ಳುವುದೇನೆಂದರೆ, ತಾವು ಅದನ್ನು ಮುಂದುವರಿಸಿಕೊಂಡು ಹೋಗ ತಕ್ಕಂಥಾದ್ದು ಒಳ್ಳೆಯದು ಎಂದು.

ಇನ್ನು ಭೂ ಅಭಿವೃದ್ಧಿ ಬ್ಯಾಂಕುಗಳ ವಿಚಾರದಲ್ಲಿ ಹೇಳುವುದಾದರೆ, ತಾವು ಇಲ್ಲಿಯವರೆಗೆ ಎಷ್ಟು ಜನರನ್ನು ಇದರ ವ್ಯಾಪ್ತಿಗೆ ಅಳವಡಿಸಿದ್ದೀರಿ. 33,022 farmers are brought under the purview of the activities of long term loan. ಭೂ ಅಭಿವೃದ್ಧಿ ಬ್ಯಾಂಕ್‌ನಲ್ಲಿ ಡಿಮ್ಯಾಂಡ್ ೪೪ ಕೋಟಿ ಇದ್ದರೆ ೩೧-೮-೧೯೮೩ ರವರೆಗೆ ವಸೂಲಾಗಿರತಕ್ಕಂಥಾದ್ದು ೮ ಕೋಟಿ ಮಾತ್ರ. ಇನ್ನು ೩ ತಿಂಗಳಲ್ಲಿ ಎಷ್ಟು ಬಂದಿದೆಯೋ ಲೆಕ್ಕ ಕೊಡಬೇಕು ಇನ್ನೂ ೩೬ ಕೋಟಿ ಬಾಕಿ ಇದೆ. ಇದು ಏನು ತೋರಿಸುತ್ತದೆ ಎಂದರೆ, ನೀವು ಯಾರಿಗೆ ಪರಿಹಾರ ಕೊಡಬೇಕು ಎಂದು ಯೋಚನೆ ಮಾಡಿದ್ದೀರಿ ಅವರಿಗೆ ಕೊಡಲಿಕ್ಕೆ ಆಗಿಲ್ಲ, ಸ್ವಲ್ಪ ಇದನ್ನು ಮುಂದುವರಿಸಿದರೆ ಎಲ್ಲರಿಗೂ ಅನುಕೂಲವನ್ನು ಪಡೆಯುವುದಕ್ಕೆ ಅವಕಾಶವಾಗುತ್ತದೆ ಎನ್ನುವ ವಿಚಾರವನ್ನು ನಾನು ಸಭೆಯ ಮುಂದೆ ಇಡಲಿಕ್ಕೆ ಪ್ರಯತ್ನ ಪಡುತ್ತಾ ಇದ್ದೇನೆ. ಸ್ವಾಮಿ, ಇಷ್ಟು ದೊಡ್ಡ ನೌಕರಶಾಹಿ ಅಧಿಕಾರವರ್ಗ ಇದ್ದರೂ ಕೂಡ ೩೫ ಲಕ್ಷ ಕುಟುಂಬಗಳು ವ್ಯವಸಾಯವನ್ನು ಅವಲಂಬನೆ ಮಾಡಿರ ತಕ್ಕವರು ಇದ್ದರೂ ಕೂಡ ಕೇವಲ ೩೩,೨೨೨ ಅಂದರೆ ದಾಮಾಷಾ ಇದು ಸಣ್ಣ ಸಂಖ್ಯೆ ಆಗುವು ದಿಲ್ಲವೇ? ಇದನ್ನು ಹೆಚ್ಚು ಮಾಡುವುದಕ್ಕೆ ಏನು ಕೆಲಸ ಮಾಡಬೇಕಾದ್ದಿದೆ ಎನ್ನುವುದರ ಬಗ್ಗೆ ಸರ್ಕಾರ ಯೋಚನೆ ಮಾಡಿದೆಯೋ? ನಾನು ಈಗಾಗಲೇ ಹೇಳಿದೆ. ಅವರ ಕೆಲಸಕಾರ್ಯಗಳನ್ನು ನಿರ್ವಹಣೆ ಮಾಡುವುದಕ್ಕೆ ಬೇಕಾದಷ್ಟು ಅಧಿಕಾರಿಗಳನ್ನು ನೇಮಕ ಮಾಡಿದ್ದೇವೆ ಸುಮಾರು ೩ ಕೋಟಿ ೬೨ ಲಕ್ಷ ರೂಪಾಯಿಗಳ ಸಂಬಳ ಕೊಡತಕ್ಕ ವ್ಯವಸ್ಥೆಯಲ್ಲಿದ್ದೇವೆ. ಗ್ರಾಮ ಮಟ್ಟದಲ್ಲಿ ಕೆಲಸ ಮಾಡತಕ್ಕವರು, ತಾಲ್ಲೂಕು ಮಟ್ಟದಲ್ಲಿ ಕೆಲಸ ಮಾಡತಕ್ಕವರು, ಸೊಸೈಟಿಗಳಲ್ಲಿ, ಬ್ಯಾಂಕು ಗಳಲ್ಲಿ ಕೆಲಸ ಮಾಡತಕ್ಕವರು, ಕೇಂದ್ರದಲ್ಲಿ ಕೆಲಸ ಮಾಡತಕ್ಕ ನೌಕರರು ಏನಿದ್ದಾರೆ ಅವರ ಗ್ರೇಡ್, ಪಿಂಚಣಿ, ಸೆಕ್ಯೂರಿಟಿ, ಅವರು ನೆಮ್ಮದಿಯಿಂದ ಜೀವನ ಮಾಡುವುದಕ್ಕೆ ವ್ಯವಸ್ಥೆ ಇದೆ. ನೀವು ಏಕೆ ಭೂ ಅಭಿವೃದ್ಧಿ ಬ್ಯಾಂಕ್ ನೌಕರರಿಗೆ ಸರಿಗೆ ವ್ಯವಸ್ಥೆ ಮಾಡುವುದರಲ್ಲಿ ಮೀನಾ ಮೇಷ ಎಣಿಸು ತ್ತಿದ್ದೀರಿ. ೧೯೭೮ನೇ ಇಸವಿಯಲ್ಲಿ ಒಂದು ಆರ್ಡರ್ ಆಯಿತು. ೧-೪-೧೯೮೨ರಿಂದ ಪೇ ಸ್ಕೇಲ್ ಕೊಡಬೇಕು ಎಂದು ವಿಚಾರಮಾಡಿ, ಮತ್ತೆ ಈಗ ೧-೪-೧೯೮೩ರಿಂದ ಕೊಡುತ್ತೇವೆಂದು ಹೇಳಿ ಅವರನ್ನು ಎಲ್ಲಿಗೆ ತಳ್ಳಿದಿರಿ ಎಂದರೆ ಸತ್ಯಾಗ್ರಹ ಮಾಡುವುದಕ್ಕೆ ತಳ್ಳುತ್ತಾ ಇದ್ದೀರಿ ಏಕೆ. ನೀವು ಅಲ್ಲಿ ಕೆಲಸ ಮಾಡಿದಂತಹವರು. ನಮ್ಮ ಸರ್ಕಾರ ರೈತರ ಸರ್ಕಾರ, ಕಾರ್ಮಿಕರ ಸರ್ಕಾರ ಎಂದು ಹೇಳುವವರು, ವ್ಯಾಪಾರಸ್ಥರ ಸರ್ಕಾರ ಎಂದು ಬಾಯಲ್ಲಿಯೂ ಹೇಳುವುದಿಲ್ಲ. ಇಲ್ಲಿ ಏಕೆ ಮೀನಾ ಮೇಷ ಎಣಿಸುತ್ತಾ ಇರತಕ್ಕಂಥಾದ್ದು, ಏಕೆ ಕೊಡಬಾರದು, Government must a

model employer. ಆ ದೃಷ್ಟಿಯಿಂದ ೧೨೮–ಎ ಅನ್ನು ತಿದ್ದುಪಡಿ ಮಾಡಿ ರೆಕ್ರೂಟ್‌ಮೆಂಟ್ ಅಥಾರಿಟಿ ಮಾಡಿ ಅವರ ಸೇವಾ ನಿಯಮಗಳನ್ನು ಅದರಲ್ಲಿ ನಮೂದು ಮಾಡಿ ಇಂತಿಂತಹ ಪೇ ಸ್ಕೇಲ್ ಇರಬೇಕು, ಪ್ರಮೋಷನಲ್ ಆಪರ್ಚುನಿಟೀಸ್ ಇರಬೇಕು, ಟಿ.ಎ. ವಗೈರೆ ಕೊಡುವುದು ಇರಬೇಕು ಎಂದು ಮಾಡಿದೆ. ನೀವು ಹೇಳಬಹುದು, ಇಲ್ಲಾ ಎಲ್ಲಾ ಬ್ಯಾಂಕ್ಸ್ ನಷ್ಟದಲ್ಲಿವೆ ಕೊಡುವುದಕ್ಕಾಗು ವುದಿಲ್ಲ ಎಂದು. ಅದನ್ನು ನೋಡತಕ್ಕಂಥ ಕೆಲಸ ಸರ್ಕಾರದ್ದು.

ಶ್ರೀ ಆರ್.ಎಲ್. ಜಾಲಪ್ಪ.— ಹಾಗಾದರೆ ಪಿ.ಎಲ್.ಡಿ., ಎಂಪ್ಲಾಯಿಸ್‌ಗೆ ಜವಾಬ್ದಾರಿ ಇಲ್ಲವೇ?

ಶ್ರೀ ಕೆ.ಹೆಚ್. ರಂಗನಾಥ್.—ಜವಾಬ್ದಾರಿ ಇಲ್ಲ ಎಂದು ಯಾರು ಹೇಳಿದ್ದು. ಅವರಿಗಿಂತ ಪ್ರೆಸಿಡೆಂಟ್, ಕಾರ್ಯಕಾರಿ ಸಮಿತಿಗೆ ಏನೂ ಜವಾಬ್ದಾರಿ ಇಲ್ಲವೇ, ಬರೀ ಜೀಪ್ ಹೊಡೆದುಕೊಂಡು ಹೋಗುವುದೇ ಜವಾಬ್ದಾರಿ. ಕಾರ್ಯಕಾರಿ ಸಮಿತಿ ಏನು ಕೆಲಸ ಮಾಡುತ್ತದೆ? ಇವರು ರಿಕವರಿ ಮಾಡದೇ ಹೋದರೆ, ಸಾಲ ವಸೂಲಿ ಮಾಡದೇ ಹೋದರೆ ಅವನನ್ನು ತೆಗೆದುಹಾಕತಕ್ಕ ತಿದ್ದುಪಡಿ ತೆಗೆದುಕೊಂಡು ಬನ್ನಿ, ನಾನು ಬೆಂಬಲ ಕೊಡುತ್ತೇನೆ, ನಮ್ಮ ಪಕ್ಷ ಬೆಂಬಲ ಕೊಡುತ್ತದೆ. ಹಣ ದುರುಪಯೋಗ ಮಾಡಿದರೆ ಅವನನ್ನು ಜೈಲಿಗೆ ಹಾಕತಕ್ಕ ಕಾನೂನು ತೆಗೆದುಕೊಂಡು ಬನ್ನಿ. ಅದು ಅವರ ಜವಾಬ್ದಾರಿ ಅಲ್ಲವೇ, ಬರೀ ಅಧಿಕಾರಿಗಳಿಗೆ ಮಾತ್ರ ಜವಾಬ್ದಾರಿ ಇದೆಯೇ. ಹಾಗಾದರೆ ನಾನು ಕೇಳುತ್ತೇನೆ, ಮಾರ್ಕೆಟಿಂಗ್ ಫೆಡರೇಷನ್‌ನಲ್ಲಿ ನಷ್ಟವಾದರೆ, ಕನ್‌ಸ್ಯೂಮರ್ಸ್ ಫೆಡರೇಷನ್ ನಲ್ಲಿ ನಷ್ಟವಾದರೆ, ಪಿ.ಎಲ್.ಡಿ. ಬ್ಯಾಂಕ್‌ನಲ್ಲಿ ನಷ್ಟವಾದರೆ, ಅಪೆಕ್ಸ್ ಬ್ಯಾಂಕ್‌ನಲ್ಲಿ ನಷ್ಟವಾದರೆ ಅಲ್ಲಿರತಕ್ಕ ಕಾರ್ಯಕಾರಿ ಸಮಿತಿಯವರಿಗೆ ಜವಾಬ್ದಾರಿ ಇಲ್ಲವೇ? ಇವತ್ತು ರಾಜ್ಯದ ಕರ್ತವ್ಯವೇನು ವಿದ್ಯಾವಂತ ಜನಶಕ್ತಿಯನ್ನು ಬಳಸಿಕೊಳ್ಳಬೇಕಾಗುತ್ತದೆ, ಅವಿದ್ಯಾವಂತ ಜನಶಕ್ತಿಯನ್ನು ಬಳಸಿ ಕೊಳ್ಳಬೇಕಾಗುತ್ತದೆ, ವಿದ್ಯಾವಂತ ಜನಶಕ್ತಿಯನ್ನು ಸಕ್ರಿಯವಾಗಿ ಸಂಪತ್ತನ್ನು ಹೆಚ್ಚು ಮಾಡು ವುದಕ್ಕೆ ಬಳಸಿಕೊಳ್ಳಬೇಕಾಗುತ್ತದೆ. ಇವರು ಸಂಪತ್ತನ್ನು ಉತ್ಪಾದನೆ ಮಾಡುವುದರಲ್ಲಿ ನೇರವಾಗ ತಕ್ಕ ನೌಕರರು. ಇವರ ಬಗ್ಗೆ ತಾವು ಯೋಚನೆ ಮಾಡುವುದಿಲ್ಲವೇ? ೧೦೦ ರೂಪಾಯಿಗಳ ಸಂಬಳ ಕೊಟ್ಟರೆ ಆಗಬಹುದೇ? ೧೦೦ ರೂಪಾಯಿಗಳ ಸಂಬಳ ಕೊಟ್ಟರೆ ಕಸ ಹೊಡೆಯುವುದಕ್ಕೂ ಜನ ಬರುವುದಿಲ್ಲ. ಸೊಸೈಟಿಯಲ್ಲಿ ಅಧ್ಯಕ್ಷ ಮತ್ತು ಕಾರ್ಯಕಾರಿ ಸಮಿತಿಯವರು ಏನು ಕೆಲಸ ಹೇಳು ತ್ತಾರೋ ಅದನ್ನು ಇವರು ಮಾಡಬೇಕಾಗುತ್ತದೆ. ಇವರಿಗೆ ಎಲ್ಲಾ ವ್ಯವಸ್ಥೆ ಮಾಡಿಕೊಟ್ಟು ಕೆಲಸ ವನ್ನು ಅಷ್ಟೇ ಕಟ್ಟುನಿಟ್ಟಾಗಿ ತೆಗೆದುಕೊಳ್ಳಿ, ಇದನ್ನು ಏಕೆ ಮಾಡುವುದಿಲ್ಲ ತಾವು. ಎಷ್ಟು ಸಾರಿ ಮೀಟಿಂಗ್ ಕರೆದಿರಿ, ಎಷ್ಟು ಸಾರಿ ಸತ್ಯಾಗ್ರಹ ಮಾಡತಕ್ಕಂಥಾದ್ದು, ಉಪವಾಸ ಮಾಡತಕ್ಕಂಥಾದ್ದು ಸ್ವಾಮಿ, ಪೂಲ್ ಆಫೀಸರ್ಸ್ ಎಂದು ಇರುತ್ತಾರೆ. ಅವರಿಗೆ ಗೊತ್ತಿದೆ, ಅವರನ್ನು ಅಂತರ ಪಿಶಾಚಿ ಗಳನ್ನಾಗಿ ಮಾಡಿಬಿಟ್ಟರು. ಮಾರ್ಕೆಟಿಂಗ್ ಸೊಸೈಟಿಯಲ್ಲಿ, ಸ್ಟೇಟ್ ಲೆವೆಲ್ ಭೂ ಅಭಿವೃದ್ಧಿ ಬ್ಯಾಂಕ್‌ಗಳಲ್ಲಿ ಪೂಲ್ ಆಫೀಸರ್ಸನ್ನು ಬೇರೆ ಬೇರೆ ಮಾಡಿ ಅವರು ರಿಟೈರ್ಡ್ ಆದರೆ ಯಾವ ಇಲಾಖೆ ಯಲ್ಲಿ ಸಂಬಳ ಬರುತ್ತದೆ ಎಂದು ಅವನಿಗೆ ಗೊತ್ತಿಲ್ಲ, ಆ ರೀತಿ ಮಾಡಿದಿರಿ. ರೆಕ್ರೂಟ್‌ಮೆಂಟ್ ಅಥಾರಿಟಿ ಮಾಡಿದ್ದರಿಂದ ರಾಜ್ಯಮಟ್ಟದ ಅಭಿವೃದ್ಧಿ ಬ್ಯಾಂಕ್‌ಗಳಲ್ಲಿ ಖಾಯಂ ನೌಕರರಾಗಿದ್ದಾರೆ, ಅವನು ಕೆಲಸ ಮಾಡುವುದರಲ್ಲಿ ವ್ಯತ್ಯಾಸವಿಲ್ಲವೇ ಕಾನ್‌ಸ್ಟಿಟ್ಯೂಷನ್‌ನಲ್ಲಿ ಏನು ಹೇಳುತ್ತದೆ, Equal pay for equal work. ಅದನ್ನು ಜಾರಿಗೆ ತರುವುದಕ್ಕೆ ಇಷ್ಟವಿಲ್ಲವೇ, ಸ್ಪಷ್ಟವಾಗಿ ಹೇಳಿ, ಇದು ನಮ್ಮ ನೀತಿಯಲ್ಲ ಎಂದು ಹೇಳಿ. ಈ ದೃಷ್ಟಿಯಿಂದ ೧೨೮–ಎ ಏನಿದೆ ಇದರ ಬಗ್ಗೆ ೧೯೭೮ರ ನಂತರ ಬಂದ ಸರ್ಕಾರ ವಿಚಾರ ಮಾಡಿದೆ. ಇದನ್ನು ಜಾರಿ ಮಾಡುವುದಕ್ಕೆ ೫ ವರ್ಷ ಬೇಕೇ ಸ್ವಾಮಿ? ಸೊಸೈಟಿ ನಷ್ಟದಲ್ಲಿದ್ದು ಸಂಬಳ ಕೊಡುವುದಕ್ಕೆ ಆಗುವುದಿಲ್ಲ ಎನ್ನುವುದಾದರೆ ಯಾವು ದಾದರೂ ಒಂದು ನಿಧಿ ಏರ್ಪಾಡು ಮಾಡಿ. ರಾಜ್ಯಮಟ್ಟದ ಅಭಿವೃದ್ಧಿ ಬ್ಯಾಂಕ್‌ನಿಂದ ಅಥವಾ ಸರ್ಕಾರದಿಂದ ಸ್ವಲ್ಪ ಸಬ್ಸಿಡಿ ಹಾಕಿ ಹಣ ಸೇರಿಸಿ ಒಂದು ಫಂಡ್ ಮಾಡಿ ನೌಕರರಿಗೆ ಕೊಡತಕ್ಕ ವ್ಯವಸ್ಥೆ ಮಾಡಿ. It should be the duty of the Government to safeguard every individual as such otherwise, it has no moral right to exist.

ಶ್ರೀ ಆರ್. ಎಲ್. ಜಾಲಪ್ಪ.—ನಾವು ನೀವು ಎಲ್ಲಾ ಸೇರಿ ಈ ವಿಚಾರವನ್ನು ಚರ್ಚೆ ಮಾಡಿ ದ್ದೆವು. ಸರ್ಕಾರ ೫ ಪರ್ಸೆಂಟ್ ಕೊಡಬೇಕು ಮತ್ತು ರಾಜ್ಯ ಭೂ ಅಭಿವೃದ್ಧಿ ಬ್ಯಾಂಕ್‌ನವರು ೫ ಪರ್ಸೆಂಟ್ ಕೊಡಬೇಕೆಂಬುದನ್ನು ತಮ್ಮ ಅಧ್ಯಕ್ಷತೆಯೊಳಗೇ ತೀರ್ಮಾನವಾಗಿತ್ತು. ಅದೇ ರೀತಿ ಯಾಗಿ ಕೊಡುತ್ತಿದ್ದೇವೆ.

ಶ್ರೀ ಕೆ. ಎಚ್. ರಂಗನಾಥ್.—ನಾನು ಕೇಳತಕ್ಕ ಪ್ರಶ್ನೆ ಏನೆಂದರೆ ಇವತ್ತು ಪ್ರೈಮರಿ ಭೂ ಅಭಿವೃದ್ಧಿ ಬ್ಯಾಂಕ್‌ನ ನೌಕರರ ಪ್ರಶ್ನೆ ತಮ್ಮ ಮುಂದೆ ಇದೆಯೋ ಇಲ್ಲವೋ ಅದರ ಬಗ್ಗೆ ತಿರ್ಮಾನ ಮಾಡುವುದಕ್ಕೆ ಏತಕ್ಕೆ ನಿಮ್ಮಿಂದ ಸಾಧ್ಯವಾಗಲಿಲ್ಲ ? ಅವರ ಸೇವಾ ನಿಯಮಾವಳಿಗಳನ್ನು ಮಾಡಿ ಏತಕ್ಕೆ ಅವರಿಗೆ ಸಹಾಯ ಮಾಡಲಿಲ್ಲ, ಅವರಿಗೆ ಕೊಡಬೇಕಾದ ಕನಿಷ್ಟ ಸಂಬಳವೆಷ್ಟು ? ಗ್ರೇಡ್ ಎಷ್ಟು ಎಂಬುದನ್ನು ಮಾಡುವುದಕ್ಕೆ ಆಗಲಿಲ್ಲವೇ ? ನಮ್ಮ ಮಂಗಳೂರು ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ವ್ಯವಸ್ಥೆ ಇತ್ತು. ಅಲ್ಲಿಯವರು ನಮಗೆ ಬಂದು ಸೇರಿದ ಮೇಲೆ ಈ ತೊಂದರೆ ಬರ ತಕ್ಕ ಪರಿಸ್ಥಿತಿ ಉಂಟಾಗಿದೆ, ಆದುದರಿಂದ ಇದರ ಬಗ್ಗೆ ತಾವು ವಿಚಾರ ಮಾಡಬೇಕಾಗುತ್ತೆ. It is a question of utilising the human resources, which is most important. ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ಮಾನವನ ಶಕ್ತಿ ಬಳಸಿಕೊಳ್ಳಬೇಕು, ಅದನ್ನು ಮಾಡದೇ ಹೋದರೆ ಅದಕ್ಕಿಂತ ದೊಡ್ಡ ಅಪರಾಧ ಬೇರೆ ಯಾವುದೂ ಇಲ್ಲ. ಅದರಲ್ಲೂ ವಿದ್ಯಾವಂತ ಜನ ಶಕ್ತಿಯನ್ನು ಬಳಸಿಕೊಳ್ಳದೇ ಹೋದರೆ ಅನ್ ಸ್ಕಿಲ್ಡ್, ಸ್ಕಿಲ್ಡ್ ಎನ್ನುವ ಅರ್ಥದಲ್ಲಿ ಹೇಳುತ್ತಿಲ್ಲ. ಅವರನ್ನು ಕಡೆಗಣಿಸಬೇಕೆಂದು ಹೇಳುತ್ತಿಲ್ಲ, ತಾವು ಇದನ್ನು ಮಾಡದೇ ಹೋದರೆ ಬಹಳ ದೊಡ್ಡ ಅಪವಾಧವಾಗುತ್ತದೆ. ಆ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ತಾವು ಬ್ಯಾಟರಾಯನ ಪುರದ ಸೊಸೈಟಿಯಲ್ಲಿ ಹಸ್ತಕ್ಷೇಪ ಮಾಡಿದ್ದು ಸರಿಯಾದುದಲ್ಲ. ತಾವು ಆ ಸೊಸೈಟಿಗೆ ಷೋಕಾಸ್ ನೋಟೀಸ್ ಕೊಟ್ಟಿರತಕ್ಕದ್ದು ನನ್ನ ಹತ್ತಿರವಿದೆ. ಅದರ ಬಗ್ಗೆ ಇನ್ನೂ ಅನೇಕ ಸ್ನೇಹಿತರು ಮಾತ ನಾಡುವವರಿದ್ದಾರೆ. ಆದುದರಿಂದ ಡಿಟೇಲ್‌ಗೆ ನಾನು ಹೋಗುವುದಿಲ್ಲ. ತಾವು ಬೆಂಗಳೂರು ಜಿಲ್ಲಾ ಬ್ಯಾಂಕಿನ ಬಗ್ಗೆ ಬಹಳ ಕಳಕಳಿಯಿಂದ ಮಾತನಾಡಿದ್ದೀರಿ, ತಾವು ಇವತ್ತು ೭೪ನೇ ನಿಯಮದ ಪ್ರಕಾರ ವಾಗಿ ಎನ್‌ಕ್ವೈರಿ ಮಾಡಿಸುತ್ತೇವೆಂದು ಹೇಳಿದ್ದೀರಿ, ಇದರಿಂದ ಅಲ್ಲಿ ಠೇವಣಿ ಇಡತಕ್ಕವರಿಗೆ ಅನು ಮಾನ ಬರುತ್ತದೆ. ತಾವು ಈ ರೀತಿಯಾಗಿ ಒಂದು ಹೇಳಿಕೆಯನ್ನು ಪತ್ರಿಕೆಯಲ್ಲಿ ಕೊಟ್ಟಿರುವುದರಿಂದ ಅದರಲ್ಲಿ ಠೇವಣಿ ಇಡಲು ಜನ ಮುಂದೆ ಬರುವುದಿಲ್ಲ ಮತ್ತೆ ಠೇವಣಿ ಇಟ್ಟಿರುವವರು ಸಹ ವಾಪಸ್ ತೆಗೆದುಕೊಳ್ಳುತ್ತಾರೆ. Do not you think it is going to harm the interest of the co-operative Bank of the Bangalore district ?

ಶ್ರೀ ಆರ್. ಎಲ್. ಜಾಲಪ್ಪ.—ನೋಟೀಸ್ ನಿಮ್ಮ ಹತ್ತಿರ ಇದೆಯಲ್ಲ, ಆದರಲ್ಲಿ ಏನಿದೆ ಎಂಬುದನ್ನು ಓದಿ ಬಿಡಿ ಈ ಸಭೆಯಲ್ಲಿರತಕ್ಕ ಸದಸ್ಯರೆಲ್ಲರಿಗೂ ತಿಳಿಯಲಿ........

SRI K. H. RANGANATH.—I disagree with the Hon, Minister. I have seen the judgment. I am so sorry for it. With all humility I would say that the Joint Registrar has written this order at the dictacion of the Hon. Minister. I am prepared to prove with all the facts at my disposal. I will pass it on to my friend. I am going to sit here when the Hon. Minister replies. If I have said something which is not factually correct I am prepared to apologise to this House. If that is not so the Minister will have to apologise.

SRI R. L. JALAPPA.—No. Whatever he has stated about deposit is true and what I am going to say is also true.

SRI K. H. RANGANATH.—I am on my legs. I have not yielded I have seen the order of the Joint Registrar. He does not deserve to be the Joint Registrar. He has written this order at the dictation of the Hon. Minister.

(INTERRUPTIONS)

ಶ್ರೀ ಮಾಣಿಕ ರಾವ್ ಪಾಟೀಲ್.—“ * * * ”

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ನಮಗೂ ಗಲಾಟೆ ಮಾಡತಕ್ಕ ಶಕ್ತಿ ಇದೆ.

ಶ್ರೀ ಕೆ. ಎಚ್. ರಂಗನಾಥ್.—ನಾನು ಗಲಾಟೆ ಮಾಡುವುದಕ್ಕೆ ಬಂದಿಲ್ಲ. ಸಾರ್ವಜನಿಕರ ಕೆಲಸ ಮಾಡುವುದಕ್ಕೆ ಬಂದಿದ್ದೇನೆ. ನನಗೆ ಬಂದಂಥ ಮಾಹಿತಿಯ ಬಗ್ಗೆ ಹತ್ತಾರು ಸಲ ನೋಡಿ ಸರಿಯಾಗಿದೆಯೋ ಎಂದು ವಿಚಾರ ಮಾಡಿ ನೋಡಿಯೋ ನಾನು ಇಲ್ಲಿ ಮಂತ್ರಿಗಳವರಿಗೆ ಹೇಳುತ್ತಿದ್ದೇನೆ.

ಶ್ರೀ ಪಿ. ರಾಮದೇವ್.—ನನ್ನದೊಂದು ಕ್ರಿಯಾಲೋಪ......

ಶ್ರೀ ಕೆ. ಎಸ್. ನಾಗರತ್ನಮ್ಮ.—ನಾನು ಬಹಳ ದಿವಸದಿಂದಲೂ ನೋಡುತ್ತಿದ್ದೇನೆ, ಎಲ್ಲರೂ ಪಾಯಿಂಟ್ ಆಫ್ ಆರ್ಡರ್ ಎಂದು ಎದ್ದು ನಿಂತುಕೊಂದು ಏನನ್ನೊ ಹೇಳಿ ಬಿಡುತ್ತಾರೆ...... Whether it is a Point of Order or not, Hon. Speaker should give a ruling in this behalf.

ಶ್ರೀ ಪಿ. ರಾಮದೇವ್.—ಮಾನ್ಯ ಮಾಣಿಕ್ ರಾವ್ ಪಾಟೀಲ್‌ರವರು ಮಾತನಾಡುತ್ತಾ ಒಂದು ಪದವನ್ನು ಬಳಸಿದ್ದಾರೆ. ಅದು ಕಡತದಲ್ಲಿ ಹೋಗಿದೆ ಅದನ್ನು ದಯವಿಟ್ಟು ತೆಗೆಸಿ ಹಾಕ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು “* * *” ಸರ್ಕಾರ ಎನ್ನತಕ್ಕ ಪದವನ್ನು ಪ್ರಯೋಗ ಮಾಡಿದ್ದಾರೆ. ಅದನ್ನು ತಾವು ಕಡತದಿಂದ ತೆಗೆದು ಹಾಕುವುದಕ್ಕಿಂತ ಮುಂಚಿತವಾಗಿ ನಾನು ಒಂದು ಮಾತನ್ನು ಹೇಳುವುದು ಇದೆ.

(ಗೊಂದಲ)

ಶ್ರೀ ಪಿ. ರಾಮದೇವ್.—“* * *” ಸರ್ಕಾರ ಎನ್ನತಕ್ಕದ್ದು ಸರಿಯಲ್ಲ, ಹಿಂದೆಯೆ ಇದರ ಬಗ್ಗೆ ಸಭೆ ತೀರ್ಮಾನ ಮಾಡಿದೆ ಆದುದರಿಂದ ಆ ಪದವನ್ನು ತೆಗೆದು ಹಾಕಿಸಬೇಕು.

ಅಧ್ಯಕ್ಷರು.—ಮಾನ್ಯ ಸದಸ್ಯರು ಹೇಳಿದ ಪದ ಕಡತದಲ್ಲಿ ಹೋಗಿದ್ದರೆ ಅದನ್ನು ತೆಗೆಸಿ ಹಾಕುತ್ತೇನೆ. ಬ್ಯಾಟರಾಯನಪುರದ ಸೊಸೈಟಿ ಬಗ್ಗೆ ಷೋಕಾಸ್ ನೋಟೀಸ್ ಕೊಟ್ಟಿರುವುದು ನನ್ನ ಹತ್ತಿರ ಇದೆ, ಅವರು ಅದಕ್ಕೆ ಉತ್ತರ ಉತ್ತರ ಕೊಟ್ಟಿರುವುದು ಇದೆ, ಉತ್ತರ ಕೊಟ್ಟಮೇಲೆ ಫೈಂಡಿಂಗ್ಸ್ ಇದೆ. I will read the last portion of the order of the District Banks. You also know that there are innumerable irregularities. ರಾಜ್ಯ ಮಟ್ಟದ ಭೂ ಅಭಿವೃದ್ಧಿ ಬ್ಯಾಂಕ್ ಈ ಪರಿಸ್ಥಿತಿಗೆ ಬಂದಾಗ ಸರ್ಕಾರದ ಗೌರವವನ್ನು ಉಳಿಸತಕ್ಕ ದೃಷ್ಟಿಯಿಂದ ಮತ್ತು ನಮಗೆ ಸಾಲ ಕೊಡತಕ್ಕವರಲ್ಲಿ ನಂಬಿಕೆ ಇರಬೇಕೆಂಬ ದೃಷ್ಟಿಯಿಂದ ರಿವಿಜನ್ ಪೆಟಿಷನ್ ತೆಗೆದುಕೊಂಡು ಸ್ಟೇ ಆರ್ಡರ್ ತೆಗೆದುಕೊಂಡು ರಿಜಿಸ್ಟ್ರಾರ್‌ರವರ ಗೌರವ ಉಳಿಸಿ ಎಂಬ ಮಾತನ್ನು ಏತಕ್ಕೆ ಹೇಳಿದೆ ಎಂದರೆ ನಾವು ಮಂತ್ರಿಗಳಾಗಿ ಕೆಲಸ ಮಾಡುವುದು ಅಷ್ಟೇ ಅಲ್ಲ, ನಾವು ಸಾರ್ವಜನಿಕ ಸೇವೆಗಳನ್ನು ಮಾಡ ಬೇಕಾಗುತ್ತದೆ. ಡಿಪಾಸಿಟ್ ಇಟ್ಟವರ ಮನಸ್ಸಿನಲ್ಲಿ ಶಂಕೆ ಬಂದು ನಾಳೆ ದಿವಸ ಡಿಪಾಸಿಟ್‌ನ್ನು ವಿತ್‌ಡ್ರಾ ಮಾಡಿದರೆ ಬ್ಯಾಂಕಿನ ಗತಿ ಏನಾಗಬೇಕು ? ಬ್ಯಾಂಕಿನ ಪದಾಧಿಕಾರಿಗಳು ದುಸ್ಥಿತಿಯಲ್ಲಿದ್ದ ಬ್ಯಾಂಕನ್ನು ಸುಸ್ಥಿಗೆ ತಂದಿದ್ದಾರಲ್ಲ ಅವರ ಮನಸ್ಸಿನಲ್ಲಿ ಏನಾಗಬಹುದೆಂಬ ದೃಷ್ಟಿಯಿಂದ ಇದನ್ನು ಹೇಳುತ್ತೇನೆ.

“In the above circumstances...” I am reading the order. I am going to pass on to my friends also for participating in the debate.

SRI K. B. MALLAPPA.—ಕೇಂದ್ರ ಸರ್ಕಾರದಲ್ಲಿ ಡಿಪಾಸಿಟ್ ಇಟ್ಟದ್ದು ಏನಾಯಿತು ?

---

* Expunged as orderd by the chair:

SRI K. H. RANGANATH.—I am not yielding. "In the above circumstances and in exercise of powers wested in the undersigned under Section 64 of KCS Act 1969 and confirmed by Government notifications dated 13-3-1974, I, N.I. Rangaiah, Joint Registrar of Co-operative Societies, Bangalore Division, Bangalore, do hereby order for an enquiry into the constitution, working, and financial condition of the Bangalore District Central Bank with particular referance to above irregularities, omissions, commissions and irregularities which may come up at the time of enquiry. I appoint the Deputy Registrar of Co-operative Societies..." This is a separate organisation which was created very recently to go into *malpractices* that take place in Societies. Why under Section 64 ? The order continues:

"...Office of the Registrar of Co-operative Societies in Karnataka, Bangalore, as Enquiry Officer to conduct an enquiry in detail as required above and to furnish enquiry report containing his evidence."

In respect of what? In respect of irregularities, omissions, commissions and irregularities that may come up at the time of enquiry. Is this sustainable under law ? If this order is not a good order, if this is a bad order, I am left with no other opinion but to come to conclusion that this has been at the instance of the hon. Minister. I know the Deputy Registrar who is a young man has also been made a victim. I have got show cause notice, I have got the reply and that order has been stayed by the court also. Should he drive the institutions in such a way ? Don't you think this is one instance to prove beynod doubt that there has been Government interference in the affairs of the co-operative societies ? I would request the hon. Members of this august House whether they would justify the action of the Minister.

(ಗೊಂದಲ)

ಇಷ್ಟನ್ನು ಸಹಕಾರ ಇಲಾಖೆಯ ಬಗ್ಗೆ ಹೇಳುತ್ತಾ, ಆಡಿಟ್ ಆಗತಕ್ಕ ಸೊಸೈಟಿಗಳು ಬಹಳ ಇವೆ ಮತ್ತು ಡೀಫಂಕ್ಟ್ ಆಗಿರತಕ್ಕವು ಇವೆ ಎಂದು ಹೇಳುತ್ತೇನೆ. ಪ್ರತಿ ವರ್ಷ ಆಡಿಟ್‌ನಿಂದ ಬರತಕ್ಕ ಹಣ ೧೦ ಕೋಟಿ ರೂಪಾಯಿಗಳು ಇದೆ, ಇದನ್ನೆಲ್ಲಾ ಸರಿಯಾಗಿ ನೋಡಬೇಕೆಂದು ಹೇಳುತ್ತೇನೆ. ಇವತ್ತಿನ ದಿವಸ ಇರತಕ್ಕ ರಿಜಿಸ್ಟ್ರಾರ್‌ರವರು ಒಳ್ಳೆಯವರಿದ್ದಾರೆ, ಅಡಿಷನಲ್ ರಿಜಿಸ್ಟ್ರಾರ್‌ರವರು ಒಳ್ಳೆಯವರಿದ್ದಾರೆ. ನಾವು ಅವರನ್ನು ಕಾನೂನು ಪ್ರಕಾರ ಕೆಲಸ ಮಾಡುವುದಕ್ಕೆ ಬಿಟ್ಟರೆ ಅವರು ಬಹಳ ವ್ಯವಸ್ಥಿತವಾಗಿ ಈ ಒಂದು ಚಳುವಳಿಯನ್ನು ಪ್ರಬಲವಾದ ಚಳುವಳಿಯನ್ನಾಗಿ ಮಾಡುವುದಕ್ಕೆ ಸಹಾಯ ಮಾಡುತ್ತಾರೆ. ಅದನ್ನು ಬಿಟ್ಟು ನಾವು ಆ ವ್ಯವಹಾರದಲ್ಲಿ ಕೈ ಹಾಕುತ್ತಾ ಹೋದರೆ ಆ ರೀತಿ ಮಾಡುವುದಕ್ಕೆ ಬದಲಾಗಿ ತಲೆ ಮೇಲೆ ಕೈಯಿಡತಕ್ಕ ಪರಿಸ್ಥಿತಿ ಬರುತ್ತದೆ. ಇವತ್ತಿನ ದಿವಸ, ವ್ಯವಸಾಯೋತ್ಪನ್ನ ಸಹಕಾರ ಸಂಘಗಳು (ಎಪಿಎಂಸಿ) ತಮ್ಮ ಆಡಳಿತದಲ್ಲಿ ಇವೆ, ತೂಕ ಅಳತೆ ಇಲಾಖೆ ಕೂಡ ತಮ್ಮ ಆಡಳಿತದಲ್ಲಿ ಇದೆ ಮನಿಲೆಂಡರ್ಸ್ ವ್ಯವಹಾರವನ್ನು ತಾವೇ ವ್ಯವಹರಿಸುತ್ತಿದ್ದೀರಿ. ತೂಕ ಮತ್ತು ಅಳತೆ ಇಲಾಖೆ ಯಾರ ಕಣ್ಣಿಗೂ ಬೀಳುವುದಿಲ್ಲ. ಸಂತೆ ದಿವಸ ಮಾತ್ರ ಅದು ವ್ಯಾಪಾರಸ್ಥರ ಕಣ್ಣಿಗೆ ಬೀಳುತ್ತದೆ. ಆ ಇಲಾಖೆಯ ೧೯೭೫–೭೬–೭೭ನೇ ಇಸವಿಯ ಪ್ರಗತಿಯನ್ನು ನೋಡಿದರೆ ಅದು ಸ್ವಲ್ಪ ಚುರುಕುಗೊಂಡಿರುವುದು ಕಾಣುತ್ತದೆ.

ಪೆಟ್ರೋಲ್ ಬಂಕಿನಲ್ಲಿ ಸರಿಯಾಗಿ ಅಳತೆ ಮಾಡುವುದಿಲ್ಲ. ಈ ಇಲಾಖೆ ಇದೆ ಎಂಬುದು ರಾಜ್ಯದ ಜನತೆಗೆ ಗೊತ್ತಿಲ್ಲ. ಇವತ್ತು ಬಂಗಾರದ ತೂಕದಲ್ಲಿ ಕೂಡ ಅವ್ಯವಹಾರವಾಗುವುದನ್ನು ನೋಡ ಬಹುದು. ಹಿಂದೆ ಬಂಗಾರದ ತೂಗಿದಂತೆ ತೂಗಿ ಎಂದು ಹೇಳುತ್ತಿದ್ದರು. ಅಲ್ಲಿ ಕೂಡ ಮೋಸ ಮಾಡತಕ್ಕ ಇವೊತ್ತು ಪರಿಸ್ಥಿತಿ ಇದೆ. ಇದನ್ನೆಲ್ಲಾ ತಾವು ಗಮನಿಸಿ ತಕ್ಕ ಕ್ರಮ ಕೈಗೊಂಡು ಇಲಾಖೆ ಚೆನ್ನಾಗಿ ಕೆಲಸ ಮಾಡುವಂತೆ ಮಾಡಬೇಕು. ಮೊನ್ನೆ ಚುನಾವಣೆ ನಡೆದಾಗ ನಮ್ಮ ಜಿಲ್ಲೆಯಲ್ಲಿ ಮಂತ್ರಿಗಳು ಓಡಾಡಿದರು, ಬೇರೆ ಜಿಲ್ಲೆಗಳಲ್ಲಿ ಏನು ಮಾಡಿದರೋ ಗೊತ್ತಿಲ್ಲ. ಅವರು ನಮ್ಮ ತಾಲ್ಲೂಕಿನಲ್ಲಿ ಓಡಾಡಿದರೂ ನಾನು ಅಲ್ಲಿಗೆ ಹೋಗಲಿಲ್ಲ. ಏಕೆಂದರೆ, ಅದು ನಮಗೆ ಸಂಬಂಧಪಟ್ಟಿಲ್ಲ ಸಂಬಂಧಪಟ್ಟವರು ಮಾಡಿಕೊಳ್ಳಲಿ ಎಂದು ಹೋಗಲಿಲ್ಲ. ಇವತ್ತು ಹಿಂದಿನ ಕಾಲಕ್ಕಿಂತ ಜಾಸ್ತಿಯಾಗಿ ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ಹಣ ಬರುತ್ತದೆ. ೧೯೫೦–೫೧ರಲ್ಲಿ ಒಂದು ರೂಪಾಯಿಗೆ ೪ ಆಣೆ ಸೆಸ್ ವಸೂಲ್ಮಾಡುತ್ತಿದ್ದರೆ ಇವತ್ತಿನ ದಿವಸ ಇನ್ನೂ ಜಾಸ್ತಿ ವಸೂಲ್ಮಾಡುತ್ತಾರೆ. ಆದರೂ ಕೂಡ ಇವರೂ ವಿಶ್ವ ಬ್ಯಾಂಕಿನಿಂದ ಸಾಲ ತೆಗೆದುಕೊಂಡಿದ್ದಾರೆ. ಸಾಲ ತೆಗೆದುಕೊಳ್ಳತಕ್ಕ ಅವಶ್ಯಕತೆಯಾದರೂ ಏನು? ಯಾವತ್ತೂ ನಾವು ನಮ್ಮ ಕಾಲಮೇಲೆ ನಿಲ್ಲಬೇಕೆಂಬುದನ್ನು ಕಲಿಯಬೇಕು. ಅವರು ಏತಕ್ಕೋಸ್ಕರ ಸಾಲ ತಂದಿದ್ದಾರೆಂಬುದು ಗೊತ್ತಿದೆ. ಕಮೀಷನ್ ಏಜೆಂಟಿಗೆ ಮಳಿಗೆ ಕಟ್ಟಿಸಿಕೊಟ್ಟು ಇಲ್ಲಿ ಬರತಕ್ಕ ಸೆಸ್ಸನ್ನು ವಸೂಲ್ಮಾಡಿ ಎಂದು ಹೇಳಿ ಕೂರಿಸುವುದಕ್ಕೋಸ್ಕರ ಸಾಲ ತಂದಿದ್ದಾರೆ. ಯಶವಂತಪುರದಲ್ಲಿ ರೈತ ಭವನ ಕಟ್ಟಿದ್ದು ತಮಗೆ ಗೊತ್ತಿರಬಹುದು. ನಾನು ಮತ್ತು ಚಿಕ್ಕೆಗೌಡರು ಹೋಗಿ ಅದನ್ನು ಓಪನ್ ಮಾಡಿದೆವು. ಅಲ್ಲಿಗೆ ತರಗುಪೇಟೆ ವ್ಯಾಪಾರಸ್ಥರು ಹೋಗುವುದಿಲ್ಲವೆಂದರು. ಆಗ ನಾವು ಸುಪ್ರೀಂ ಕೋರ್ಟಿಗೆ ಹೋಗಿ ಅಲ್ಲಿಗೆ ಹೋಗಲೇಬೇಕೆಂದು ಮಾಡಿದಾಗ ಆ ಜಾಗಕ್ಕೆ ೩-೪ ಲಕ್ಷ ಕೊಡುತ್ತೇವೆಂಬ ಚಲಾವಣೆ ನಡೆದಿದೆ. ಇವತ್ತು ಇಲ್ಲಿ ಒಂದು ರೂಪಾಯಿ ಕೊಳ್ಳುವವರಿಂದ ಮತ್ತು ಒಂದು ರೂಪಾಯಿ ಮಾರುವವರಿಂದ ಎಂದು ಒಟ್ಟು ಎರಡು ರೂಪಾಯಿಗಳ ಹಣ ಬರುತ್ತದೆ ಇದರಲ್ಲಿ ಸುಮಾರು ಹಣ ಪೋಲಾಗತಕ್ಕದ್ದು ಇದೆ. ಇದರಿಂದ ನಷ್ಟವಾಗತಕ್ಕ ಪರಿಸ್ಥಿತಿ ಉಂಟಾಗುತ್ತದೆ.

ಶ್ರೀ ಕೆ. ಮಲ್ಲಪ್ಪ.—ಮಾರುವವರು ಮತ್ತು ಕೊಳ್ಳುವವರು ಅಲ್ಲ, ಕೊಳ್ಳವವರು ಮಾತ್ರ ಎಂದು ಹೇಳಬೇಕು.

ಶ್ರೀ ಮಲ್ಲಾರಗೌಡ ಪಾಟೀಲ್.—ಕೊಳ್ಳುವವರು ತೆಗೆದುಕೊಳ್ಳದಿದ್ದರೆ ಮಾರುವವರು ಕೊಡ ಬೇಕು.

ಶ್ರೀ ಕೆ. ಹೆಚ್. ರಂಗನಾಥ್.—ಇಲ್ಲಿ ವಹಿವಾಟನ್ನು ಚೆನ್ನಾಗಿ ಮಾಡಿದರೆ ಬಹಳ ಹಣ ಬರುತ್ತದೆ ಇವತ್ತಿನ ದಿವಸ ಸಿರಿಕಲ್ಚರ್ ಡಿಪಾರ್ಟ್‌ಮೆಂಟಿನಿಂದ ಲೋನ್ ಬಂದಿದೆ, ಹಳ್ಳಿ ಹಳ್ಳಿಗೂ ಜೀಪ್ ಓಡಾಡುತ್ತಿವೆ. ಬಿಜಾಪುರದಲ್ಲಿ ರೇಷ್ಮೆ ಬೆಳೆಯುತಕ್ಕವನು ರಾಮನಗರಕ್ಕೇ ಬಂದು ಮಾರಬೇಕು, ಮೊಳಕಾಲ್ಮೂರಿನಲ್ಲಿ • ಬೆಳೆಯುತಕ್ಕವನು ಬರಬೇಕು, ಚಳ್ಳಕೆರೆ ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ಆ ವ್ಯವಸ್ಥೆ ಇಲ್ಲ, ಅಲ್ಲಿ ರೈತನು ಗಾಡಿ ಬಿಡುವುದಕ್ಕೆ ಕೂಡ ವ್ಯವಸ್ಥೆ ಇಲ್ಲ, ಒಳ್ಳೆಯ ನೀರಿನ ವ್ಯವಸ್ಥೆ ಇದನ್ನೆಲ್ಲಿ ವ್ಯವಸ್ಥೆ ಮಾಡಿಕೊಟ್ಟರ ಆಗುತ್ತದೆ.

೫–೩೦ ಪಿ.ಎಂ.

ಅಲ್ಲಿ ಚೇರ್ಮನ್ನರ ಚೇಂಬರ್ ನೋಡಬೇಕು ಯಾವ ರೀತಿ ಇದೆ ಎಂದು. ತಮ್ಮ ಚೇಂಬರ್‌ಗಿಂತ ಚೆನ್ನಾಗಿರುವ ರೀತಿಯಲ್ಲಿ ವ್ಯವಸ್ಥೆ ಮಾಡಿಕೊಂಡಿರುತ್ತಾರೆ. ಇದನ್ನೆಲ್ಲಾ ತಾವು ಗಮನಕ್ಕೆ ತೆಗೆದು ಕೊಳ್ಳಬೇಕು. ಚುನಾವಣೆಯಲ್ಲಿ ಏನೋ ಗೆಲ್ಲಿಸಿ ಅಧ್ಯಕ್ಷರನ್ನಾಗಿ ಮಾಡಿದರೆ ಉಪಯೋಗ ಏನೂ ಆಗುವುದಿಲ್ಲ. ಈ ಸೊಸೈಟಿಗಳು, ಸಂಸ್ಥೆಗಳು ತಮ್ಮ ಪಕ್ಷಕ್ಕೆ ಬಂದ ತಕ್ಷಣ ಅಲ್ಲಿ ಲಾಭ ಬರುತ್ತದೆ ಎಂದು ತಿಳಿದುಕೊಂಡರೆ ಬಹಳ ಕಷ್ಟ. Your downfall commences from there itself.

ಶ್ರೀ. ಎಸ್.ಆರ್. ಲಕ್ಷ್ಮಯ್ಯ.—ಅವರ ಅನುಭವ ಇದು.

ಶ್ರೀ. ಕೆ. ಎಚ್. ರಂಗನಾಥ್.—ಆಗಬಹುದು.—ನನಗೆ ಇವರು ಅಧಿಕಾರದಲ್ಲಿರಬೇಕು ಎಂಬ ಆಸೆ ಇದೆ. ನನ್ನ ಅನುಭವದ ಮಾತು ಕೇಳದೇ ಹೋದರೆ ಏನು ಮಾಡುವುದು?

ಶ್ರೀ ಎಸ್.ಆರ್. ಲಕ್ಷ್ಮಯ್ಯ.—ನಾವು ಅಧಿಕಾರಕ್ಕೆ ಬಂದಿದ್ದೇವೆ. ಒಳ್ಳೆಯ ಕೆಲಸ ಮಾಡಿ ಅಧಿಕಾರದಲ್ಲಿರಬೇಕು ಎಂಬ ಆಸೆ ಇದೆ ನಮಗೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ರಂಗನಾಥ್ ಅವರು ಹೇಳುವುದರಲ್ಲಿ ಸತ್ಯಾಂಶ ಇರಬಹುದು. ನಾನೂ ಒಪ್ಪುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧಿಕಾರದಲ್ಲಿದ್ದು ಅನುಭವ ಪಡೆದು ಹೋಗಿ, ಪಡೆಯದೇ ಹೋಗಬೇಡಿ ಎಂದು ಹೇಳುತ್ತಿದ್ದಾರೆ.

ಶ್ರೀ ಎಸ್.ಆರ್.ಬೊಮ್ಮಾಯಿ.—ನಾವು ಅನುಭವ ಪಡೆಯುತ್ತಿದ್ದೇವೆ. ನಾವು ಚುನಾಯಿತ ಪ್ರತಿನಿಧಿಗಳಾಗಿ ಸರ್ಕಾರ ನಡೆಸುವುದಕ್ಕೆ ಸಮರ್ಥರು ಎಂದು ಯಾವ ರೀತಿ ಒಪ್ಪಿಕೊಳ್ಳುತ್ತೇವೋ ಅದೇ ತರಹ ಮತದಾರರಿಂದ ಆರಿಸಿ ಬಂದಿರತಕ್ಕ ಇತರರೂ ಒಳ್ಳೆಯ ಪ್ರತಿನಿಧಿಗಳು ಎಂದು ತಿಳಿದುಕೊಳ್ಳಬೇಕಾಗುತ್ತದೆ.

ಶ್ರೀ ಕೆ. ಎಚ್. ರಂಗನಾಥ್.—ನಾನು ಆ ಅರ್ಥದಲ್ಲಿ ಹೇಳಲಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಅಧಿಕಾರಿಗಳ ಆಡಳಿತಕ್ಕಿಂತ ಒಳ್ಳೆಯದಲ್ಲವೆ ಚುನಾಯಿತ ಪ್ರತಿನಿಧಿಗಳಿರುವುದು ?

ಶ್ರೀ ಕೆ.ಎಚ್. ರಂಗನಾಥ್.—ನಾನು ಇಲ್ಲ ಎಂದು ಹೇಳುವುದಿಲ್ಲ. ದಯವಿಟ್ಟು ಕ್ಷಮಿಸ ಬೇಕು. ನಾನು ಆ ಅರ್ಥದಲ್ಲಿ ಹೇಳಲಿಲ್ಲ. I am always for elections, Personally speaking I am always for elections. ನಾನು ಯಾವುದೋ ಪಕ್ಷದಲ್ಲಿರುವಾಗ ಅದರ ತೀರ್ಮಾನಕ್ಕೆ ಬದ್ಧನಾಗಿರಬೇಕಾಗುತ್ತದೆ, ವೈಯಕ್ತಿಕವಾಗಿ ಹೇಳುವು ದಾದರೆ ಚುನಾವಣೆಗಳು ಒಂದು ದಿವಸವೂ ಮುಂದೆ ಹೋಗಬಾರದು ಎಂದು ಹೇಳುವವನು ನಾನು. ಮೊನ್ನೆ ಸಹಕಾರಿ ಮಂತ್ರಿಗಳು ಸೊಸೈಟಿಗಳ ಚುನಾವಣೆಯನ್ನು ಏತಕ್ಕೆ ಮುಂದೆ ಹಾಕಿದರು ? ಮಳೆ ಕಾರಣದಿಂದ ಮುಂದೆ ಹಾಕಿದ್ದೇವೆ ಎಂದು ಹೇಳುತ್ತಾರೆ, ಸೆಪ್ಟೆಂಬರ್‌ನಲ್ಲಿ ಚುನಾವಣೆ ಆಗಬೇಕಾಗಿತ್ತು. ಎಷ್ಟೋ ಸೊಸೈಟಿಗಳು ಆ ಬಗ್ಗೆ ಪ್ರಚಾರವನ್ನು ಮಾಡಿದ್ದವು, ಚುನಾವಣೆಗಳು ನಿಂತು ಹೋದವು.

ಶ್ರೀ ಆರ್.ಎಲ್. ಜಾಲಪ್ಪ.—ಮಳೆ ಒಂದೇ ಕಾರಣ ಅಲ್ಲ. ಏನು ಕಾರಣ ಎಂಬುದನ್ನು ಉತ್ತರದಲ್ಲಿ ಹೇಳುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್.—ತಾವು ಪಾಠ ಕಲಿತುಕೊಳ್ಳುವ ಹಾಗಿದ್ದರೆ ಕಲಿತುಕೊಳ್ಳಿ. ತಾವು ಹೇಗೆ ಆಡಳಿತ ಮಾಡುತ್ತೀರಿ ಎಂಬುದನ್ನು ನೋಡಬೇಕು ಎಂಬ ಆಸೆ ನಮಗೆ. ಮಧ್ಯದಲ್ಲೇ ಓಡಿಹೋಗುತ್ತೇವೆ ಎಂದರೆ ನಾವೇನು ಮಾಡುವುದಕ್ಕಾಗುತ್ತದೆ ? ಹಿಡಿದುಕೊಳ್ಳುವುದಕ್ಕಾಗು ತ್ತದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಅಧಿಕಾರ ಕಳೆದುಕೊಂಡ ಸ್ವಲ್ಪ ದಿವಸದಲ್ಲೇ ಇಷ್ಟೊಂದು ನಿರಾಶರಾಗಿ ಮಾತನಾಡಿದರೆ ಹೇಗೆ ? ನಾವು ಮಧ್ಯದಲ್ಲಿ ಓಡಿಹೋಗುವ ಪ್ರಶ್ನೆಯೇ ಇಲ್ಲ.

ಶ್ರೀ ಧರ್ಮಸಿಂಗ್.—ಸ್ವಲ್ಪ ದಿವಸದಲ್ಲೇ ಆ ಕಾಲ ಬರುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ಕಾಲ ಬರಲಿ. ಆದರೆ ತಾವು ಮೀನು ನೀರಿನಿಂದ ಹೊರಗೆ ಬಿದ್ದ ಹಾಗೆ ಆಡಬೇಡಿ.

ಶ್ರೀ ಎಂ. ವೀರಪ್ಪಮೊಯಿಲಿ.—ಅಲ್ಲಿ ನಡೆಯುವ ವಿದ್ಯಮಾನಗಳು ತಮಗೇ ಗೊತ್ತಿಲ್ಲವಲ್ಲ ಎಂಬ ಚಿಂತೆ ನಮಗೆ. ಮುಖ್ಯಮಂತ್ರಿಗಳು ರಾಜ್ಯಪಾಲರ ಹತ್ತಿರ ಹೋಗಿ ಡಿಸಾಲ್ವ್ ಮಾಡಿಸಿ ಬೇರೆ ತರಹ ಸರ್ಕಾರ ನಡೆಸುವುದಕ್ಕೆ ಪ್ರಯತ್ನ ನಡೆಸುತ್ತಿದ್ದಾರೆ. ಅದು ತಮಗೆ ಗೊತ್ತಿಲ್ಲ. ಪಾಪ.

ಶ್ರೀ ಎಸ್.ಆರ್. ಬೊಮ್ಮಾಯಿ.—ತಾವು ಹುಷಾರಾಗಿರಬೇಕು. ತಮ್ಮನ್ನು ತೆಗೆಯುವುದಕ್ಕೆ ಸನ್ನಾಹ ನಡೆಯುತ್ತಿದೆ.

ಶ್ರೀ ಕೆ. ಎಚ್. ರಂಗನಾಥ್.—ನಾನು ಜಾಗ್ರತೆ ಮುಗಿಸೋಣ ಎಂದು ಮಾಡಿದ್ದೆ. ನೀನು ಮುಗಿಸಬೇಡ, ಇನ್ನೂ ಮಾತನಾಡು ಎಂಬ ಪರಿಸ್ಥಿತಿಗೆ ತಂದಿದ್ದಾರೆ, ಮಾನ್ಯ ಬೊಮ್ಮಾಯಿಯವರು

ಕೈಗಾರಿಕಾ ಮಂತ್ರಿಯಾಗಿ ೫ ವರ್ಷ ಇರಬೇಕು. ಅದನ್ನು ನಾವು ನೋಡಬೇಕು, ಅವರ ಕೈಗಾರಿಕಾ ನೀತಿ ಯಾವ ರೀತಿ ಇರುತ್ತದೆ ಎಂಬುದನ್ನು ನೋಡಬೇಕು ಎಂಬ ಆಸೆ ನಮಗೆ ಇಲ್ಲ. ನಾನು ಮಧ್ಯದಲ್ಲೇ ಹೋಗುತ್ತೇನೆ ಎಂದರೆ ನಾವೇನು ಮಾಡುವುದು? ಪಕ್ಷಾಂತರ ಮಾಡುವುದು ಸರಿಯಲ್ಲ. ಅದೊಂದು ಪಿಡುಗು ಎಂದು ಹೇಳಿದ್ದರು. ಇವರ ಸರ್ಕಾರಕ್ಕೆ ಆಶೀರ್ವಾದ ಮಾಡಿರ ತಕ್ಕ ಹಿರಿಯರಾದ ನಿಜಲಿಂಗಪ್ಪನವರು ಪಕ್ಷಾಂತರ ಮಾಡುವವರಿಗೆ ಕಲ್ಲಿನಲ್ಲಿ ಹೊಡೆಯಬೇಕು ಎಂದು ಹೇಳಿದ್ದರು. ಅದನ್ನು ಹೇಳಿದಾಗ I did not react because he comes from my own district. ಈಗ ತಾವು ಮಾಡಿದ್ದೇನು? ಪಕ್ಷಾಂತರ ನಿಷೇಧದ ಮಸೂದೆ ತಂದು ತಾವು ಮಾಡಿದ್ದೇನು?

ಶ್ರೀ ಎಸ್.ಆರ್. ಬೊಮ್ಮಾಯಿ.—ನಾವು ಮಾಡಿದ್ದನ್ನು ಕೇಳುವುದಕ್ಕೆ ನಿಮಗೇನು ಅಧಿಕಾರ ಇದೆ?

ಶ್ರೀ ಕೆ.ಎಚ್. ರಂಗನಾಥ್.—ಕಲ್ಲು ಎಸೆದ ಮೇಲೆ ಎಸೆದುಕೊಳ್ಳುವುದಕ್ಕೂ ತಯಾರಾಗಿರ ಬೇಕು, ಪಕ್ಷಾಂತರ ನಿಷೇಧದ ಮಸೂದೆ ತಂದು ಪಕ್ಷಾಂತರದ ಪಿಡುಗನ್ನು ತಾವೇ ಪ್ರಾರಂಭ ಮಾಡಿ ದಿರಲ್ಲ ನನ್ನ ಸ್ನೇಹಿತರೊಬ್ಬರು ಬಹಳ ವರ್ಷಗಳಿಂದ ನನ್ನ ಗೆಳೆಯರಾಗಿದ್ದವರು, ಸೋಷಲಿಸ್ಟ್ ಪಾರ್ಟಿ ಯಿಂದ ಹೊರಗೆ ಬಂದಂಥವರು, ಮೊನ್ನೆ ಗೆದ್ದು ಬಂದು ಇಲ್ಲಿ ಕುಳಿತಿದ್ದರೆ ಮೆಲ್ಲಗೆ ನಿಮ್ಮ ಕಡೆ ಸೇರಿಸಿಕೊಂಡುಬಿಟ್ಟರಲ್ಲ ಈಗ ಯಾರಿಗೆ ಕಲ್ಲಿನಲ್ಲಿ ಹೊಡೆಯಬೇಕು? ನಿಮ್ಮ ನೀತಿ ಏನಾಯಿತು? ಬಿಲ್ ತಂದಿದ್ದ ನಿಮ್ಮ ನೀತಿ ಗಾಳಿಗೆ ಹೋಯಿತೇ?

ಶ್ರೀ ಎಸ್.ಆರ್. ಬೊಮ್ಮಾಯಿ.—ಯಾರೂ ಪಾಪ ಮಾಡಿಲ್ಲದಿದ್ದವರೂ ಕಲ್ಲಿನಲ್ಲಿ ಹೊಡೆಯಲಿ ಕಲ್ಲು ಹೊಡೆಯತಕ್ಕ ನೈತಿಕ ಅಧಿಕಾರ ಇದ್ದರೆ ಹೊಡೆಯಲಿ. ಆದರೆ ಹಿಮಾಚಲದಲ್ಲಿ ಏನು ನಡೆ ಯುತ್ತಿದೆ, ಕೇರಳದಲ್ಲಿ ಏನು ನಡೆಯುತ್ತಿದೆ.........

(ಗೊಂದಲ)

MR. SPEAKER.—Order Please.

ಶ್ರೀ ಎಂ. ವೀರಪ್ಪ ಮೊಯಿಲಿ.—ಪಾಪದ ಕೆಲಸ ಮಾಡುವುದಕ್ಕೆ ನಾಚಿಕೆ ಆಗುವುದಿಲ್ಲವೇ ನಿಮಗೆ?

ಶ್ರೀ ಎಸ್. ಆರ್. ಬೊಮ್ಮಾಯಿ.—ಹೇಳುವುದಕ್ಕೆ ನಿಮಗೇನು ಅಧಿಕಾರ ಇದೆ? ನಿಮಗೆ ನಾಚಿಕೆ ಆಗಬೇಕು. ಬಿ.ಜೆ.ಪಿ. ಗೆಳೆಯರು, ಸಿ.ಪಿ.ಎಂ. ಗೆಳೆಯರು ಹೇಳಿದರೆ ನಾವು ಒಪ್ಪಿಕೊಳ್ಳು ತ್ತೇವೆ. ನಿಮಗೆ ನೈತಿಕ ಹಕ್ಕಿಲ್ಲ.

ಶ್ರೀ ಧರ್ಮಸಿಂಗ್.—ನಿಮ್ಮ ಮಸೂದೆ ಎಲ್ಲಿ ಹೋಯಿತು?

ಶ್ರೀ ಎಂ. ವೀರಪ್ಪ ಮೊಯಿಲಿ.—ನಾಚಿಕೆ ಇಲ್ಲ ನಿಮಗೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ನಿಮಗೆ ಹೇಳುವುದಕ್ಕೆ ನೈತಿಕ ಅಧಿಕಾರವೇ ಇಲ್ಲ, ಹರಿ ಯಾಣದಲ್ಲಿ ಏನು ಮಾಡಿದ್ದೀರಿ? ಹಿಮಾಚಲದಲ್ಲಿ ಏನು ಮಾಡಿದ್ದೀರಿ? ಕೇರಳದಲ್ಲಿ ಏನು ಮಾಡಿ ದ್ದೀರಿ? ನಿಮಗೆ ಅಧಿಕಾರ ಇದೆಯೇ ಹೇಳುವುದಕ್ಕೆ?

(ಗೊಂದಲ)

ಶ್ರೀ ಕೆ.ಎಚ್. ರಂಗನಾಥ್.—ಮಾತಿಗೆ ಮಾತು ಬಂದಿದ್ದರಿಂದ ಹೇಳಿದೆ.

ಶ್ರೀ ಎಸ್. ಬಂಗಾರಪ್ಪ.—ಪ್ರಜಾಪ್ರಭುತ್ವ ಮೌಲ್ಯಗಳ ಬಗ್ಗೆ ದೊಡ್ಡ ಭಾಷಣ ಮಾಡಿದ್ದೀರಿ, ಮುಖ್ಯಮಂತ್ರಿಗಳೂ ಮಾಡಿದ್ದಾರೆ. ಇಲ್ಲಿ ಪಕ್ಷಾಂತರ ಮಸೂದೆಯನ್ನು ತಂದು ಅದು ಸಭೆಯ ಮುಂದೆ ಇರುವಾಗ ತಾವೇ ಪಕ್ಷಾಂತರ ಮಾಡಿಸಿದಿರಲ್ಲ ಇದಕ್ಕೆ ಬೇರೆ ಯಾರೂ ಕಲ್ಲು ತೆಗೆದುಕೊಂಡು ಹೊಡೆಯುವುದು ಬೇಡ, ನೀವೇ ಕಲ್ಲು ತೆಗೆದುಕೊಂಡು ಹಣೆಗೆ ಹೊಡೆದುಕೊಳ್ಳಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ನಾಳೆಯೇ ಮಸೂದೆಯನ್ನು ಮಂಡಿಸುತ್ತೇವೆ, ಒಪ್ಪಿ ಕೊಳ್ಳಿ, ಪಾಸ್ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ಅಲ್ಲಿಯವರೆಗೆ ಪಕ್ಷಾಂತರ ಮಾಡಬಹುದೇ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಅಲ್ಲಿಯವರೆಗೂ ಅಧಿಕಾರ ಇದೆ.

(ಮತ್ತೆ ವಿರೋಧ ಪಕ್ಷದವರು ಒಟ್ಟಿಗೆ ಎದ್ದು ನಿಂತು ಕೂಗಾಡುತ್ತಿದ್ದರು ಗೊಂದಲವಾಯಿತು)

ಅಧ್ಯಕ್ಷರು.— ನಾಳೆ ರಜ ಬೇಕು ಎಂದು ಎರಡೂ ಕಡೆಯವರು ಕೇಳುತ್ತಿದ್ದೀರಿ, ನಾಳೆ ಬಿಲ್ ತಂದರೆ ನಾಳೆಯೂ ಕುಳಿತುಕೊಳ್ಳಬೇಕೇ ?

ಶ್ರೀ ಎಂ.ಎಸ್. ಕೃಷ್ಣನ್ —ವಿಷಯ ಬಹಳ ಸ್ವಾರಸ್ಯವಾಗಿದೆ.

ಶ್ರೀ ಎಚ್. ಗಂಗಾಧರನ್.—ಇಬ್ಬರು ದೇವದಾಸಿಯರು ನಿಂತುಕೊಂಡು ಇದರಲ್ಲಿ ಪತಿವ್ರತೆ ಯಾರು ಎಂದು ಜಗಳ ಆಡಿದಂತಾಗಿದೆ.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಬೊಮ್ಮಾಯಿಯವರು ಪಕ್ಷಾಂತರ ನಿಷೇಧ ಮಸೂದೆ ಪಾಸಾಗುವವರೆಗೆ ಪಕ್ಷಾಂತರ ಮಾಡುವುದಕ್ಕೆ ಅಧಿಕಾರ ಇದೆ ಎಂದು ಅರ್ಥ ಬರುವ ರೀತಿಯಲ್ಲಿ ಮಾತನಾಡಿದರು, ಪಕ್ಷಾಂತರ ಮಾಡಕೂಡದು ಎಂದು ಮಸೂದೆಯನ್ನು ತಂದು ಯಾರು ಮಸೂದೆ ತಂದರೋ ಅವರೇ ಈ ರೀತಿ ಮಾತನಾಡಿದರೆ ಮಸೂದೆಗೆ ಏನು ಬೆಲೆ ಬರುತ್ತದೆ ?

ಅಧ್ಯಕ್ಷರು.—ಈಗ ಪಕ್ಷಾಂತರ ಮಸೂದೆ ಬಗ್ಗೆ ಚರ್ಚೆ ಮಾಡುತ್ತಿಲ್ಲ. ಸಹಕಾರ ಇಲಾಖೆ ಬೇಡಿಕೆ ಮೇಲೆ ಚರ್ಚೆ ಮಾಡುತ್ತಿದ್ದೇವೆ, Please co-operate with the Chair. Let us go on with the Co-operation.

SRI. M.S. KRISHNAN.—I was only very much worried about the manner in which the hon. Minister spoke, I never expected such a thing from him, ಏತಕ್ಕೆ ಈ ರೀತಿ ಅವರು ಬಾಂಬ್ ಹಾಕಿದರೋ ಗೊತ್ತಾಗಲಿಲ್ಲ. ಮಾನ್ಯ ಖರ್ಗೆಯವರು ತಿಳಿದುಕೊಳ್ಳಬೇಕು. ನಾವೇನೂ ಮಂತ್ರಿ ಮಂಡಲದಲ್ಲಿ ಸ್ಥಾನ ಕೇಳಿಲ್ಲ. ಅವರು ಒಳ್ಳೆಯದನ್ನು ಮಾಡಿದರೆ ಅದನ್ನು ಒಳ್ಳೇದು ಎಂದು ಹೇಳುತ್ತೇವೆ. ಅವರು ಕೆಟ್ಟದ್ದನ್ನು ಮಾಡಿದರೆ ಅದು ಕೆಟ್ಟದ್ದು ತಿದ್ದಿಕೊಳ್ಳಿ ಎಂದು ಹೇಳುತ್ತೇವೆ. ನಮ್ಮಲ್ಲಿ ಪಕ್ಷಾಂತರದ ಪ್ರಶ್ನೆಯೇ ಬರುವುದಿಲ್ಲ. ಇವರು ಒಳ್ಳೆಯ ಕೆಲಸ ಮಾಡಿದಾಗ ನಾವು ಕೈಬಿಡುವ ಪ್ರಶ್ನೆಯೇ ಬರುವುದಿಲ್ಲ. ಇವರು ಒಳ್ಳೆಯ ಕೆಲಸ ಮಾಡುತ್ತಾರೆ ಎನ್ನುವ ಅಭಿಪ್ರಾಯ ಇದೆ. ಮಾನ್ಯ ಖರ್ಗೆಯವರು ದಾರಿ ತಪ್ಪಿ ಆ ರೀತಿ ಹೇಳಿದರು ಎಂದು ಕಾಣುತ್ತದೆ.

(ಗೊಂದಲ)

ಶ್ರೀ ಎಸ್.ಆರ್. ಬೊಮ್ಮಾಯಿ.—ನಾನು ಹೇಳಿದ್ದು ಅಂತಹ ಕಾನೂನು ಈ ರಾಜ್ಯದಲ್ಲಿ ಬರುವವರೆಗೆ ಅವಕಾಶ ಇದೆ ಎಂದು ಹೇಳಿದೆ. ಅವಕಾಶ ಇದೆ ಎಂದು ಲೀಗಲ್ ಅಸ್ಪೆಕ್ಟ್ ಹೇಳುತ್ತಿದ್ದೇನೆ. ಪಕ್ಷಾಂತರ ಮಾಡಬೇಕೆಂದು ನಾನು ಹೇಳುವವನಲ್ಲ. ಅದಕ್ಕೆ ನಾನು ಪ್ರೋತ್ಸಾಹ ಕೊಟ್ಟಿಲ್ಲ. ಅವರು ಪಕ್ಷ ಬಿಟ್ಟು ಬಂದಿದ್ದಾರೆ. ಪಕ್ಷಾಂತರಕ್ಕೆ ನಾವು ಪ್ರೋತ್ಸಾಹ ಮಾಡುವುದಿಲ್ಲ. ಅದಕ್ಕೆ ಅವಕಾಶ ಇದೆ ಎಂದು ಹೇಳಿದೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಈಗ ಮಾಡಿದ್ದಾದರೂ ಏನು? ಅದಕ್ಕೆ ಉತ್ತರ ಕೊಡಿ ಸ್ವಾಮಿ

(ಗೊಂದಲ)

ಶ್ರೀ ಎಸ್.ಆರ್. ಬೊಮ್ಮಾಯಿ.—ಜನತಾ ಸಿಂಬಲ್‌ಮೇಲೆ ಗೆದ್ದು ನೀವು ಪಕ್ಷಾಂತರ ಮಾಡಿದ್ದೀರಿ ಮೊದಲು. ನೀವು ಮೊದಲು ಪಕ್ಷಾಂತರಿಗಳು.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಬಣ್ಣವೆಲ್ಲಾ ಬಯಲಾಯಿತು ಬಿಡಿ. ಹಳೇದನ್ನೇ ನೀವು ಮತ್ತೆ......

ಶ್ರೀ ಎಸ್.ಆರ್. ಬೊಮ್ಮಾಯಿ.—ಜನತಾ ಪಕ್ಷದ ಚಿನ್ಹೆಯಲ್ಲಿ ನಿಂತು ಗೆದ್ದು ಪಕ್ಷಾಂತರ ಮಾಡಿದ್ದೀರಿ. ನೀವು ಮೊದಲ ಪಕ್ಷಾಂತರಿ. ಈ ರಾಷ್ಟ್ರದಲ್ಲಿ ಕಾನೂನು ಬರಲೇ ಬೇಕು. ಆ ಕಾನೂನನ್ನು ಈಗಾಗಲೇ ಸಿದ್ಧ ಮಾಡಿದ್ದೇವೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—You have no right to say that, You have loss that right......ಯಾವಾಗ ಪಕ್ಷಾಂತರದ ಬಗ್ಗೆ ತಾವು ಒಪ್ಪಿದ್ದೀರಿ, ಆಗ ಎಲ್ಲಾ ಹೋಯಿತು

ಶ್ರೀ ಎಸ್.ಆರ್. ಬೊಮ್ಮಾಯಿ.—You are the first defector. You have no moral right......ನೀವು ರಾಜೀನಾಮೆ ಕೊಡಬೇಕು. ಪಕ್ಷಾಂತರ ಮಾಡಿದವರು ಮೊದಲು ರಾಜೀನಾಮೆ ಕೊಡಬೇಕು...

ಶ್ರೀ ಎಸ್. ಬಂಗಾರಪ್ಪ.—ನನ್ನ ರಾಜೀನಾಮೆ ಬೇಕೆ? 9 ಚುನಾವಣೆಗಳಲ್ಲಿ ಗೆದ್ದು ಬಂದಿರುವ ನನ್ನ ವಿಚಾರದಲ್ಲಿ ತಾವು ಏನು ಮಾಡುತ್ತೀರಿ ಬಿಡಿ. ಮೊದಲು ನೀವು ರಾಜೀನಾಮೆ ಕೊಡಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಸರಿ. ನಾನೂ ರೆಡಿ ಇದ್ದೇನೆ. ಇಬ್ಬರೂ ಪ್ರಜೆಗಳ ಮುಂದೆ ಹೋಗೋಣ.

ಶ್ರೀ ಎಸ್. ಬಂಗಾರಪ್ಪ.—ಒಂದು ಕೆಲಸ ಮಾಡೋಣ, ನಾವು ಕ್ರಾಂತಿ ರಂಗ ಹಾಗೂ ಜನತಾ ಪಕ್ಷ ಎಂಬುದನ್ನು ಬಿಟ್ಟು ನಮ್ಮ ಸ್ವಂತ ಚಿನ್ಹೆಯ ಮೇಲೆ ಚುನಾವಣೆಗೆ ನಿಲ್ಲೋಣ. ನೀವೂ ರಾಜೀನಾಮೆ ಕೊಡಿ, ನಾನೂ ರಾಜೀನಾಮೆ ಕೊಟ್ಟು ಬರುತ್ತೇನೆ. ಆಗ ನೋಡೋಣ.

(ಗೊಂದಲ)

ಅಧ್ಯಕ್ಷರು.—ಹೀಗಾದರೆ ಹೇಗೆ? ನಾವು ಕಾರ್ಯಕಲಾಪ ಮಾಡುವುದು ಬೇಡವೇ? ಪಕ್ಷಾಂತರದ ಬಗ್ಗೆ ಚರ್ಚೆ ಏಕೆ?

ಶ್ರೀ ಕೆ.ಹೆಚ್. ರಂಗನಾಥ್.—ನಾವು ಸಹಕಾರದ ಬೇಡಿಕೆ ಬಗ್ಗೆ ಚರ್ಚೆ ಮಾಡೋಣ

ಶ್ರೀ ಲಕ್ಷ್ಮೀನರಸಿಂಹಯ್ಯ.—ಅವರು ಪಕ್ಷಾಂತರ ಮಾಡಿದ್ದಲ್ಲ. ನಮ್ಮ ನಡತೆ ನೋಡಿ ಅವರು ಬಂದಿದ್ದಾರೆ.

(ಗೊಂದಲ)

ಶ್ರೀ ಕೆ.ಹೆಚ್. ರಂಗನಾಥ್.—ಬೊಮ್ಮಾಯಿಯವರು ಪ್ರಚೋದನೆ ಮಾಡಿದರು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಗಂಗಾಧರನ್ ಅವರು ಜನತಾ ಹಾಗೂ ಕಾಂಗ್ರೆಸ್ ಪಕ್ಷದವರನ್ನು ದೇವದಾಸಿಯರಿಗೆ ಹೋಲಿಸಿದರು. ಅವರೇನು ದೇವದಾಸರಾ?

ಶ್ರೀ ಕೆ.ಎಚ್. ರಂಗನಾಥ್.—ಈಗ ಮಾನ್ಯ ಬೊಮ್ಮಾಯಿಯವರು ಪ್ರಸ್ತಾಪ ಮಾಡಿದ್ದರಿಂದ ಇಲ್ಲಿ ದೃಷ್ಟಾಂತ ನಡೆಯಿತು. ಇಲ್ಲಿ ನಿಮ್ಮ ನೀತಿಗೆ ಧಕ್ಕೆ ಬಂದಿದೆಯೆಂದು ನಾನು ಹೇಳಿದೆ ಅಷ್ಟೇ. ಇದು ಯಾಕೆ ಸ್ವಾಮಿ? ಕಂಡದ್ದನ್ನು ಕಂಡ ಹಾಗೆ ಹೇಳಿದರೆ ಕೆಂಡದಂತೆ ಕೋಪ ಯಾಕೆ ಸ್ವಾಮಿ? ಮಾನ್ಯ ಘೂಳಪ್ಪನವರನ್ನು ನೋಡಿದ ಮೇಲೆ ಉಗ್ರಾಣದ ಬಗ್ಗೆ ಮಾತನಾಡಲಿಲ್ಲವಲ್ಲಾ ಎಂದುಕೊಂಡೆ ಇವರನ್ನು ಉಗ್ರಾಣ ಕಾರ್ಪೊರೇಷನ್ನಿಗೆ ಚೇರ್ಮನ್ ಮಾಡಿದ್ದಾರೆಂದು ಪೇಪರ್‌ನಲ್ಲಿ ಓದಿ ನನಗೆ ಸಂತೋಷವಾಯಿತು. ಇವರಿಗೆ ಗೋಡೌನ್, ಗೀಡೌನ್‌ಗಳ ಬಗ್ಗೆ ಅನುಭವ ಚೆನ್ನಾಗಿ ಇದೆ. ಮೊನ್ನೆ ಅಲ್ಲಿಗೆ ಫೋನ್ ಮಾಡಿದಾಗ ಇವರು ಚಾರ್ಜ್ ತೆಗೆದುಕೊಂಡೇ ಇಲ್ಲ ಎಂದು ಹೇಳಿದರು.

ಶ್ರೀ ಜಿ.ಎಫ್. ಉಪ್ನಾಳ್.—ನಮ್ಮನ್ನು ಕೇಳಿ ಚಾರ್ಜ್ ತೆಗೆದುಕೊಳ್ಳುತ್ತೇನೆ ಸ್ವಾಮಿ

ಶ್ರೀ ಕೆ.ಎಚ್. ರಂಗನಾಥ್.—ಮಾನ್ಯ ಘೂಳಪ್ಪನವರಿಗೂ ಕೈಕೊಟ್ಟರೋ ಏನೋ ಎಂದು ಕೇಳಿದೆ ಅಷ್ಟೇ ಸ್ವಾಮಿ

ಒಬ್ಬ ಮಾನ್ಯ ಸದಸ್ಯರು.—ಅವರ ಪೇಠವೇ ಒಂದು ಗೋಡೌನ್ ಸ್ವಾಮಿ

ಶ್ರೀ ಕೆ. ಎಚ್. ರಂಗನಾಥ್.—ಈ ಒಂದು ವೇರ್‌ಹೌಸಿಂಗ್ ಕಾರ್ಪೊರೇಷನನ್ನು ವ್ಯವಸ್ಥಿಗೊಳಿಸತಕ್ಕ ಬಗ್ಗೆ...

ಶ್ರೀ ಜಿ. ಎಫ್. ಉಪ್ಪಾಳ್.—ನನ್ನನ್ನು ಏಕೆ ಸುಮ್ಮನೆ ಹೊರಗೆಳೀತೀರಿ ಸ್ವಾಮಿ?

ಶ್ರೀ ಕೆ. ಹೆಚ್. ರಂಗನಾಥ್.—ನಾನು ಅವರಿಗೆ ಸಹಾಯ ಮಾಡುತ್ತಿದ್ದೇನೆ. ಅವರನ್ನು ನೋಡಿದರೆ ನನಗೆ ಪ್ರೀತಿ ಅಷ್ಟೇ. ಘೂಳಪ್ಪನವರ ಮೇಲೆ ನನಗೆ ಪ್ರೇಮ. ನಾನು ಘೂಳಪ್ಪನವರ ಜೊತೆ ಸ್ವಂತದ್ದು ಏನೋ ಮಾತನಾಡಬೇಕಾಗಿತ್ತು. ಅದಕ್ಕೆ ನಾನು ಶಾಸಕರ ಭವನಕ್ಕೆ ಫೋನ್ ಮಾಡಿದರೆ ಅಲ್ಲಿ ಅವರು ಇರಲಿಲ್ಲ. ಆಮೇಲೆ ಅವರ ಆಫೀಸಿಗೆ ಫೋನ್ ಮಾಡಿದರೆ ಯಾರೋ ಹೆಣ್ಣು ಮಗಳ ಫೋನ್ ತೆಗೆದುಕೊಂಡು ಅವರಿನ್ನೂ ಚಾರ್ಜ್ ತೆಗೆದುಕೊಂಡಿಲ್ಲ ಎಂದರು. ಅಲ್ಲಿ ಹೆಣ್ಣು ಮಗಳು ಫೋನ್ ತೆಗೆದುಕೊಂಡಾಗಲೇ ನನಗೆ ಅನುಮಾನ ಬಂತು. ಘೂಳಪ್ಪನವರು ಹೋದ್ಕಡೆ ಹೆಣ್ಮಕ್ಳು ಹೇಗಿರ್ತಾರೆ ಎಂದು ನನಗೆ ಅನುಮಾನ ಬಂತು. ಅಲ್ಲಿ ಯಾರಾದರೂ ದುಡೂತಿ ಗಂಡಸು ಇರಬೇಕೆಂದು ತಿಳಿದಿದ್ದು ಹೆಣ್ಣು ಮಗಳ ಧ್ವನಿ ಕೇಳಿದಾಗಲೇ ನನಗೆ ಅನುಮಾನ ಬಂತು. ಆಕೆ ಇನ್ನೂ ಚಾರ್ಜ್ ತೆಗೆದುಕೊಂಡಿಲ್ಲವೆಂದು ಹೇಳಿದರು. ಇವರು ಆ ಇಲಾಖೆಯ ಚಾರ್ಜ್ ತೆಗೆದುಕೊಂಡಮೇಲೆ ಆ ಇಲಾಖೆಯನ್ನು ವ್ಯವಸ್ಥೆಗೊಳಿಸಬೇಕಾಗಿದೆ, ಇವತ್ತು ಈ ಇಲಾಖೆಯ ವತಿಯಿಂದ ಎಲ್ಲೆಲ್ಲಿ ಉಗ್ರಾಣಗಳನ್ನು ಕಟ್ಟಬೇಕೆಂದು ಜಾಗಗಳನ್ನು ಗುರ್ತಿಸಿ ಅಲ್ಲೆಲ್ಲಾ ಉಗ್ರಾಣಗಳನ್ನು ಕಟ್ಟಬೇಕೋ ಆ ಬಗ್ಗೆ ಸರಿಯಾದ ವ್ಯವಸ್ಥೆ ಇಲ್ಲ. ನಮ್ಮ ಅರಸೀಕೆರೆ, ದಾವಣಗೆರೆ ಕಡೆ, ಕೆಲವು ಇವೆ. ಇವತ್ತು ಎಲ್ಲಿ ಹೆಚ್ಚು ಆಹಾರಧಾನ್ಯಗಳನ್ನು ರೈತರು ಬೆಳೆಯುತ್ತಾರೆ ಅಂತಹ ಕಡೆ ಉಗ್ರಾಣಗಳನ್ನು ಕಟ್ಟುವ ವ್ಯವಸ್ಥೆ ಆಗಬೇಕು. ರೈತರು ಬೆಳೆದ ಧಾನ್ಯವನ್ನು ಇವುಗಳಲ್ಲಿ ಇಟ್ಟು ಅಲ್ಲಿಂದ ರಶೀದಿ ಪಡೆದು ಅವನ್ನು ಬ್ಯಾಂಕ್‌ಗೆ ಪ್ರಡ್ಯೂಸ್ ಮಾಡಿದರೆ ಅದರ ಮೌಲ್ಯದ ಶೇಕಡಾ ೫೦ ರಷ್ಟು ಸಾಲ ಪಡೆಯಬಹುದು. ಹಾಗೂ ಈ ರೈತ ತನಗೆ ಸರಿಯಾದ ಬೆಲೆ ಸಿಗುವವರೆಗೂ ಈ ಧಾನ್ಯವನ್ನು ಅಲ್ಲಿ ಇಟ್ಟುಕೊಳ್ಳುವ ಅನುಕೂಲ ಇರುತ್ತದೆ. ಆದರೆ ಇವತ್ತು ವ್ಯವಸ್ಥಿತ ಗೋಡನ್‌ಗಳು ಆಗಿಲ್ಲ. ಆದ್ದರಿಂದ ಮಾನ್ಯ ಘೂಳಪ್ಪನವರು ಇಡೀ ರಾಜ್ಯವನ್ನು ಸುತ್ತಿ ಈ ಬಗ್ಗೆ ಪರಿಶೀಲನೆ ಮಾಡಬೇಕೇ ಹೊರತು ಬರೀ ಶಿರಹಟ್ಟಿಗೆ ಹೋಗಿ ಕುಳಿತುಕೊಳ್ಳುವುದಲ್ಲ. ರಾಜ್ಯದ ೨೧ ಜಿಲ್ಲೆಗಳಲ್ಲಿಯೂ ತಿರುಗಿ ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಇವತ್ತು ಈ ಬಗ್ಗೆ ಕೇಂದ್ರದಿಂದ ಬಂದಂತಹ ಹಣವನ್ನು ಉಪಯೋಗಿಸಿಕೊಂಡಿಲ್ಲ. ಇವತ್ತು ಸಹಕಾರಿ ಕ್ಷೇತ್ರದಲ್ಲಿ ಇಷ್ಟು ಮೆಟ್ರಿಕ್‌ಟನ್ ಕೆಪಾಸಿಟಿಯ ಉಗ್ರಾಣಗಳು ಇವೆ ಎಂದು ಹೇಳುತ್ತೀರಿ. ಆದರೆ ಕಳೆದ ೧ ವರ್ಷದಲ್ಲಿ ಸ್ಯಾಂಕ್ಷನ್ ಆಗಿರುವುದು, ಹಾಗೇ ಇರುವವು ಎಷ್ಟು ಇವೆ ಸ್ವಾಮಿ? ೧ ವರ್ಷ, ೨ ವರ್ಷಕ್ಕೂ ಮೇಲ್ಪಟ್ಟು ಸ್ಯಾಂಕ್ಷನ್ ಆಗಿದ್ದು. ಅದಕ್ಕೆ ಹಣ ಕೊಟ್ಟಿದ್ದು ಅವು ಆಗದೇ ಇರುವವು ಎಷ್ಟು ಇವೆ ಸ್ವಾಮಿ? ರೆಗ್ಯುಲೇಟೆಡ್ ಮಾರ್ಕೆಟ್‌ನಿಂದ, ಮಾರ್ಕೆಟಿಂಗ್ ಬೋರ್ಡ್‌ನಿಂದ, ಸಹಕಾರಿ ಕ್ಷೇತ್ರದಿಂದ ವೇರ್ ಹೌಸಿಂಗ್ ಕಾರ್ಪೊರೇಷನ್‌ನಿಂದ ಬರುವ ಹಣವನ್ನು ಒಟ್ಟು ಮಾಡಿ ಕೇಂದ್ರದಿಂದ ಬರುವ ಹಣವನ್ನು ಪಡೆದುಕೊಂಡು ರೈತರು ಹೆಚ್ಚು ಬೆಳೆ ಬೆಳೆಯುವ ಕಡೆ ಗೋಡೌನ್‌ಗಳ ವ್ಯವಸ್ಥೆ ಮಾಡಿ ಕೊಡಬೇಕು. ಇವತ್ತು ಆ ರೀತಿ ಆಗುತ್ತಿಲ್ಲ. ಯಾರು ಕಪ್ಪು ಹಣ ಇಟ್ಟುಕೊಂಡಿರುವ ವ್ಯಾಪಾರಸ್ಥರು ಇದ್ದಾರೆ ಅವರು ರೈತರು ಬೆಳೆದ ಬೆಳೆಗಳನ್ನು ಪಡೆದುಕೊಂಡು ಈ ಗೋಡೌನ್‌ಗಳಲ್ಲಿ ಇಟ್ಟುಕೊಂಡು ಬ್ಯಾಂಕ್‌ನಿಂದ ಸಾಲ ತೆಗೆದುಕೊಳ್ಳುತ್ತಿದ್ದಾರೆ, This grain business is a very good outlet for generation of black money ಇವತ್ತಿನ ದಿವಸ ೨೦೦ ರೂಪಾಯಿಗಳಿಗೆ ಒಂದು ಕ್ವಿಂಟಾಲ್ ರಾಗಿ ಇದೆ. ಇದನ್ನು ಕೂಡ ಜನಗಳಿಗೆ ಸರಿಯಾದ ರೀತಿಯಲ್ಲಿ ಸಿಗುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಸ್ವಾಮಿ, ನಾವು ಕನ್‌ಸಂಪ್‌ಷನ್ ಲೋನ್ ತಂದಿದ್ದೆವು. ಸಾಲ ಕೂಡ ಬಿಡುಗಡೆ ಮಾಡಿದ್ದೆವು. ನೀವು ಅಧಿಕಾರಕ್ಕೆ ಬಂದಮೇಲೆ ಸಹಕಾರ ಸಂಘಗಳ ಮೂಲಕ ಸಾಲ ಕೊಡುವುದು ಸರಿಯಾಗಿ ನಡೆಯುತ್ತಿಲ್ಲ. ಖಾಸಗಿಯಾಗಿ ಕೂಡ ಹಣದ ವ್ಯವಹಾರ ಬಿಗಿಯಾಗಿದೆ, ಇವತ್ತು ರೈತ ಮತ್ತು ರೈತ ಕಾರ್ಮಿಕ ನಿರಾಶೆ ಹೊಂದಿದ್ದಾನೆ. ನಮ್ಮ ಸರ್ಕಾರ ಇದ್ದಾಗ, ಒಂದು ಕುಟುಂಬಕ್ಕೆ ಒಬ್ಬರಿಗೆ ೨೫೦ ರೂಪಾಯಿಗಳ ಕನ್‌ಸಂಪಷನ್ ಲೋನ್ ಕೊಡತಕ್ಕಂಥಾದ್ದು ಇತ್ತು. ರೈತರು ಸದಸ್ಯರಾಗಿಲ್ಲದೇ ಹೋದರೆ, ಸದಸ್ಯತ್ವ ಮಾಡಬೇಕೆಂದು ೨೫ ಲಕ್ಷ ರೂಪಾಯಿಗಳ ಹಣವನ್ನು ಕೊಟ್ಟು, ಅಗ್ರಿಕಲ್ಚರ್ ಲೇಬರರ್, ಸ್ಮಾಲ್ ಅಗ್ರಿಕಲ್ಚರರ್ಸ್ ಸದಸ್ಯರಾಗಿರುವುದಕ್ಕೆ ಷೇರು ಹಣ ಕಟ್ಟುವುದಕ್ಕೆ ವ್ಯವಸ್ಥೆ ಮಾಡಿದ್ದೆವು. ಈ ಒಂದು ಕಾನೂನನ್ನು ೭೫-೭೬ರಲ್ಲಿ ಮಾಡಿದ್ದೆವು. ಕೆಲವು ಸೊಸೈಟಿಯವರು ಬೋರೋ ತಿಮ್ಮ ಎಂದು ಹೇಳಿ ಸಾಲದ ಹಣವನ್ನು ಯಾರ ಯಾರ ಹೆಸರಿನಲ್ಲೋ ಬಿಡುಗಡೆ ಮಾಡಿದರು. ಹಣ ಇಲ್ಲದಾಗ ಒಂದು ರೂಪಾಯಿ ಎರಡು ರೂಪಾಯಿ ಇಡೀ ವರ್ಷ ಓ. ಟಿ. ಸಿಸ್ಟಂ ಪ್ರಕಾರ ಮಾಡುವಂತೆ

ಕನ್‌ಸಂಪ್ಷನ್ ಲೋನ್ ಕೊಡುವಂಥ ವ್ಯವಸ್ಥೆ ಮಾಡಿದ್ದೆವು. ಈ ಪುಸ್ತಕದಲ್ಲಿ ಅದರ ಬಗ್ಗೆ ಒಂದು ಚಕಾರ ಶಬ್ದ ಕೂಡ ಇಲ್ಲ. ಇನ್ನು ಚಿತ್ರದುರ್ಗ. ಶಿವಮೊಗ್ಗ ಹಾಗೂ ಬಳ್ಳಾರಿ ಜಿಲ್ಲೆಯಲ್ಲಿ ವ್ಯಾಪಕವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲು ೪೦ ಕೋಟಿ ರೂಪಾಯಿಗಳ ಒಂದು ಆಷಿಡ್ ಯೋಜನೆಯನ್ನು ಹಾಕಿಕೊಳ್ಳಲಾಗಿತ್ತು. ಈ ಯೋಜನೆಯ ಮೂಲಕ ಎಲ್ಲಾ ರಂಗಗಳಲ್ಲಿಯೂ ಅಭಿವೃದ್ಧಿ ಮಾಡುವ ದೃಷ್ಟಿಯಿಟ್ಟುಕೊಂಡು ಈ ಯೋಜನೆಯನ್ನು ಮಾಡಲಾಗಿತ್ತು. ಇದರ ಬಗ್ಗೆ ಎಷ್ಟು ಹಣ ಖರ್ಚು ಮಾಡಿದ್ದೀರಿ? ಪರಿಸ್ಥಿತಿ ಹೀಗಿರುವಾಗ ನಾನು ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ನೀವು ದಯವಿಟ್ಟು ಈ ರಂಗದಲ್ಲಿ ಹಸ್ತಕ್ಷೇಪ ಮಾಡುವುದನ್ನು ನಿಲ್ಲಿಸಿ ಬಿಡಿ. ಇದರಿಂದ ಯಾರಿಗೂ ಒಳ್ಳೆಯದಾಗುವುದಿಲ್ಲ. ಪಕ್ಷಕ್ಕೂ ಕೂಡ ಒಳ್ಳೆಯ ಹೆಸರು ಬರುವುದಿಲ್ಲ. ಇದರ ಮೇಲೆ ನಾವು ಮಾಡುತ್ತೇವೆಂದರೆ, ಅದನ್ನು ನಿಭಾಯಿಸುವ ಶಕ್ತಿ ನಮಗೆ ಇದೆ. ತಮಗೆ ಅಂಕಿ ಸಂಖ್ಯೆಗಳನ್ನು ನಮ್ಮ ಮಿತ್ರರು ಕೊಡುತ್ತಾರೆ. ಇವತ್ತು ಸಂಘ ಸಂಸ್ಥೆಗಳು ಹಾಗೂ ಸಹಕಾರಿ ಸಂಘಗಳು ನಿಸ್ತೇಜನಗೊಂಡಿವೆ. ವ್ಯವಸಾಯ ಸಹಕಾರ ಸಂಘದಿಂದ ಹಿಡಿದು, ದೊಡ್ಡ ದೊಡ್ಡ ವ್ಯವಹಾರ ಮಾಡತಕ್ಕ ಸಹಕಾರ ಸಂಘಗಳು ಸಹ ನಿಸ್ತೇಜನಗೊಂಡಿವೆ. ಸಕ್ಕರೆ ಕಾರ್ಖಾನೆಯವರು ಗೋಣಿ ಚೀಲಗಳನ್ನು ಕೊಂಡುಕೊಳ್ಳುತ್ತಾರೆ. Why should they not indent to the consumer Federation? In turn the Consumer Federation should purchase from the manufacturers themselves ಇದನ್ನು ಮಾಡಿ. ದಳ್ಳಾಳಿಗಳ ಕಾಟವನ್ನು ಏತಕ್ಕೆ ತಪ್ಪಿಸಬಾರದು. ಸ್ಪಿನ್ನಿಂಗ್ ಮಿಲ್‌ನವರು ತೆಗೆದುಕೊಳ್ಳುತ್ತಾರೆ. ಅದೇ ರೀತಿ ಸಕ್ಕರೆ ಕಾರ್ಖಾನೆಯವರು ತೆಗೆದುಕೊಳ್ಳಲಿ. ಇದರ ಕಡೆ ಕೂಡ ತಾವು ಗಮನಕೊಡಬೇಕೆಂದು ಹೇಳುತ್ತೇನೆ.

ಇನ್ನು ಕ್ಯಾಂಪ್ಕೋ ಬಗ್ಗೆ ಒಂದು ಮಾತು ಹೇಳುತ್ತೇನೆ, ಅಡಿಕೆ ಬೆಳೆ ಕುಸಿದು ಹೋಗತಕ್ಕಂಥ ಸಂದರ್ಭದಲ್ಲಿ ಕರ್ನಾಟಕ ಹಾಗೂ ಕೇರಳ ರಾಜ್ಯಗಳು ಕೂಡಿ ಕ್ಯಾಂಪ್ಕೋ ಮಾಡಿದವು. ಸುಮಾರು ೩೦ ಕೋಟಿ ರೂಪಾಯಿಗಳ ಅಡಿಕೆಯನ್ನು ಕ್ಯಾಂಪ್ಕೋ ಕೊಂಡುಕೊಳ್ಳುವಂತೆ ವ್ಯವಸ್ಥೆ ಆಯಿತು. ಇದರಿಂದ ದಳ್ಳಾಳಿಗಳ ಕಾಟವನ್ನು ತಪ್ಪಿಸಿದಂತಾಯಿತು. ಇವತ್ತು ರಾಜ್ಯದಲ್ಲಿ ತಂಬಾಕು ಹಾಗೂ ಹತ್ತಿ ಪ್ರಶ್ನೆ ಕೂಡ ಚಿಂತಾಜನಕವಾಗಿದೆ. 10 percent of the total India's cotton production comes from Karnataka State. Do you want to depend upon the cotton Corporation? Is that our policy? We are encouraging spinning mills to come up, but what are the arrangments that you have made to purchase straightaway from the prod'cer? ಸಹಕಾರ ಕ್ಷೇತ್ರ ನಾಲ್ಕು ಜನ ಹೆಗ್ಗಣಗಳು ಮೇಯುತಕ್ಕಂಥ ಕ್ಷೇತ್ರವಾಗಿದೆ ೩೫ ಲಕ್ಷ ವ್ಯವಸಾಯ ಕುಟುಂಬಗಳು ೧೪ ಲಕ್ಷ ವ್ಯವಸಾಯ ಕಾರ್ಮಿಕರು ಹಾಗೂ ಇನ್ನಿತರೇ ಬೇರೆ ಬೇರೆ ರಂಗದಲ್ಲಿರತಕ್ಕ ಬಡವರ ಜೀವನವನ್ನು ಉತ್ತಮಗೊಳಿಸುವಂಥ ನೀತಿಯನ್ನು ನಿರೂಪಣೆ ಮಾಡುವಂಥ ಕ್ಷೇತ್ರವಾಗಬೇಕು. ಇದರ ಅಭಿವೃದ್ಧಿಗಾಗಿ ಸರಿಯಾದ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದೂ ಹೇಳಬೇಕು. ತಮಗೆ ಬಹಳ ಮಟ್ಟಿಗೆ ಬೇಸರಗೊಳಿಸಿದ್ದೇನೆ, ದಯವಿಟ್ಟು ಕ್ಷಮಿಸಬೇಕೆಂದು ಹೇಳಿ. ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಪ್ರಕಟಣೆ

MR. SPEAKER.—I have a few announcements to make. I have received a letter from J. Chennappa, Member Karnataka Legislative Assembly, which reads thus :

"Mr. Speaker Sir,

I have resigned from the Membership of the Congress-I Legislature Party and I therefore, request you kindly allot me a separate seat in the Assembly Hall and oblige".

Also Sriyuths, Siddaramaiah, Udasi and Byregowda have written that they have joined Janatha Party and requested me to allot separate seats in the Assembly. ಮೇಲ್ಕಂಡ ಸದಸ್ಯರುಗಳಿಗೆ ಪೀಠದ ವ್ಯವಸ್ಥೆ ಮಾಡಲಾಗುವುದು.

ಶ್ರೀ ಎಂ. ವೀರಪ್ಪಮೊಯ್ಲಿ.—ನಿಯಮ ೩೩೪ರ ಕೆಳಗೆ ಒಂದು ನೋಟೀಸ್ ಕೊಟ್ಟಿದ್ದೇನೆ.

MR. SPEAKER.—I have disallowed it.

ಶ್ರೀ ಎಂ. ವೀರಪ್ಪಮೊಯ್ಲಿ.—ತಾವು ಹಾಗೆ ಹೇಳಿದರೆ ಹೇಗೆ? ಇದು ಬಹಳ ಮುಖ್ಯವಾದ ವಿಷಯ......

MR. SPEAKER.—I am not convinced as to how this Government is responsible.

ಶ್ರೀ ಎಂ. ವೀರಪ್ಪಮೊಯ್ಲಿ.—This is the Government which has to maintain law and order position in the State. ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ತಾವು ಅವಕಾಶ ಕೊಟ್ಟರೆ ಒಳ್ಳೆಯದು.

MR. SPEAKER.—It has also taken a differnt shafe in a different form, Some hon, Members have also raised it.

ಶ್ರೀ ಎಂ. ವೀರಪ್ಪಮೊಯ್ಲಿ.—ಬೆಳಿಗ್ಗೆ ಕೂಡ ಕೇಳಿದ್ದೇನೆ. ೩–೪ ದಿವಸದ ಹಿಂದೆ ಕೂಡ ನೋಟೀಸ್ ಕೊಟ್ಟಿದ್ದೇನೆ. ಪ್ರಸ್ತಾಪ ಮಾಡುವುದಕ್ಕೆ ಆಗಿಲ್ಲ. ಅನೇಕ ಬೆಳವಣಿಗೆಗಳು ಇದರಲ್ಲಿ ಆಗಿವೆ. ***

ಅಧ್ಯಕ್ಷರು.—ಬೇರೆ ಸದಸ್ಯರು ಇದರ ಬಗ್ಗೆ ಕೊಟ್ಟಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಒಂದು ವಿಚಾರವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಕಳುಹಿಸಿ, ಅದನ್ನು ಸರ್ಕಾರಕ್ಕೆ ತಾವು ಕಳುಹಿಸಿದ್ದೀರಿ. ಈ ಹಂತದಲ್ಲಿ ಡಿಸ್‌ಅಲೋ ಎಂದು ಹೇಳುವುದು ಸರಿಯಲ್ಲ. ತಾವು ಆಶ್ವಾಸನೆ ಕೊಟ್ಟಮೇಲೆ ಹೀಗೆ ಹೇಳುವುದು ಸರಿಯಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.—ಸೀಮಾ ಟ್ರಾವಲ್ ಏಜನ್ಸಿ ಬಗ್ಗೆ ಮತ್ತು ಅರಬ್ ಪ್ರಜೆಯ ಬಗ್ಗೆ ಒಂದು ಹೇಳಿಕೆ ಕೊಡುತ್ತೇನೆಂದು ಮಾನ್ಯ ಮಂತ್ರಿಗಳಾದ ರಘುಪತಿಯವರು ಹೇಳಿದ್ದರು.

(ಗೊಂದಲ)

SRI M. VEERAPPA MOILY.—I am very sorry that we are treated like this.

MR. SPEAKER.—You need not be sorry.

SRI M. VEERAPPA MOILY.—I am sorry. This is something in which......

MR. SPEAKER.—This is not the way the leader of the Opposition were to behave so far as the Chair is concerned, You need be sorry.

*** Expunged as ordered by the Chair.

SRI S. R. BOMMAI.—I am on a point of order......

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ರಘುಪತಿಯವರು ಉತ್ತರ ಕೊಡತಕ್ಕಂಥ ಮಾತನ್ನು ಹೇಳಿದ್ದಾರೆ...... .

ಅಧ್ಯಕ್ಷರು.—ಈ ವಿಚಾರದಲ್ಲಿ ನಾನು ರೆಕಾರ್ಡ್ ತರಿಸಿ ನೋಡುತ್ತೇನೆ ಎಂದು ಹೇಳಿದ್ದೇನೆ. That is why I said, I shall look into the record as to what has gone into it.

SRI M. VEERAPPA MOILY.—We are entitled to ask for permission to elicit any information from the Government, In the morning the Minister Sri Raghupathy had assured the House that the Government will make a statement by evening, You have also agreed for it.

MR. SPEAKER.—I shall look into the record. If there is any commitment on the part of the Chair, definitely, I shall take the responsibility.

೬–೧೦ ಪಿ.ಎಂ.

ಶ್ರೀ ಎಸ್.ಆರ್. ಬೊಮ್ಮಾಯಿ.—ಅಧ್ಯಕ್ಷರೆ, ಇದೇ ವಿಚಾರದಲ್ಲಿ ನಾನು ಕ್ರಿಯಾಲೋಪ ಎತ್ತಿದ್ದೇನೆ.

(ಗೊಂದಲ)

ಶ್ರೀ ಗೋವಿಂದ ಪಿ. ಒಡೆಯರಾಜ್.—ಯಾವ ರೂಲ್ ಮೇಲೆ ಎಂದು ಕೋಟ್ ಮಾಡಿ ಹೇಳಿ.

೬-೦೦ ಪಿ.ಎಂ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಚಾರ ಎತ್ತಿದಾಗ ತಾವು ಈ ವಿಚಾರ ತಳ್ಳಿಹಾಕಿದ್ದೇನೆ ಎನ್ನುವ ಮಾತನ್ನು ಹೇಳಿದ್ದೀರಿ. ಅದು ಆದನಂತರ ಮಾನ್ಯ ಸದಸ್ಯರು ಹೇಳಿದ ಮೇಲೆ ರೆಕಾರ್ಡ್ಸ್ ನೋಡಿಸುತ್ತೇನೆ ಎನ್ನುವುದು ಹೇಳಿದ್ದೀರಿ. ಇದರಲ್ಲಿ, ಇಷ್ಟಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವ ರೀತಿ, ಒಂದು ರೋಷ, ಸಿಟ್ಟಿನಿಂದ ಹೇಳುವುದು ಆದರೆ ಅದು ಸರಿಯಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಮಾತನಾಡುವ ರೀತಿ ನೋಡಿ. ಬಾಕಿಯವರಿಗೆ ತಾವು ಕಲಿಸಲಿಕ್ಕೆ ಹೋಗಬೇಡಿ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ? ಸಭಾಧ್ಯಕ್ಷರಿಗೆ ಮಾತನಾಡುವಾಗ ರಕ್ಷಣೆ ಕೊಡಬೇಕು ಎಂದು ಅವರಿಂದ ಕೇಳಿಕೊಳ್ಳಬೇಕಾಗುತ್ತದೆ. ಸಿಟ್ಟಿನಿಂದ, ಭರದಲ್ಲಿ, ಅಧ್ಯಕ್ಷ ಪೀಠಕ್ಕೆ ಅಗೌರವ ತರುವ ರೀತಿಯಲ್ಲಿ ಮಾತನಾಡುವುದು ಸರಿಯಲ್ಲ.

(ಗೊಂದಲ)

ಶ್ರೀ ಎನ್. ಚಿಕ್ಕೇಗೌಡ.—ನೀವು ಈ ಕಡೆ ಇದ್ದಾಗ ಇದೇ ಟೋನ್‌ನಲ್ಲಿ ಮಾತನಾಡಿದ್ದೀರಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ರಘುಪತಿಯವರು ರಿಪ್ಲೈ ಕೊಡುವಾಗ ಶ್ರೀಮಾನ್ ಮಾಣಿಕ್‌ರಾವ್ ಪಾಟೀಲ್ ಪ್ರಸ್ತಾಪ ಮಾಡಿದರು. ಅವರು ಇದನ್ನು ಆಮೇಲೆ ತೆಗೆದುಕೊಳ್ಳೋಣ ಅಂದಾಗ...

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಖಾರ್ಗೆಯವರು ದಯಮಾಡಿ ಕೇಳಬೇಕು. ನಾನು ಕೂಡ ಪ್ರತಿಪಕ್ಷದ ಮುಖಂಡರನ್ನು ಮತ್ತು ಎಲ್ಲಾ ಮುಖಂಡರನ್ನು ಕರೆಯಿಸಿ ಮಾತನಾಡಿದ್ದೇನೆ. ಖಿಳನ್ನು ಸದನದಲ್ಲಿ ತೆಗೆದುಕೊಂಡು ಪ್ರಸ್ತಾಪ ಮಾಡಿದರೆ ಅಷ್ಟೇ ಸಾಲದು, ಇದು ಏನಾದರೂ ಸರ್ಕಾರದಿಂದ ಅದಕ್ಕೆ ಪ್ರತಿಫಲವಾದಂಥ ಒಂದು ನಿರೀಕ್ಷಣೆ ನಿಮ್ಮದು ಏನಿದೆ, ಆ ನಿರೀಕ್ಷಣೆಯ ಫಲವಾಗಿ ಸರ್ಕಾರದಿಂದ ಏನಾದರೂ ಬರಲಿ ಎನ್ನುವ ಪ್ರಯತ್ನವನ್ನು ನಾನು ನಿಮಗೆ ಕಾಣದ ಹಾಗೆ ಮಾಡುತ್ತಿದ್ದೇನೆ ಎನ್ನುವ ಮಾತನ್ನು ಹೇಳಿದ್ದೇನೆ. ನೋಟೀಸ್ ಬಂದ ತಕ್ಷಣ ಸಂಬಂಧ ಪಟ್ಟವರಿಗೆ ಕಳುಹಿಸಿ ಸಾಧ್ಯವಾದಷ್ಟು ಎಷ್ಟು ಉತ್ತರ ತರಿಸಲಿಕ್ಕೆ ಸಾಧ್ಯ ಅದನ್ನು ಮಾಡಿಕೊಂಡು ಬಂದಿದ್ದೇನೆ. ಅದರ ಪರಿಣಾಮ ಸ್ವಲ್ಪ ಹೆಚ್ಚು ಕಡಿಮೆ ಎಲ್ಲಾ ಖಿಳಿಕ್ಕೂ ಉತ್ತರ ಸಿಕ್ಕಲಿ ಎಂದು ನಾವು ಮಾಡಿದ್ದೇವೆ. ಸರ್ಕಾರ ಸಹಕಾರ ಮಾಡಿದೆ, ಈ ಸಮಯದಲ್ಲಿ ನಾನು ಇದನ್ನು ಹೇಳ ಬೇಕಾಯಿತು ಹೇಳುತ್ತಿದ್ದೇನೆ. ಈ ವಿಚಾರವನ್ನು ಏನು ಹೇಳಿದ್ದೀರಿ, ಇದು ಕೇಂದ್ರ ಸರ್ಕಾರ ಒಟ್ಟಿಗೆ ವಿಶ್ಲೇಷಣೆ ಮಾಡತಕ್ಕ ವಿಚಾರ, ಏಕೆಂದರೆ ಇದು ಗಲ್ಫ್ ಕಂಟ್ರೀಸ್‌ಗೆ ಹೋಗತಕ್ಕ ವಿಚಾರ. ಆದ್ದರಿಂದ ರಾಜ್ಯ ಸರ್ಕಾರಕ್ಕೂ ಇದಕ್ಕೂ ಏನು ಸಂಬಂಧ ಇದೆ ? ಮಾನ್ಯ ವಿರೋಧಪಕ್ಷದ ನಾಯಕರಿಗೆ ನಾನು ನನ್ನ ಛೇಂಬರ್‌ನಲ್ಲಿ ಕರೆದಾಗ ಹೇಳಿದ್ದೇನೆ. ರೆಕಾರ್ಡ್‌ನಲ್ಲಿ ಏನಾದರೂ ಒಂದು ವೇಳೆ ಆ ಮಾತನ್ನು ಹೇಳಿದ್ದರೆ, ತಾವು ಹೇಳಿದ ಹಾಗೆ ಅದನ್ನು ಕಳುಹಿಸಿದ್ದೇನೆ. ಬೇರೆ ಖಿಳ ಕಳುಹಿಸಿದ ಹಾಗೆ ತಾವು ಹೇಳಿರತಕ್ಕಂಥ ಗಲ್ಫ್ ಪ್ರಕರಣದ್ದು ಕಳುಹಿಸಿದ್ದೇನೆ. ಆದರೆ ನನಗೆ ಸಮಾಧಾನ ಆಗದಿದ್ದ ಕಾರಣ, ಕೇಂದ್ರ ಸರ್ಕಾರ ಇದರ ಬಗ್ಗೆ ಆಲೋಚನೆ ಮಾಡಬೇಕಾದ ಕಾರಣ, ಸಂಸತ್ತಿನಲ್ಲೂ ಕೂಡ ಇದರ ಪ್ರಕರಣ ಬಂದಿತ್ತು ಎನ್ನುವ ಬಗ್ಗೆ ಸಾಕಷ್ಟು ಮಾಹಿತಿ ಇಲ್ಲದೇ ಇದ್ದರೂ ನಾನು ತಿಳಿದುಕೊಂಡಿರುವ ಕಾರಣ ಇದು ಸರಿಯಾದುದು ಅಲ್ಲವೆಂದು ಅದನ್ನು ವಜಾ ಮಾಡಿದ್ದೇನೆ ಎಂದು ಹೇಳಿದ್ದೇನೆ. ಇದರ ಮೇಲೆ ಸರ್ಕಾರ ಹೇಳಿಕೆ ಕೊಡಲಿಕ್ಕೆ ಸಿದ್ಧವಿದ್ದರೆ ನಾನು ಅದಕ್ಕೆ ಅಡ್ಡಿ ಬರುವುದಿಲ್ಲ. ಮಾನ್ಯ ಮಂತ್ರಿಗಳು ಇದ್ದಾರೆ ಕೇಳೋಣ. ಹಾಗೆ ಮಾನ್ಯ ನಾಣಯ್ಯನವರು ಎತ್ತಿರತಕ್ಕ ವಿಚಾರಕ್ಕೂ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಮಾಡುವವರು ಇದ್ದಾರೆ ಕೇಳೋಣ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದರ ಬಗ್ಗೆ ಸಭಾಧ್ಯಕ್ಷರಿಗೆ...

ಅಧ್ಯಕ್ಷರು.—ರೆಕಾರ್ಡ್‌ನಲ್ಲಿ ಹೋಗಿರುವುದು ಹೇಳುತ್ತೇನೆ. I am very sorry for the conduct of the Chair ಎಂದು ಹೇಳಿದ್ದೀರಿ. ರೆಕಾರ್ಡ್‌ನಲ್ಲಿರುವುದನ್ನು ತಮಗೆ ಹೇಳಿದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಸನ್ಮಾನ್ಯ ಅಧ್ಯಕ್ಷರೆ, ಈಗ ಏನಾಗಿದೆ, ೩ ದಿವಸಗಳ ಹಿಂದೆ ಈ ಪ್ರಚಾರ ಬಂತು...

(ಗೊಂದಲ)

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್.

ಶ್ರೀ ಎಂ. ವೀರಪ್ಪ ಮೊಯಿಲಿ.—I am also rising on the point of order.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಧ್ಯಕ್ಷರೆ, ಅವರು ಎದ್ದು ನಿಂತಾಗ ಪಾಯಿಂಟ್ ಆಫ್ ಆರ್ಡರ್ ಹೇಳಲಿಲ್ಲ, ಅವರು ಬಳಸಿರತಕ್ಕ ಪದಗಳು ತೀರಾ ಆಕ್ಷೇಪಕರವಾದಂಥ ಪದಗಳು, ಹಾಗೆ ಹೇಳಿ ಮತ್ತೆ ಅದಕ್ಕೆ ಏನಾದರೂ ಸಮಜಾಯಿಷಿ ಕೊಡಲಿಕ್ಕೆ ಹೇಳುತ್ತಿದ್ದಾರೋ ಏನೋ ಗೊತ್ತಿಲ್ಲ. ಆದರೆ ಪದಗಳನ್ನು ನೇರವಾಗಿ ಅಧ್ಯಕ್ಷ ಪೀಠಕ್ಕೆ ಅಪಾದನೆ ತರುವ ರೀತಿಯಲ್ಲಿ ಮಾತನಾಡಿದ ಮೇಲೆ ಸರಿಯಾದಂಥ ಮಾರ್ಗದಲ್ಲಿ ಅಧ್ಯಕ್ಷರ ವಿಷಯದಲ್ಲಿ ವಿಶ್ವಾಸ ಇಲ್ಲದೇ ಇದ್ದರೆ, ಬೇರೆ ಮಾರ್ಗ ಅನುಸರಿಸಬೇಕೆ ಹೊರತು ಈ ರೀತಿ ನಡೆದುಕೊಂಡು ಹೋಗುವುದು ಸರಿಯಾದ ಮಾರ್ಗ ಅಲ್ಲ. ಅವರು ಏನು ಹೇಳಿದ್ದಾರೆ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಮತ್ತೆ ಇನ್ನೊಂದು ಸಾರಿ ಈ ತರಹ ಆಗಲಿಕ್ಕೆ ಅವಕಾಶ ಕೊಡದ ಹಾಗೆ ಮಾಡಬೇಕು.

ಶ್ರೀ ಕೆ.ಹೆಚ್. ರಂಗನಾಥ್.—ಅಧ್ಯಕ್ಷ ಪೀಠಕ್ಕೆ ಅಗೌರವ ಮಾಡಬೇಕೆಂದು ನಮ್ಮ ಪಕ್ಷದಲ್ಲಿ ವಿರೋಧನಾಯಕರಿಗಾಗಲಿ ನಮಗೆ ಆ ಭಾವನೆ ಇಲ್ಲ. ಅದನ್ನು ಮಾಡಲಿಕ್ಕೆ ಪ್ರಯತ್ನ ಮಾಡುವುದಿಲ್ಲ. ಒಂದು ವೇಳೆ ಯಾವುತ್ತಾದರೂ ಅಚಾತುರ್ಯದಿಂದ ಬಂದರೆ ತತ್‌ಕ್ಷಣ ಕ್ಷಮೆ ಕೇಳುವ ಸೌಜನ್ಯ ನಾವು ಇಟ್ಟುಕೊಂಡಿದ್ದೇವೆ. ಮಾನ್ಯ ವಿರೋಧಪಕ್ಷದ ನಾಯಕರು ಏನು ಹೇಳಿದರು ನಾನು ಕೇಳಿಸಿಕೊಳ್ಳಲಿಲ್ಲ. ತಾವು ಒಂದು ಮಾತು ಹೇಳಿದ್ದೀರಿ...

ಶ್ರೀ ರಾಮಕೃಷ್ಣ ಹೆಗಡೆ.—ಸೌಜನ್ಯ ಇಟ್ಟುಕೊಂಡಿದ್ದೀರಿ, ಅದನ್ನು ಇಲ್ಲಿ ತೋರಿಸಿಬಿಡಿ.

ಶ್ರೀ ಕೆ.ಹೆಚ್. ರಂಗನಾಥ್.—ಸೌಜನ್ಯ ಬಿಟ್ಟು ಏನೂ ನಡೆದುಕೊಂಡಿಲ್ಲ. ಎಂದಾದರೂ ಕಂಡಿದೆಯೋ ? ಏನಾದರೂ ಇದರ ಬಗ್ಗೆ ಅನುಮಾನ ಇದೆಯೋ ?

ಶ್ರೀ ರಾಮಕೃಷ್ಣ.—ಈ ಸಭೆಯಲ್ಲಿ ಮಾನ ಅಪಮಾನದ್ದು ಏನೂ ಇಲ್ಲ. ಆದರೆ ಇದಕ್ಕೆ ಒಂದು ಸಂಪ್ರದಾಯ ಇದೆ. ಅಧ್ಯಕ್ಷರು ರೂಲಿಂಗ್ ಓದಿದ ಮೇಲೆ ಅದು ಹಿಡಿಸದೇ ಇದ್ದರು ಅದರ ಬಗ್ಗೆ ಪ್ರತಿಭಟನೆ ಮಾಡತಕ್ಕ ಇಚ್ಛೆ ಇದ್ದರೂ ಅದಕ್ಕೆ ಒಂದು ಭಾಷೆ ಇದೆ. ಅದಕ್ಕೆ ಒಂದು ರೀತಿ ಇದೆ. ಮಾನ್ಯ ಪ...ಯಲಿಯ..ವರು ಹೊಸಬರು ಏನೂ ಅಲ್ಲ.

ಶ್ರೀ ಕೆ.ಹೆಚ್. ರಂಗನಾಥ್.—ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದು ಕೇಳಿಸಿಕೊಳ್ಳಲಿಲ್ಲ. ತಾವು ಕೂಡ ಒಂದು ಮಾತನ್ನು ಹೇಳಿದ್ದೀರಿ. ಮಾನ್ಯ ಮಂತ್ರಿಗಳಾದ ರಘುಪತಿಯವರು ಆಶ್ವಾಸನೆ ಕೊಟ್ಟಿದ್ದಾರೆ, ಅಂದರೆ ಸರ್ಕಾರದ ಪರವಾಗಿ ಕೊಟ್ಟಿದ್ದಾರೆ ಎನ್ನು ಅರ್ಥ ತೆಗೆದ-ಕೊಳ್ಳಬೇಕಾಗುತ್ತದೆ ತಾವು ನಡವಳಿಕೆ ತರಿಸಿ ನೋಡಿ ಅದಕ್ಕೆ ನಾನು ಬದ್ಧನಾಗುತ್ತೇನೆ ಎಂದು ಆಶ್ವಾಸನೆ ಕೊಟ್ಟಿದ್ದೀರಿ. ಮಾನ್ಯ ವಿರೋಧಪಕ್ಷದ ನಾಯಕರು ಹೇಳುವಾಗ ನಾನು ಕೇಳಿಸಿಕೊಳ್ಳಲಿಲ್ಲ. ಮಾನ್ಯ ಹುಚ್ಚಮಾಸ್ತಿಗೌಡರು ಒಂದು ವಿಚಾರ ಹೇಳಿದರು. ನಾವು ಈ ಕಡೆಯಿಂದ ಅಧ್ಯಕ್ಷ ಪೀಠಕ್ಕೆ ಅಗೌರವ ಮಾಡಬೇಕೆಂದು ಆಗಲಿ, ತಲೆಬಾಗಿಸಬಾರದು ಎಂದು ಆಗಲಿ ಇಲ್ಲ. ನಾವು ಸಹ ಇತಿಮಿತಿಯಲ್ಲಿ ಇರತಕ್ಕಂತಾದ್ದು ಮತ್ತು ನಿಯಮಗಳನ್ನು ಪಾಲನೆ ಮಾಡಬೇಕಾಗುತ್ತದೆ. ಅದನ್ನು ಮಾಡದಿದ್ದರೆ ಸದನದಲ್ಲಿ ಕೆಲಸ ಮಾಡಲಿಕ್ಕೆ ಆಗುವುದಿಲ್ಲ. ಅದನ್ನು ಮಾಡಲೇಬೇಕಾಗುತ್ತದೆ. ಅನ್ನಬಾರದ್ದನ್ನು ಅಂದಿದ್ದರೆ ಕ್ಷಮೆ ಕೇಳಬೇಕಾಗುತ್ತದೆ, ತಮಗೆ ಬಾಗಿ ನಡೆಯಬೇಕಾಗುತ್ತದೆಯೋ ಹೊರತು ತಮಗೆ ಧಿಕ್ಕರಿಸಿ ನಡೆಯುತಕ್ಕದ್ದು ಆಗುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳುತ್ತಾರೆ ಕೇಳೋಣ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೆ......

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನ್ನ ಪಾಯಿಂಟ್ ಆಫ್ ಆರ್ಡರ್‌ಗೆ ಉತ್ತರ ಏನೂ ಬರಲಿಲ್ಲ.

ಅಧ್ಯಕ್ಷರು.—ಅವರೇ ಉತ್ತರ ಹೇಳುತ್ತಿದ್ದಾರೆ ಏನು ನೋಡೋಣ. ನಾನು ಅದಕ್ಕೆ ಉತ್ತರ ಹೇಳುವ ಪ್ರಸಂಗ ಬರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೆ, ನಾವು ಮೂರನೆ ಸಾರಿ ಸದನಕ್ಕೆ ಬರುವುದು. ನಮ್ಮ ನಡವಳಿಕೆ ಏನು ಎಂದು ಮಾನ್ಯ ಬೊಮ್ಮಾಯಿಯವರಿಗೂ ಗೊತ್ತು, ಈ ಸದನಕ್ಕೂ ಗೊತ್ತು, ಕರ್ನಾಟಕ ರಾಜ್ಯಕ್ಕೂ ಗೊತ್ತು, ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವುದಿದ್ದರೆ ಸೌಜನ್ಯತೆ ವಿಚಾರದಲ್ಲಿ ಗೌರವವಾಗಿ ನಡೆದುಕೊಳ್ಳಬೇಕಾದ ವಿಚಾರದಲ್ಲಿ ಸೌಜನ್ಯದ ಮಟ್ಟಿಗೆ ನಾವು ಯಾವಾಗಲೂ ಕೂಡ ಕೊರತೆ ಇಟ್ಟಿಲ್ಲ. ನನಗೆ ಬೇಸರ ಏತಕ್ಕೆ ಆಯಿತು ಅಂದರೆ, ತಾವು ಸ್ವಲ್ಪ ಅದನ್ನು ಅರ್ಥಮಾಡಿಕೊಳ್ಳಬೇಕು, ಈಗ ತಮ್ಮ ವರ್ತನೆ ಪ್ರಶ್ನಿಸತಕ್ಕ ಒಂದು ಪ್ರಸಂಗಕ್ಕೆ ನಾನು ಹಿಂದೆ ಹೋಗಿದ್ದಿಲ್ಲ, ಮುಂದೆ ಹೋಗುವುದಿಲ್ಲ. ಆ ಅಭಿಪ್ರಾಯವೂ ನನ್ನಲ್ಲಿ ಇಲ್ಲ. ಆ ಬಗ್ಗೆ ಸಂಪೂರ್ಣವಾದ ಗೌರವ ಇದೆ. 'ವರ್ತನೆ' ಎಂದು ಹೇಳಿದರೆ, ತಾವು ಅದನ್ನು ಒಂದೆ ಸೆಂಟೆನ್ಸ್ ತೆಗೆದುನೋಡಿ, ಆ ಧಾಟಿಯಲ್ಲಿ ನಾನು ಮಾತನಾಡಿದ್ದೇನೆ ಎನ್ನುವ ಅಭಿಪ್ರಾಯಕ್ಕೆ ಬಂದಿದ್ದೀರಿ. ಸಭಾಧ್ಯಕ್ಷರಿಗೆ ನಾನು ಆ ರೀತಿ ಮಾತನಾಡಬೇಕು ಎನ್ನುವ ಇಚ್ಛೆ ಇಲ್ಲ ಅಂಥ ಭಾಷೆ ಅಂಥಾದ್ದು ತಮಗೆ ಕಂಡರೆ, ನಾನು ಕ್ಷಮೆ ಯಾಚನೆ ಮಾಡಿಕೊಳ್ಳಲಿಕ್ಕೆ ಹಿಂಜರಿಯುವುದಿಲ್ಲ, ತಮಗೆ ನೋವಾಗಬಾರದು, ನೋವಾಗತಕ್ಕ ಮಾತು ಆಡುವ ಮನಸ್ಸು ನನ್ನಲ್ಲಿ ಇಲ್ಲ, ದಯಮಾಡಿ ತಾವು ತಿಳಿದುಕೊಳ್ಳಬೇಕು ಈ ಪ್ರಸಂಗ ಏನಾಯಿತು ಅಂದರೆ ಮೇಲ್ಮನೆಯಲ್ಲಿ ಈ ವಿಚಾರ ಪ್ರಸ್ತಾಪ ಆಯಿತು. ನಾನು ಈ ವಿಚಾರವನ್ನು ಎತ್ತುವುದಕ್ಕೆ ತಾವು ಅನುಮತಿಯನ್ನು ಕೊಡಬೆಕೆಂದು ನಾನು ಹೇಳಿದ್ದಿಲ್ಲ. ನಾನು ಉದ್ರೇಕದಲ್ಲಿ ಏತಕ್ಕೆ ಮಾತನಾಡಿದೆ ಎಂದರೆ ಕೆಳಮನೆಯ ಸದಸ್ಯರಿಗೆ ಕೆಲವು ವಿಶೇಷ ಹಕ್ಕು

ಗಳಿವೆ. ಇಡೀ ಕರ್ನಾಟಕ ರಾಜ್ಯಕ್ಕೇ ವ್ಯಾಪಕವಾದ ಜಾಲ ಇವತ್ತು ಪ್ರಕಟವಾದಾಗ ಅದು ಮೇಲ್ಮನೆಯಲ್ಲಿ ಪ್ರಸ್ತಾಪವಾಗಿ ಕೆಳಮನೆಯಲ್ಲಿ ಪ್ರಸ್ತಾಪ ಆಗಲಿಲ್ಲ ಎಂದರೆ ಈ ಮನೆಯ ಸದಸ್ಯರ ಹಕ್ಕಿಗೆ ಚ್ಯುತಿ ಬಂದಂತಾಗುತ್ತದೆ. ಆದರೆ ಅಂಥ ಹಕ್ಕು ಚ್ಯುತಿ ಆಗದಂತೆ ನೋಡಿಕೊಳ್ಳತಕ್ಕ ಜವಾಬ್ದಾರಿ ಕೆಲಸವನ್ನು ವಿರೋಧಪಕ್ಷದ ನಾಯಕನಾಗಿದ್ದುಕೊಂಡು ನಾನು ಮಾಡದೇಹೋದರೆ ಆಗ ನನ್ನ ಕರ್ತವ್ಯ ಚ್ಯುತಿ ಕೂಡ ಆಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ,......

SRI M. VEERAPPA MOILY.—Sir, the matter has been raised five days back itself.

ಶ್ರೀ ರಾಮಕೃಷ್ಣ ಹೆಗಡೆ.—ಇದು ಹಕ್ಕುಚ್ಯುತಿ ಹೇಗೆ ಆಗುತ್ತದೆ ? ಇಲ್ಲಿ ಪ್ರಸ್ತಾಪ ಆಗದೇ ಇರುವುದು ಅಲ್ಲಿ ಆಗಬಾರದೆಂದು ಏನಾದರೂ ನಿಯಮ ಇದೆಯೆ ? ಇದ್ದರೆ ಯಾವ ನಿಯಮದ ಪ್ರಕಾರ ಎಂಬುದನ್ನು ಹೇಳಿ. ಅಲ್ಲಿ ಬಂದಿದ್ದು ಇಲ್ಲಿ ಬರಲೇಬೇಕೆಂದು ಏನೂ ಇಲ್ಲ, ಅಥವಾ ಇಲ್ಲಿ ಬಂದಿದ್ದು ಅಲ್ಲಿ ಪ್ರಸ್ತಾಪಕ್ಕೆ ಬರಲೇಬೇಕೆಂದು ಏನೂ ಇಲ್ಲ. ಹಕ್ಕುಚ್ಯುತಿ ಯಾವಾಗ ಬರುತ್ತದೆಂದರೆ ಆಯವ್ಯಯ ಅಥವಾ ಹಣಕಾಸು ಮಸೂದೆಯನ್ನು ಇಲ್ಲಿ ಮಂಡಿಸದೆ ಅಲ್ಲಿ ಮಂಡಿಸಿದಾಗ ಬರುತ್ತದೆ. ಆದರೆ ಇಂಥ ವಿಚಾರಗಳನ್ನು ಎರಡು ಸದನಗಳಲ್ಲಿ ಎಲ್ಲಿ ಬೇಕಾದರೂ ಎತ್ತಬಹುದು.

ಶ್ರೀ ಎಸ್. ಬಂಗಾರಪ್ಪ.—ಅದು ಹಾಗಲ್ಲ, ಅದು ವಿಶೇಷ ವಿಷಯವಾಗಿದ್ದು ಆ ಮನೆಯಲ್ಲಿ ಎತ್ತುವುದಕ್ಕೆ ಯೋಗ್ಯತೆ ಇದ್ದರೆ ಅದನ್ನು ಇಲ್ಲಿಯೂ ಕೂಡ ಎತ್ತುವುದಕ್ಕೆ ಯೋಗ್ಯತೆ ಇರುತ್ತದೆ, ಎಂದು ಅವರು ಹೇಳಿರುವುದು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ತಾವು ಲೋಕಸಭೆಯಲ್ಲಿ ಇದ್ದವರು. ಅನೇಕ ಸಂದರ್ಭದಲ್ಲಿ ಯಾವ ವಿಚಾರವನ್ನು ಲೋಕಸಭೆಯಲ್ಲಿ ಅಧ್ಯಕ್ಷರು ಚರ್ಚೆಗೆ ಅವಕಾಶ ಕೊಡುತ್ತಾರೋ ಅದೇ ವಿಚಾರವನ್ನು ಅದೇ ದಿವಸ ರಾಜ್ಯಸಭೆಯಲ್ಲಿ ಚರ್ಚೆಗೆ ತೆಗೆದುಕೊಳ್ಳಲು ಅವಕಾಶವನ್ನು ಕೊಡದೇ ಇರುವಂಥ ನಿದರ್ಶನಗಳೂ ಉಂಟು. ಅದೇ ರೀತಿ ರಾಜ್ಯಸಭೆಯಲ್ಲಿ ಯಾವ ವಿಚಾರವನ್ನು ಅಧ್ಯಕ್ಷರು ಚರ್ಚೆಗೆ ಅವಕಾಶ ಕೊಟ್ಟಿರುತ್ತಾರೆ ಅದೇ ವಿಷಯವನ್ನು ಲೋಕಸಭೆಯಲ್ಲಿ ಚರ್ಚೆಗೆ ತೆಗೆದುಕೊಳ್ಳಲು ಅವಕಾಶವನ್ನು ಅಲ್ಲಿನ ಅಧ್ಯಕ್ಷರು ಕೊಡದೇ ಇರುವಂಥ ನಿದರ್ಶಗಳೂ ಇವೆ. ಇಲ್ಲಿ ಆದುದು ಅಲ್ಲಿಯೂ ಆಗಲೇಬೇಕು, ಅಲ್ಲಿ ಆದುದು ಇಲ್ಲಿಯೂ ಆಗಲೇಬೇಕೆಂದು ಹೇಳುವುದು...

ಅಧ್ಯಕ್ಷರು.—ನಾನು, ನನ್ನ ಮನಸ್ಸಿನಲ್ಲಿದ್ದುದನ್ನು ಮಾತ್ರ ಹೇಳಿದೆ. I had a little doubt with regard to the responsibility of the State Government in respect of issuing or non-issuing passports to some passengers going abroad. ಈ ಕಾರಣಕ್ಕಾಗಿ ರಾಜ್ಯ ಸರ್ಕಾರಕ್ಕೆ ಈ ವಿಚಾರದಲ್ಲಿ ಏನು ಸಂಬಂಧ ಇದೆ ಎಂಬುದನ್ನು ಹೇಳಿ ಎನ್ನುವ ಮಾತನ್ನು ನಾನು ತಮಗೆ ಹೇಳಿದ್ದೇನೆ. ಆ ಅನುಮಾನ ನನಗೆ ಪರಿಹಾರ ಆಗದಿರುವ ಕಾರಣದಿಂದಾಗಿ ನಾನು ಹೇಳಿದ್ದು.

ಶ್ರೀ ಎಂ. ವೀರಪ್ಪಮೊಯ್ಲಿ.—ನಾನು ಹೇಳಿದ್ದು ಇದರಲ್ಲಿ ಹಣವನ್ನು ತೆಗೆದುಕೊಂಡು ಅವರನ್ನು ಡೆಲ್ಲಿಗೆ ಸಾಗಿಸತಕ್ಕ ಪ್ರಯತ್ನ, ವಂಚನೆಯ ಜಾಲ ಈ ಬೆಂಗಳೂರಿನಲ್ಲಿ ಆಗಿದೆ ಎಂದು ಪ್ರಸ್ತಾಪಮಾಡಿದೆ. ಪಾಸ್‌ಪೋರ್ಟ್‌ಗೆ ಇದು ಸಂಬಂಧ ಇಲ್ಲವೆಂದು ಹೇಳಿದಾಗ ಇದು ಪೋಲೀಸರಿಗೆ ಸಂಬಂಧಪಟ್ಟ ವಿಚಾರ, ಪೋಲೀಸರು ತನಿಖೆ ಮಾಡಬೇಕಾದ ವಿಚಾರ ಎಂದು ಹೇಳಿದೆ. ಆಗ ತಾವು ಹೇಳಿದಿರಿ ಇದನ್ನು ಸರ್ಕಾರಕ್ಕೆ ಕಳುಹಿಸಿದ್ದೇವೆ, ಅದು ಬರಲಿ ಎಂದು ಹೇಳಿದಿರಿ. ಆದರೆ ಅನಂತರ, ನಾನು ಅದನ್ನು ತೆಗೆದು ಹಾಕಿದ್ದೇನೆಂದು ತಾವು ಹೇಳಿದಾಗ ನನಗೆ ಬೇಸರವಾಯಿತು. ಇದನ್ನು ತೆಗೆದುಹಾಕಿದ್ದೇನೆಂದು ನನ್ನ ಹತ್ತಿರ ತಾವು ಹೇಳಲಿಲ್ಲ. ನನ್ನ ಆತುರ ಏನೆಂದರೆ ಮಾನ್ಯ ರಘುಪತಿಯವರು ಇವತ್ತು ಸಂಜೆಯೊಳಗೆ ಸದನಕ್ಕೆ ಹೇಳಿಕೆಯನ್ನು ನೀಡುತ್ತೇನೆಂದು ಹೇಳಿದ್ದರಿಂದ ಅವರು ಅದನ್ನು ಮಾಡುತ್ತಾರೆಂದು ನಾವು ತಿಳಿದುಕೊಂಡಿದ್ದೆವು ಅವರು ಹೇಳಿಕೆ ನೀಡುವುದಾದರೆ ನಾನು ಕೆಲವು ವಿಚಾರಗಳನ್ನು ಪ್ರಸ್ತಾಪಮಾಡಬೇಕಾಗಿದೆ ಅದಕ್ಕೆ ಅವಕಾಶವನ್ನು ಕೊಡಿ ಎಂದು ನಾನು ಕೇಳಿದೆ. ತಮ್ಮ ವರ್ತನೆಯನ್ನು ನಾನು ಪ್ರಶ್ನೆ ಮಾಡಿಲಿಲ್ಲ. ತಾವು ಏತಕ್ಕೆ ಈ ರೀತಿ ವರ್ತನೆ ಮಾಡುತ್ತೀರೆಂದು ನಾನು ಕೇಳಿದೆ. ನಮ್ಮ ದಕ್ಷಿಣ ಕನ್ನಡ ಭಾಷೆಯೇ ಅಂಥಾದ್ದು. ನಮ್ಮ ಭಾಷೆಗೂ ಮೈಸೂರು ಜಿಲ್ಲೆಯ ಭಾಷೆಗೂ ವ್ಯತ್ಯಾಸ ಇದೆ. ಆದರೆ ತಮ್ಮನ್ನು ಅಪಮಾನ ಮಾಡಬೇಕು,

ಅಥವಾ ತಮ್ಮ ವರ್ತನೆಯನ್ನು ಪ್ರಶ್ನೆ ಮಾಡಬೇಕೆಂಬ ಉದ್ದೇಶದಿಂದ ನಾನು ಆ ರೀತಿ ಹೇಳಲಿಲ್ಲ. ಅಂಥ ಭಾವನೆ ನನ್ನ ಮನಸ್ಸಿನಲ್ಲಿ ಇಲ್ಲ. ಒಂದುವೇಳೆ ನನ್ನ ಮಾತಿನಿಂದ ತಮ್ಮ ಮನಸ್ಸಿಗೆ ನೋವಾಗಿದ್ದರೆ ದಯವಿಟ್ಟು ಕ್ಷಮಿಸಿ. ನಮ್ಮ ಪಕ್ಷದ ಬಗ್ಗೆ ಉದಾರತೆಯನ್ನು ತೋರಿಸಿ ಎನ್ನುವ ದೃಷ್ಟಿಯಿಂದ ಹಾಗೆ ಹೇಳಿದ್ದೇನೆಯೇ ಹೊರತು ಬೇರೆ ಉದ್ದೇಶದಿಂದ ಅಲ್ಲ. ನಾನು ನನ್ನ ಸ್ವರವನ್ನು ಏರಿಸಿದ್ದು ನನ್ನ ಉದ್ಧಟತನವೆಂದು ಯಾರೂ ದಯವಿಟ್ಟು ತಿಳಿದುಕೊಳ್ಳಬಾರದು. ನಮ್ಮ ಬಗ್ಗೆ ಉದಾರತೆಯನ್ನು ತೋರಿಸಿ ಎಂದು ಕೇಳಿಕೊಳ್ಳಲು ನಮಗೆ ಹಕ್ಕಿದೆ, ಅದನ್ನು ಚಲಾಯಿಸಿದ್ದೇನೆ. ನಾವು ಕೋಪ ಮಾಡಿಕೊಂಡರೂ ತಾವು ಅದನ್ನು ನಸುನಗುವಿನಿಂದ ಸ್ವಾಗತಿಸಿದರೆ ಇಂಥ ಪ್ರಸಂಗಗಳೇ ಉದ್ಭವವಾಗುವುದಿಲ್ಲ. ತಾವು ತಮ್ಮ ಮುಖವನ್ನು ಬಿಗಿ ಮಾಡಿಕೊಂಡಿದ್ದರಿಂದ ನಮ್ಮ ವಿಚಾರದಲ್ಲಿ ಉದಾರತೆಯನ್ನು ತೋರಿಸಿ ಎಂದು ಸ್ವಲ್ಪ ಕೋಪದಿಂದ ಹೇಳಿದ್ದೇನೆ......

ಅಧ್ಯಕ್ಷರು.—೮ ಗಂಟೆಗಿಂತಲೂ ಹೆಚ್ಚು ಸಮಯ ಕಳೆದಿರುವುದರಿಂದ ಸ್ವಲ್ಪ ತಾಳ್ಮೆ ಕೆಡುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲೇ ಇದ್ದಾರೆ, ನಾನೂ ಹೇಳಿದ್ದೇನೆ, ತಾವೂ ಹೇಳಿದ್ದೀರಿ, ಅವರ ಹೇಳಿಕೆಯನ್ನೂ ಕೇಳೋಣ.

ಶ್ರೀ ಬಿ. ಭೈರಪ್ಪಾಜಿ.—ಸ್ವಾಮಿ, ಒಬ್ಬ ಹೆಣ್ಣುಮಗಳ ಮಾನಭಂಗವಾಗಿ, ಅವಳ ಮನೆಯನ್ನು ದೋಚಿರುವ ಬಗ್ಗೆ ೨೯ನೇ ತಾರೀಖು ಒಂದು ನೋಟೀಸನ್ನು ತಮಗೆ ಕಳುಹಿಸಿದ್ದೆ......

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ......

ಶ್ರೀ ಬಿ. ಭೈರಪ್ಪಾಜಿ.—ಸ್ವಾಮಿ, ನಾನು ಕೇಳಿದ ಪ್ರಶ್ನೆಗೆ ತಮ್ಮ ಉತ್ತರ ಬರಲೇ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಒಂದು ಕ್ರಿಯಾಲೋಪವನ್ನೆತ್ತಿ ಇದರ ಬಗ್ಗೆ ಏನು ಮಾಡಿದ್ದೀರೆಂದು ಕೇಳುತ್ತಿದ್ದಾರೆ.

ಅಧ್ಯಕ್ಷರು.—ನಾನೂ ಅದನ್ನೇ ಹೇಳಿದೆ. ಇದರ ಬಗ್ಗೆ ಅವರೇ ವಿವರಣೆಗಳನ್ನು ಕೊಟ್ಟಿದ್ದಾರೆ ಆ ಪದ ಏನಿದೆ ಅದನ್ನು ಕಡತದಿಂದ ತೆಗೆದುಹಾಕಿದ್ದೇನೆಂದು ಹೇಳಿದ್ದೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನಗೆ ಆ ಭಾವನೆ ಇರಲಿಲ್ಲವೆಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು. ಇಲ್ಲಿ ಭಾವನೆ ಮುಖ್ಯವಲ್ಲ. ಇಲ್ಲಿ ಬಳಸತಕ್ಕ ಪದ ಮುಖ್ಯ ಆ ಪದಕ್ಕೆ ಏನು ಅರ್ಥ ಇದೆ ಎಂಬುದನ್ನು ನಾವು ತಿಳಿದುಕೊಳ್ಳುವುದಕ್ಕೆ ಸಾಧ್ಯ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಭಾಷೆ ಬೇರೆ ಇದೆ. ಅದರ ಅರ್ಥ ಬೇರೆ ಇದೆ ಎಂದರೆ ಇಲ್ಲಿ ಬಳಸಿರತಕ್ಕ ಪದ ಏನು ಅರ್ಥ ಕೊಡುತ್ತದೆಂಬುದು ಮುಖ್ಯ. ಯಾರು ಯಾವ ಪಕ್ಷದಲ್ಲೇ ಇರಲಿ, ಈ ಸಭೆಯ ಮಾನ್ಯ ಸದಸ್ಯರು ಯಾರೇ ಆಗಿರಲಿ ಅಧ್ಯಕ್ಷರಿಗೆ ಗೌರವಕೊಟ್ಟು ಮಾತನಾಡುವುದು ಮುಖ್ಯ. ಅದು ಗಮನದಲ್ಲಿಲ್ಲದಿದ್ದರೆ ಈ ಸಭೆ ನಡೆಸುವುದು ಕಷ್ಟವಾಗುತ್ತದೆ. ಆ ದೃಷ್ಟಿಯಿಂದ ಮಾನ್ಯ ವಿರೋಧಪಕ್ಷದ ನಾಯಕರು ಬಳಸಿರತಕ್ಕ ಪದವನ್ನು ವಾಪಸು ತೆಗೆದುಕೊಂಡರೆ ಈ ಸಭೆಗೆ ಗೌರವ ಮತ್ತು ಸೌಜನ್ಯವನ್ನು ತೋರಿಸಿದಂತಾಗುತ್ತದೆ.

ಶ್ರೀ ಕೆ. ಎಚ್. ರಂಗನಾಥ್.—ವಿರೋಧಪಕ್ಷದ ನಾಯಕರು ತಮ್ಮ ಭಾವನೆಯನ್ನು ವ್ಯಕ್ತ ಮಾಡಿದ್ದಾರೆ. ತಮಗೆ ಅಗೌರವವನ್ನು ತೋರಿಸುವ ಭಾವನೆ ಇಲ್ಲವೆಂದೂ ಹೇಳಿದ್ದಾರೆ. ಹಳೇ ಮೈಸೂರಿನಿಂದ ಬಂದವರಿಗೆ ಈ ಪದ ಸ್ವಲ್ಪ ಚುರುಕಾಗುತ್ತದೆ. ವರ್ತನೆ ಎನ್ನುವ ಪದವನ್ನು ಲಘುವಾದ ಅರ್ಥದಲ್ಲಿ ಹೇಳಿದ್ದಲ್ಲ. ಧಾರವಾಡ ಅಥವಾ ಬೆಳಗಾಂ ಕಡೆಯವರು ಮಾತನಾಡುವಾಗ ''ಏಯ್ ಒದರೋ ಅವನನ್ನು'' ಎಂದು ಹೇಳುತ್ತಾರೆ. ಅಂದರೆ ''ಕರೆಯೋ'' ಅಥವಾ ''ಕೂಗೋ'' ಎನ್ನುವ ಅರ್ಥದಲ್ಲಿ, ಅದೇರೀತಿ ''ತಿಂಡಿ'' ಎಂದರೆ ಅವರ ಕಡೆಯಲ್ಲಿ ''ಕೆರೆತ'' ಎಂದು ಅರ್ಥವಾಗುತ್ತದೆ. ಹೀಗೆ ಅನೇಕ ಬೇರೆಬೇರೆ ಅರ್ಥ ಬರತಕ್ಕ ಪದಗಳಿವೆ; ಆದರೆ ಮಾನ್ಯ ಸದಸ್ಯರಾದ ಹುಚ್ಚಮಾಸ್ತಿಗೌಡರು ಮತ್ತೆ ಮತ್ತೆ ಅದನ್ನೇ ಒತ್ತಾಯ ಮಾಡುವುದು ಬೇಡ. ಇಲ್ಲಿಗೆ ಒದರುವವರೂ ಬಂದಿದ್ದೇವೆ, ತಿಂಡಿಯವರೂ ಬಂದಿದ್ದಾರೆ, ಏನು ಮಾರಾಯ್ರೆ ಎನ್ನುವವರೂ ಬಂದಿದ್ದಾರೆ. ನಾವೆಲ್ಲರೂ ಒಂದು ಕಡೆ ಸೇರಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ರಂಗನಾಥ್‌ರವರು ಈ ಸಭೆಯ ಅಧ್ಯಕ್ಷರಾಗಿದ್ದವರು. ಇಲ್ಲಿ ಉಪಯೋಗಿಸಿರತಕ್ಕ ಪದಗಳನ್ನು......

ಅಧ್ಯಕ್ಷರು.—ಮಾನ್ಯ ಸದಸ್ಯರಲ್ಲಿ ಒಂದು ಮನವಿ. ಈ ವಿಷಯವನ್ನು ಇಲ್ಲಿಗೆ ಮುಗಿಸುವುದು ಒಳ್ಳೆಯದು. ಮಾನ್ಯ ಸದಸ್ಯರು ರೂಲ್ ೨೨ರಲ್ಲೂ ಮತ್ತು ೩೩೪ರ ಕೆಳಗೂ ಸೂಚನೆಯನ್ನು ಕಳುಹಿಸಿದ್ದಾರೆ. ನಾನೂ ಕೂಡ ಪದೇ ಪದೇ ಹೇಳಿದ್ದೇನೆ. ೨೨ನೇ ನಿಯಮದ ಕೆಳಗೆ ಕಳುಹಿಸಿರುವುದರಿಂದ ಇದನ್ನು ಬ್ಯಾಲೆಟ್ ಮಾಡಬೇಕಾಗುತ್ತದೆ. ಇದು ಬ್ಯಾಲೆಟ್‌ನಲ್ಲಿ ಬರದಿದ್ದರೆ ಅದಕ್ಕೆ ನಾನು ಜವಾಬ್ದಾರಿಯಲ್ಲ......

ಶ್ರೀ ಬಿ. ಭೈರಪ್ಪಾಜಿ.—ಹಾಗಾದರೆ ನಾನು ನಿಯಮ ೩೩೪ರ ಪ್ರಕಾರ ಎತ್ತುತ್ತೇನೆ.

ಅಧ್ಯಕ್ಷರು.—ನಿಯಮ ೩೩೪ರ ಪ್ರಕಾರ ಅರ್ಜೆನ್ಸಿ ಇಲ್ಲವೆಂದು ತಿಳಿದು ತಾವು ನಿಯಮ ೨೨ರ ಕೆಳಗೆ ನೋಟೀಸ್ ಕೊಟ್ಟಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ನಾನು ಬಹಳ ದುಃಖದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಈ ಸದನದಲ್ಲಿ ಅನೇಕ ವಿಚಾರಗಳು ಪ್ರಸ್ತಾಪವಾಗುತ್ತವೆ. ಕೆಲವು ಸಂದರ್ಭಗಳಲ್ಲಿ ಸರ್ಕಾರದ ಮೇಲೆ ಆರೋಪ ಅಥವಾ ಆಪಾದನೆಗಳು ಬರುತ್ತವೆ. ಮತ್ತು ಅದಕ್ಕೆ ಸಂಪೂರ್ಣವಾದಂಥ ಸ್ವಾತಂತ್ರ್ಯ ಮಾನ್ಯ ಸದಸ್ಯರಿಗೆ ಇದೆ. ಆದರೆ ಯಾವುದೇ ಮಂತ್ರಿಯ ಮೇಲೆ, ಅಥವಾ ಯಾವುದೇ ಸದಸ್ಯರ ಮೇಲೆ ಒಂದು ಆರೋಪಣೆ ಮಾಡುವಾಗ ಜವಾಬ್ದಾರಿತನದ ದೃಷ್ಟಿಯಿಂದ ಮಾಡತಕ್ಕಂಥದ್ದು ಅಗತ್ಯ. ಒಂದು ಸಲ ಆರೋಪ ಮಾಡಿ ಪತ್ರಿಕೆಗಳಲ್ಲಿ ಬಂದು, ಆ ಆರೋಪ ನಿರಾಧಾರವಾಗಿದೆ ಎಂದು ಗೊತ್ತಾದರೂ ಸಾರ್ವಜನಿಕರ ಮೇಲೆ ಏನು ಒಂದು ಪರಿಣಾಮವಾಗುತ್ತದೆ ಎನ್ನುವುದನ್ನು ತಾವೇ ಯೋಚನೆಮಾಡಿ. ಅದನ್ನು ಸಂಪೂರ್ಣವಾಗಿ ತೆಗೆಯುವುದಕ್ಕೆ ಸಾಧ್ಯವೇ ಆಗುವುದಿಲ್ಲ. ಅದಕ್ಕೆ ಒಂದು ಉದಾಹರಣೆ, ಈಗ ಮೂರು ದಿವಸಗಳ ಹಿಂದೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇನ್ನಿತರ ಕೆಲವು ಮಾನ್ಯ ಸದಸ್ಯರು ಈ ಸದನದಲ್ಲಿ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಬಿಜಾಪುರದಲ್ಲಿ ಆದಂತಹ ಒಂದು ಘಟನೆಯ ಬಗ್ಗೆ. ಅದು ಆಗಿ ಮೂರು ದಿವಸಗಳ ಮೇಲೆ ಪತ್ರಿಕೆಗಳಲ್ಲಿ, ನಾನು ಮೊನ್ನೆ ನಿನ್ನೆ ಹೇಳಿದಹಾಗೆ ಪತ್ರಿಕೆಗಳಲ್ಲಿ ಒಂದು ಹೇಳಿಕೆ ಬಂದಿತು. ಇದು ಮುಖಪುಟದಲ್ಲಿ ಮತ್ತು ಬಾಕ್ಸ್ ಐಟಮ್‌ನಲ್ಲಿ ''ಮುಂಬೈ ವೇಶ್ಯಾವಾಟಿಕೆಯ ವ್ಯವಹಾರದಲ್ಲಿ ರಾಜ್ಯದ ಸಚಿವರ ಕೈವಾಡ'' ''ಮುಂಬೈ ನಗರದಲ್ಲಿ ವೇಶ್ಯಾವಾಟಿಕೆ ವ್ಯವಹಾರದಲ್ಲಿ ರಾಜ್ಯ ಸಚಿವರ ಕೈವಾಡವಿದೆ'' ನಾಳೆ ವಿಧಾನಸಭೆಯಲ್ಲಿ ವಿರೋಧಪಕ್ಷದ ನಾಯಕರಾದ ಎಂ. ವೀರಪ್ಪ ಮೊಯಿಲಿ ಸವಾಲು ಹಾಕಲಿದ್ದಾರೆ.'' ರಾಜ್ಯದಿಂದ ಮುಂಬೈ ನಗರಕ್ಕೆ ಹುಡುಗಿಯರನ್ನು ವೇಶ್ಯಾವಾಟಿಕೆಗೆ ಕಳುಹಿಸಕೊಡಲಾಗುತ್ತಿದೆ ಎಂದು ಆಪಾದಿಸಿ ಮೊಯಿಲಿಯವರು ಕಳುಹಿಸಿದ ಗಮನ ಸೆಳೆಯುವ ಸೂಚನೆಯ ಬಗ್ಗೆ ನಾಳೆ ಸಭೆಯಲ್ಲಿ ಬಿಸಿ ಎಬ್ಬಿಸುತ್ತದೆ'' ಎಂದು ಪ್ರಕಟವಾಗಿದೆ. ಈ ಒಂದು ಸುದ್ದಿ ಪ್ರಮುಖ ಪತ್ರಿಕೆಗಳ ಮುಖಪುಟದಲ್ಲಿ ಎದ್ದು ಕಾಣುವ ರೀತಿಯಲ್ಲಿ ಬಂದಿದೆ. ಮಾನ್ಯ ಮೊಯಿಲಿಯವರು ಅವರಿಗೆ ಬಹುಶಃ ಆಧಾರವಿಲ್ಲದೆ ಆರೋಪ ಮಾಡಿದರೆ ಮನಸ್ಸಿಗೆ ಎಷ್ಟು ನೋವಾಗುತ್ತದೆ ಎಂದು ಹೇಳತಕ್ಕಂಥದ್ದು ಸ್ವಂತ ಅನುಭವ ಇಲ್ಲದಿದ್ದರೆ ಕಲ್ಪನೆಯಾದರೂ ಮಾಡಿಕೊಳ್ಳಬೇಕು. ಈ ಒಂದು ಘಟನೆ ಆದದ್ದು ಯಾವಾಗ ೨೯–೬–೮೩ ಕ್ಷಮಿಸಬೇಕು, ಇದು ಜೂನ್ ೬ರಂದು ನಡೆದಂಥ ಘಟನೆ ಎಂದು ಹೇಳಿ ವರದಿ ಆಯಿತು. ಮೊಟ್ಟಮೊದಲು ಬಿಜಾಪುರದ ಒಂದು ಪತ್ರಿಕೆಯಲ್ಲಿ ವರದಿ ಆಯಿತು. ಆ ಪತ್ರಿಕೆಯಲ್ಲಿ ಬಿಜಾಪುರ ವರದಿ ಎಂದು ೨೨–೭–೮೩ನೇ ತಾರೀಖಿನ ಸಂಚಿಕೆಯಲ್ಲಿ ಪ್ರಕಟವಾಯಿತು. ಆ ಪತ್ರಿಕೆಯಲ್ಲಿ ಬಂದ ಸುದ್ದಿ ಸುಶಿಕ್ಷಿತ ''ಸಹಕಾರಿ ಇಲಾಖೆಯ ಅಧಿಕಾರಿ ದುಶ್ಯಾಸನ''...ಎಂದು ಬರೆದಿದ್ದಾರೆ. ಮಾನ್ಯ ವಿರೋಧಪಕ್ಷದ ನಾಯಕರ ಮಾಹಿತಿಯ ಮೂಲ ಇದೇ ಇದ್ದರೆ ಈ ದೇಶದಲ್ಲಿ ಯಾವ ಮಂತ್ರಿಗಳ ಕೈವಾಡ ಇದೆ ಎಂದು ಇದರಲ್ಲಿ ಹೇಳಲಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಆ ರೀತಿ ಹೇಳಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಸರಿ ಇದಾದ ಮೇಲೆ ಸರ್ಕಾರಕ್ಕೆ ಈ ವಿಚಾರವನ್ನು ಗಮನಕ್ಕೆ ತಂದುದು ಬಿಜಾಪುರದ ಒಬ್ಬ ಗಣ್ಯ ಮಂತ್ರಿಗಳು. ಅದು ಕೂಡ ಮಾನ್ಯ ಸಭೆಗೆ ತಿಳಿಸುವುದಾದರೆ ಅವರು ನಮ್ಮ ಪಕ್ಷದವರೇ, ಪತ್ರಿಕೆಯಲ್ಲಿ ಇಂಥ ವಿಚಾರ ಬಂದಿದೆ ಮತ್ತು ಮುಖ್ಯವಾಗಿ ಸಹಕಾರಿ ಇಲಾಖೆಯ ಅಧಿಕಾರಿಗಳ ಮೇಲೆ ಒಂದು ಮೊಕದ್ದಮೆ ಇದ್ದು ಹುಡುಗಿಯರನ್ನು ಎನ್ನುವ ವಿಚಾರವನ್ನು ಸಹಕಾರಿ ಮಂತ್ರಿಗಳಿಗೆ ಅವರು ೧೬ನೇ ಆಗಸ್ಟ್ ಬರೆದಿದ್ದಾರೆ. ಪಬ್ಲಿಷ್ ಯಾವ ದಿವಸ ಮಾಡಿದ್ದು ಎಂದರೆ ೧೮ನೇ ತಾರೀಖು. ಮಾನ್ಯ ಸಹಕಾರಿ ಸಚಿವರಿಗೆ ಮುಟ್ಟಿದ್ದು ೧೮ನೇ ತಾರೀಖು. ಅವರು ಅದನ್ನು ಜರೂರು ಎಂದು ಬರೆದು ಸಹಕಾರಿ ರಿಜಿಸ್ಟ್ರಾರ್‌ರವರಿಗೆ ತಕ್ಷಣವೇ ಅದರ ಬಗ್ಗೆ ತನಿಖೆ ಮಾಡಿ ವರದಿಯನ್ನು ಕಳುಹಿಸಿ ಕೊಡಬೇಕೆಂದು ಕಳುಹಿಸಿಕೊಟ್ಟಿದ್ದಾರೆ. ಆದಾದಮೇಲೆ

ಡೆಪ್ಯುಟಿ ರಿಜಿಸ್ಟ್ರಾರ್‌ರವರು ರಿಪೋರ್ಟ್‌ನ್ನು ೨೦-೮-೮೩ರಂದು ಎರಡು ದಿವಸ ಒಳಗಾಗಿ ಕಳುಹಿಸಿ ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು ಎಷ್ಟು ಶೀಘ್ರವಾಗಿ ಈ ವಿಚಾರದಲ್ಲಿ ಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ಈ ಬಗ್ಗೆ ಎರಡು ದಿವಸ ಒಳಗೆ ಡೆಪ್ಯುಟಿ ರಿಜಿಸ್ಟ್ರಾರ್‌ರವರು ರಿಪೋರ್ಟನ್ನು ಕೊಟ್ಟಿರತಕ್ಕಂಥದ್ದು ಬಂದಿದೆ. ಅದರಲ್ಲಿ ಆ ಪತ್ರಿಕೆಯಲ್ಲಿ ಬಂದಿರತಕ್ಕಂಥದ್ದನ್ನು ನಮೂದಿಸಿ ಆ ಬಗ್ಗೆ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಕೇಸ್ ಹಾಕಿರುವುದು ನಿಜ. ಆದರೆ ಈವತ್ತಿನವರೆಗೆ ಸಹಕಾರಿ ಅಧಿಕಾರಿಗಳ ಬಗ್ಗೆ ಯಾವುದೇ ದೂರು ನಮ್ಮ ಆಫೀಸಿಗೆ ಆಗಲೀ ಅಥವಾ ಜಾಯಿಂಟ್ ರಿಜಿಸ್ಟ್ರಾರ್ ಆಫೀಸಿಗೆ ಆಗಲಿ ಬಂದಿಲ್ಲವೆಂದು ಹೇಳತಕ್ಕಂಥ ವಿಚಾರ ವನ್ನು ಅವರು ತಿಳಿಸಿದರು.

೬-೩೦ ಪಿ.ಎಂ.

ಮಾನ್ಯ ಅಧ್ಯಕ್ಷರೆ ಈಗ ಇದರಲ್ಲಿ ಮೂರು ಮಹತ್ವದ ವಿಚಾರಗಳಿವೆ. ಮೊದಲನೆಯದು, ಇದು ಇತ್ತೀಚೆಗೆ ನಡೆದಂಥ ಘಟನೆಯಲ್ಲ. ಇದು ಇತ್ತೀಚೆಗೆ ನಡೆದಂಥ ಘಟನೆಯಾಗಿದ್ದರೆ ಮತ್ತು ಕುತೂಹಲ ಕೆರಳಿಸುವಂತಹ ಘಟನೆಯಾಗಿದ್ದರೆ ಮಾನ್ಯ ಸದಸ್ಯರು ಯಾರಾದರೂ ಇಲ್ಲಿ ಪ್ರಸ್ತಾಪ ಮಾಡುತ್ತಾರೆ. ಆದರೆ ಇದು ಎರಡೂವರೆ ತಿಂಗಳ ಹಿಂದೆ ನಡೆದಂಥ ಘಟನೆ. ಎರಡನೆಯದು, ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಇನ್ನೂ ಒಬ್ಬಿಬ್ಬರು ಸದಸ್ಯರು ಅಂದರೆ ಶ್ರೀ ಚಿಮ್ಮನ ಕಟ್ಟಿ ಅವರು ಎಂದು ಕಾಣುತ್ತದೆ, ಇವರುಗಳು ತಮ್ಮ ಭಾಷಣದಲ್ಲಿ ಅಥವಾ ತಮ್ಮ ಟೀಕೆಯಲ್ಲಿ ಯಾವ ರೀತಿ ಹೇಳಿದರೆಂದರೆ, ಈ ಮಹಿಳೆಯ ಮೇಲೆ ಬಲಾತ್ಕಾರ ಆಗಿದೆ ಎಂದು ಅರ್ಥ ಬರುವ ರೀತಿಯಲ್ಲಿ ಹೇಳಿದರು. ಅನಂತರ ಈ ಮಹಿಳೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು, ಆ ರೀತಿ ಆಯಿತು, ಈ ರೀತಿ ಆಯಿತು ಎಂದೆಲ್ಲಾ ಹೇಳಿದರು. ಆದರೆ ಈ ಮಹಿಳೆಯ ಮೇಲೆ ಯಾರೂ ಬಲಾತ್ಕಾರ ಮಾಡಲಿಲ್ಲ. ಮೂರನೆಯದು, ಈ ಮಹಿಳೆಯನ್ನು ಒಬ್ಬ ವೇಶ್ಯೆ ಅಥವಾ ದೇವದಾಸಿಯನ್ನಾಗಿ ಮಾಡಿ ಮುಂಬೈಗೆ ಸಾಗಿಸುವ ಪ್ರಯತ್ನ ನಡೆಯಿತು ಮತ್ತು ಇದರಲ್ಲಿ ಒಬ್ಬ ಮಂತ್ರಿಯ ಕೈವಾಡ ಇದೆ ಎಂಬುದಾಗಿ ಹೇಳಿರುವುದು. ಈ ಮೂರು ವಿಚಾರಗಳನ್ನೂ ಸಹ ಒಂದೊಂದಾಗಿ ನೋಡೋಣ. ಮೊದಲನೆಯದಾಗಿ ಇದು ೩ ತಿಂಗಳ ಹಿಂದೆ ನಡೆದಂಥ ಘಟನೆ, ಇದು ಒಂದು ವಾರ ಇಲ್ಲವೇ ಹತ್ತು ದಿವಸಗಳ ಹಿಂದೆ ನಡೆದಂಥ ಘಟನೆಯಲ್ಲ. ಇದು ತಾ. ೨೮-೬-೮೩ ರಂದು ನಡೆದದ್ದು. ಇದಕ್ಕೆ ಸಂಬಂಧಪಟ್ಟಂತೆ ಎರಡು ಫಿರ್ಯಾದಿಗಳು ದಾಖಲಾಗಿವೆ. ಒಂದು ಶ್ರೀ ಈರಪ್ಪ ಶಂಕರಪ್ಪ ಒತ್ತಾಸಿ ಅವರದ್ದು. ಎರಡನೆಯದು ಶ್ರೀಮತಿ ಗೀತಾವಾಗ್ಮೊರೆ ಅವರದ್ದು. ಇಲ್ಲಿ ಮೊದಲನೆಯ ವ್ಯಕ್ತಿ ಫಿರ್ಯಾದಿಯನ್ನು ಹಾಜರು ಮಾಡಿದ್ದು ತಾ. ೮-೭-೧೯೮೩ ರಂದು. ಅಂದರೆ ಈ ಘಟನೆ ನಡೆದ ೧೫ ದಿವಸಗಳ ನಂತರ ಫಿರ್ಯಾದಿಯನ್ನು ಹಾಜರು ಮಾಡುತ್ತಾರೆ. ಇಲ್ಲಿ ಗೀತಾ ಎಂಬ ಶಿಕ್ಷಕಿ ಶ್ರೀ ಈರಪ್ಪ ಶಂಕರಪ್ಪ ಒತ್ತಾಸಿ ಅವರ ಮನೆಯಲ್ಲಿ ಇದ್ದದ್ದು ಎಂಬುದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಈ ಇಬ್ಬರಲ್ಲಿ ಇದ್ದಂಥ ಸಂಬಂಧವೇನು, ಅದು ರಕ್ತ ಸಂಬಂಧವೇ ಅಥವಾ ಬೇರೆ ತರಹದ ಸಂಬಂಧವೇ ಎಂಬುದು ಬೇರೆ ವಿಚಾರ, ಆದರೆ ಈ ಮಹಿಳೆಯ ರಕ್ಷಣೆಯ ಭಾರ ಶ್ರೀ ಒತ್ತಾಸೆ ಅವರ ಮೇಲಿತ್ತು. ಆದ್ದರಿಂದ ಈ ಹುಡುಗಿಯನ್ನು ಯಾರಾದರೂ ಹೊತ್ತುಕೊಂಡು ಹೋಗಿದ್ದರೆ ಇಲ್ಲವೇ ನಾಪತ್ತೆಯಾಗಿದ್ದರೆ ಇಲ್ಲವೇ ಈಕೆಯ ಮೇಲೆ ಯಾರಾದರೂ ಅತ್ಯಾಚಾರ ಮಾಡಿದ್ದರೆ ಎಂದು ತಕ್ಷಣವೇ ಪೊಲೀಸ್ ಸ್ಟೇಷನ್‌ಗೆ ಹೋಗಿ ಫಿರ್ಯಾದಿ ಕೊಡಬೇಕಾ ಗಿತ್ತು. ಆದರೆ ಇಲ್ಲಿ ೧೫ ದಿವಸಗಳ ಕಾಲ ಕಾದುಕೊಂಡು ಕೂರಲು ಕಾರಣವೇನಿತ್ತು ? ಇವರು ಫಿರ್ಯಾದಿ ಕೊಟ್ಟ ೮ ದಿವಸಗಳ ನಂತರ ಈ ಹುಡುಗಿಯ ಹತ್ತಿರವೂ ಸಹ ಫಿರ್ಯಾದಿ ಕೊಡಿಸಿದ್ದಾರೆ. ಇಲ್ಲಿ ಶ್ರೀ ಒತ್ತಾಸಿ ಮತ್ತು ಗೀತಾ ಎಂಬುವರ ಸಂಬಂಧವಾದರೂ ಏನು ? ಶ್ರೀ ಒತ್ತಾಸೆ ಅವರು ಗೀತಾಳ ಅಕ್ಕನ ಗಂಡ. ಗೀತಾಳ ಅಕ್ಕನಿಗೆ ೬ ಜನ ಗಂಡು ಮಕ್ಕಳು ಮತ್ತು ೫-೬ ಹೆಣ್ಣು ಮಕ್ಕಳು. ಹೀಗೆ ಒಟ್ಟು ೧೦-೧೧ ಮಕ್ಕಳಿದ್ದಾರೆ. ಈ ಹುಡುಗಿ ಇವರ ಮನೆಯಲ್ಲಿ ಉಳಿಯು ವುದಕ್ಕೆ ಪ್ರಾರಂಭವಾದ ಮೇಲೆ ಇವರಿಬ್ಬರಲ್ಲಿದ್ದ ಸಂಬಂಧವನ್ನು ಈ ಹುಡುಗಿಯ ಅಕ್ಕ ನೋಡಿದ ನಂತರ ತನ್ನ ತಂದೆತಾಯಿಗಳಿಗೆ ದೂರು ಕೊಟ್ಟರು. ಇಲ್ಲಿಂದ ತನ್ನ ತಂಗಿಯನ್ನು ಕರೆದುಕೊಂಡು ಹೋಗಬೇಕು, ಇಲ್ಲದಿದ್ದರೆ ನಮ್ಮ ಸಂಸಾರ ಹಾಳಾಗುತ್ತದೆ ಎಂಬ ದೂರು ಹೋಯಿತು. ಈ ಸಹಕಾರಿ ಇಲಾಖೆಯ ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರು ಕೂಡ ಈ ಹುಡುಗಿಗೆ ದೂರದ ಸಂಬಂಧವಾಗ ಬೇಕು. ಈ ಕಾರಣದಿಂದ ಈ ಹುಡುಗಿಯನ್ನು ಹೋಗಿ ಕರೆದುಕೊಂಡು ಬರುವಂತೆ ಇವರಿಗೆ ಈ ಹುಡುಗಿಯ ತಂದೆ ತಿಳಿಸಿದರು. ಇವರ ಒಂದು ಬೇಡಿಕೆಯ ಮೇಲೆ ಈ ಅಧಿಕಾರಿ ಇನ್ನೂ ಇಬ್ಬರ ಜೊತೆಯಲ್ಲಿ ಅಲ್ಲಿಗೆ ಹೋಗಿ ಈ ಹುಡುಗಿಯನ್ನು ಕರೆದುಕೊಂಡು ಹೋಗಿದ್ದು ನಿಜ. ಈ ಹುಡುಗಿಯ ಅಣ್ಣ ಕೂಡ ಧಾರವಾಡದ ಒಂದು ಕಛೇರಿಯಲ್ಲಿ ಕೆಲಸ ಮಾಡುತ್ತಾರೆ. ಈ ಹುಡುಗಿಗೆ ತನ್ನ ಅಕ್ಕನ

ಮನೆಯನ್ನು ಬಿಟ್ಟು ಬರಲು ಇಷ್ಟವಿರಲಿಲ್ಲವೊ ಏನೋ ಆದರೂ ಕರೆದುಕೊಂಡು ಬಂದಿದ್ದರಿಂದ ಸ್ವಲ್ಪಮಟ್ಟಿಗೆ ಮತಿಭ್ರಮಣೆಯ ಲಕ್ಷಣಗಳು ಈ ಹುಡುಗಿಯಲ್ಲಿ ಕಂಡುಬಂದಿದ್ದರಿಂದ ಧಾರವಾಡದ ಮಾನಸಿಕ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕೆಂಬ ಸೂಚನೆಯೂ ಸಹ ಬಂತು. ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಈ ಹುಡುಗಿ ಏನು ಹೇಳುತ್ತಾಳೆ ಎಂಬುದನ್ನು ಕೇವಲ ಒಂದು ಪ್ಯಾರಾ ಮಾತ್ರ ಓದಿ ಹೇಳುತ್ತೇನೆ :—

“......ಫಿರ್ಯಾದಿಯು ತನ್ನ ಜವಾಬಿನಲ್ಲಿ ಆರೋಪಿತರೆಲ್ಲರೂ ತನ್ನ ರಕ್ತಸಂಬಂಧಿಗಳಿದ್ದು, ತಾನು ಉರ್ದು ಗಂಡುಮಕ್ಕಳ ಶಾಲೆಯ ಶಿಕ್ಷಕಿ ಎಂದು, ತಾನು ಸಾಕ್ಷಿದಾರರಾದ ಈರಪ್ಪ ಶಂಕರಪ್ಪ ಒತ್ತಾಸಿ ಕಡೆ ಇದ್ದಾಗ ತನ್ನ ತಾಯಿ ಮತ್ತು ಸಂಬಂಧಿಕರಾದ ಶ್ರೀ ದಾಯಣ್ಣ, ಅಸಿಸ್ಟೆಂಟ್ ರಿಜಿಸ್ಟ್ರಾರ್, ಅವರು ನಾನಿದ್ದ ಮನೆಗೆ ಬಂದು ನನಗೆ ಬುದ್ಧಿಮಾತು ಹೇಳಿ ಕರೆದುಕೊಂಡು ಹೋಗಿದ್ದೂ ಅಲ್ಲದೆ ಈ ಮೊದಲು ತನಗೆ ಶಾಲೆಯಲ್ಲಿ ಕಲಿಸಿ ದೊಡ್ಡವಳನ್ನಾಗಿ ಮಾಡಿದ್ದೂ ಕೂಡ ಇದೆ. ಅಲ್ಲದೆ ತಾನು ಈಗ ಶ್ರೀ ಒತ್ತಾಸಿ ಅವರ ಕಡೆ ಇದ್ದರೆ ತನ್ನ ಅಕ್ಕ ಮಲ್ಲವ್ವನ ಬಾಳ್ವೆ ಸಹ ಹಾಳಾಗುತ್ತದೆ ಅಂತ ಹೇಳಿದ್ದೂ ಇದೆ. ಅದೇ ಫಿರ್ಯಾದಿಯಲ್ಲಿ ನಮೂದಿಸಿದ ಆರೋಪಿತರು ತನಗೇನೂ ಧರ್ಮದ ಪ್ರಕಾರ ದೇವದಾಸಿಯಾಗಬೇಕೆಂದು ಒತ್ತಾಯ ಮಾಡಿರಲಿಲ್ಲ. ಫಿರ್ಯಾದಿಯಲ್ಲಿನ ಮಜುಪೂರರನ್ನು ಆರೋಪಿತರಿಗೆ ಕಾಡಬೇಕೆಂಬ ಉದ್ದೇಶದಿಂದ ಹೆಚ್ಚಿನ ಸಂಗತಿಗಳನ್ನು ಹುಟ್ಟಿಸಿ ತನ್ನ ಮಾವ ಎಂದರೆ ಅಕ್ಕನ ಗಂಡ ಈರಪ್ಪ ಒತ್ತಾಸಿ ಈತ ಫಿರ್ಯಾದಿ ಬರೆಸಿದ್ದು ತಾನ ಫಿರ್ಯಾದಿ ಮೇಲೆ ಸಹಿ ಮಾಡಿದ್ದು ಇದೆ. ಮತ್ತು ತಾನು ವಯಸ್ಸಿನವಳಿದ್ದು ತನ್ನ ಇಚ್ಛೆಮೇಲೆ ಈರಪ್ಪ ಒತ್ತಾಸಿ ಅವರ ಹತ್ತಿರ ಇರುವ ಬಗ್ಗೆ ಹೇಳಿಕೆ ಕೊಟ್ಟಿದ್ದು ಇದೆ.”

ಈಗ ನಾನು ಮಾನ್ಯ ವಿರೋಧಪಕ್ಷದ ನಾಯಕರನ್ನು ಕೇಳುತ್ತೇನೆ. ಇಲ್ಲಿ ದೇವದಾಸಿಯ ಬಗ್ಗೆ ಕಲ್ಪನೆ ಮಾಡಿಕೊಂಡು ಇದನ್ನು ಜಿಗ್ಗಿ ಜಿಗ್ಗಿ ಎಲ್ಲಿಯವರೆಗೆ ಹೋದರು ಎಂದರೆ...

ಶ್ರೀ ಎಂ. ವೀರಪ್ಪಮೊಯ್ಲಿ.—ನಾನು ಹೇಳದೇ ಇರುವುದನ್ನೆಲ್ಲಾ ನನ್ನ ಬಾಯಲ್ಲಿ ಏತಕ್ಕೆ ತುರುಕುತ್ತಿದ್ದೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಹಾಗಿದ್ದರೆ ಇದು ಯಾರ ಹೇಳಿಕೆ ? ಪೇಪರ್‌ನಲ್ಲಿ ಕಣ್ಣಿಗೆ ಕುಕ್ಕುವ ಹಾಗೆ ಬಂದಿರುವುದು ಯಾರ ಹೇಳಿಕೆ ? ಇದನ್ನು ತಾವು ಹೇಳದಿದ್ದರೆ ಇದನ್ನು ತಾವು ಏತಕ್ಕೆ ಕಾಂಟ್ರಡಿಕ್ಟ್ ಮಾಡಲಿಲ್ಲ ?

ಶ್ರೀ ಎಂ. ವೀರಪ್ಪಮೊಯ್ಲಿ.—ಇದನ್ನು ತಾವೇ ಕೊಡಿಸಿರಬೇಕು ?

ಶ್ರೀ ರಾಮಕೃಷ್ಣ ಹೆಗಡೆ.—ನಾವು ಕೊಡಿಸಿರುವುದೇ ? ನಾವು ನಮ್ಮ ಕೈಯಿಂದ ನಾವೇ ಮಸಿ ಬಳಿದುಕೊಳ್ಳುವವರಲ್ಲ. ಇಲ್ಲಿ ನಿಮ್ಮ ಕಣ್ಣಿಗೆ ಕುಕ್ಕುವ ಹಾಗೆ ವರದಿ ಬಂದಿದೆ. ಈ ಪ್ರಕರಣದ ಮೂಲಕ ಒಬ್ಬ ಯುವಕ ಮಂತ್ರಿಯ ಹೆಸರನ್ನು ಹಾಳುಮಾಡುತ್ತಿದ್ದೀರಿ.

ಶ್ರೀ ಎಂ. ವೀರಪ್ಪಮೊಯ್ಲಿ.—ನಾನು ಹೇಳಿರುವುದನ್ನೆಲ್ಲಾ ನನ್ನ ಬಾಯಲ್ಲಿ ಹೇಳಸುವಂತಹ ಪ್ರಯತ್ನವನ್ನು ದಯಮಾಡಿ ಮಾಡಬೇಡಿ.

(ಗೊಂದಲ)

SRI M. VEERAPPA MOILY.—Don't make politics.

SRI RAMAKRISHNA HEGDE.—You are making politics everytime.

SRI S. R. BOMMAI.—Why did you not contradict ?

SRI M. VEERAPPA MOILY.—I have contradicted yesterday.

(INTERRUPTIONS)

(ಗೊಂದಲ)

this is not the way ಈ ರೀತಿ ಮಾಡಿದರೆ ಇನ್ನು ಮುಂದೆ ನಾವು ಏನು ಮಾಡಬೇಕೆಂಬುದನ್ನು ಯೋಚನೆ ಮಾಡಬೇಕಾದ ಪ್ರಸಂಗ ಬರುತ್ತದೆ,

(ಗೊಂದಲ)

SRI MANIKRAO PATIL.—He has denied where is the issue? that is not before the house.

ಶ್ರೀ ರಾಮಕೃಷ್ಣ ಹೆಗಡೆ.—ನೀವು ಗಂಟೆಗಟ್ಟಲೆ ಹೇಳಿಲ್ಲವೆ, ನೀವು ಹೇಳಿದ್ದನ್ನು ನಾವು ಕೇಳುತ್ತಿದ್ದೇವೆ. ಈ ತರಹ ಮಾಡಿದರೆ ಇದು ಸಂಸದೀಯ ವ್ಯವಹಾರ ಅಲ್ಲ. ಮಂತ್ರಿಗಳ ಜಾಲವೆಂದು ಹೇಳಿದರೆ, ಯಾವ ಜಾಲ ? ಸಾವಿರಾರು ಸಲ ಜಾಲವೆಂದು ಹೇಳಿದರೆ, ಯಾವ ಜಾಲವೆಂದು ಕೇಳುತ್ತೇನೆ ? ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ವಿಚಾರದಲ್ಲಿ ಅವರು ಹೇಳಿದರು. ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರನ್ನು ಟ್ರಾನ್ಸ್‌ಫರ್ ಮಾಡಿದರು.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ತಮಗೆ ಕೊಟ್ಟಿರತಕ್ಕ ನೋಟೀಸ್‌ನಲ್ಲಿ ಆ ತರಹ ಬರೆದು ಕೊಟ್ಟಿದ್ದಾರೆಯೆ ಅವರು ?

ಶ್ರೀ ರಾಮಕೃಷ್ಣ ಹೆಗಡೆ.—ಅವರು ಕೊಟ್ಟಿರತಕ್ಕ ನೋಟೀಸ್‌ನಲ್ಲಿ ಇದು ಇರಲಿಕ್ಕೆ ಇಲ್ಲ. ಅವರ ಹೇಳಿಕೆಯಲ್ಲಿ ಮಂತ್ರಿಗಳ ಬಗ್ಗೆ...

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯಮಂತ್ರಿಗಳಾದ ಹೆಗಡೆಯವರೆ, ವಿರೋಧ ಪಕ್ಷದ ನಾಯಕರು ಪತ್ರಿಕೆಯ ಹೇಳಿಕೆಯಲ್ಲಿ ಸಂಬಂಧವಿಲ್ಲವೆಂದು ಹೇಳಿಕೆ ಕೊಟ್ಟಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನನ್ನ ಹೇಳಿಕೆಗೂ ಪತ್ರಿಕೆಯಲ್ಲಿ ಬಂದಿರತಕ್ಕ ಹೇಳಿಕೆಗೂ ಸಂಬಂಧವಿಲ್ಲ. I have contradicted it.

ಶ್ರೀ ರಾಮಕೃಷ್ಣ ಹೆಗಡೆ.—ತಾವು ಹೇಳಿದಂತಹ ವಿಚಾರಗಳು ನನ್ನ ಸ್ಮೃತಿ ಪಟಲದ ಮೇಲೆ ಸ್ಪಷ್ಟವಾಗಿವೆ, ತಾವು ಹೇಳಿದ್ದು ನಾನು ಮಂತ್ರಿಗಳ ಮೇಲೆ ದೋಷಾರೋಪಣೆಯಿಂದ ಈ ಮಾತನ್ನು ಹೇಳುತ್ತಿಲ್ಲ, ಆದರೆ ಜನ ಹೇಳುತ್ತಿದ್ದಾರೆ... ಈಗಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ವಿಚಾರದಲ್ಲಿ ನಾನು ಹೇಳುತ್ತೇನೆ. ಶ್ರೀಮಾನ್ ಜಿ. ಜಿ. ಪಾಟೀಲ್‌ರವರು ಟ್ರಾಕ್ಟರನ್ನು ಸಾಲ ತೆಗೆದುಕೊಂಡರು. ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ಕಾಯಿದೆ ಪ್ರಕಾರ ಟ್ರಾಕ್ಟರನ್ನು ಅಟಾಚ್ ಮಾಡಿದರು. ಅವರು ಮಾಡಿದ ಮೇಲೆ, ಟ್ರಾಕ್ಟರನ್ನು ಕಿತ್ತುಕೊಂಡು ಹೋದರೆಂದು ಹೇಳಿ ಜಿ. ಜಿ. ಪಾಟೀಲರು ಫಿರ್ಯಾದು ಕೊಟ್ಟರು. ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಪಾಪ ಅಂದರೆ ಅವರು ನಿಮ್ಮ ವರ್ಗದ ಜಾತಿಯಲ್ಲಿ ಹುಟ್ಟಿದ್ದು ತಪ್ಪು ಎಂದು ನಾನು ನಿಮಗೆ ಹೇಳುತ್ತೇನೆ.

SRI DHARMASINGH.—Hon. Chief Minister is making politics.

ಶ್ರೀ ರಾಮಷ್ಣ ಹೆಗಡೆ.—ನನಗೆ ಒಂದು ಪತ್ರ ಬಂದಿದೆ.

ಶ್ರೀ ಧರ್ಮಸಿಂಗ್.—ಅವರು ಹೇಳಿಲ್ಲವೆಂದು ಹೇಳುತ್ತಿದ್ದರೂ ಇದನ್ನು ತಾವು ಕೇಳುತ್ತಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನಾಲ್ಕು ಜನ ಮಾನ್ಯ ಸದಸ್ಯರುಗಳು ಇದೇ ಸಭೆಯ ಸದಸ್ಯರು ಆ ಕಡೆ ಇರತಕ್ಕ ಪಕ್ಷಕ್ಕೆ ಸೇರಿದವರು ನನಗೆ ಒಂದು ಪತ್ರ ಬರೆದಿದ್ದಾರೆ. ಆ ಪತ್ರದಲ್ಲಿ ಅವರು ಏನು ಹೇಳಿದ್ದಾರೆಂದರೆ ಇವರು ಅತ್ಯಂತ ಪ್ರಾಮಾಣಿಕ ಅಧಿಕಾರಿ ಎಂದು ಬರೆದಿದ್ದಾರೆ. ಅವರು ದಕ್ಷ ಆಡಳಿತಗಾರರು ಹಿಂದೆ ಬಿಜಾಪುರದಲ್ಲಿ ಸಹಾಯಕ ರಿಜಿಸ್ಟ್ರಾರ್ ಆಗಿ ಕೆಲಸ ಮಾಡುತ್ತಿದ್ದರು. ಪ್ರಭಾವಿತ ರಾಜಕೀಯ ವ್ಯಕ್ತಿಗಳ ದುಷ್ಟ ಶಕ್ತಿಯೊಳಗೆ ಅವರನ್ನು ಬಿಜಾಪುರದಿಂದ ವರ್ಗಾವಣೆ ಮಾಡಿಸಿದ್ದಾರೆ ಏತಕ್ಕಾಗಿ ಟ್ರಾನ್ಸ್‌ಫರ್ ಮಾಡಿಸಿದರು ಅಂದರೆ ಜಿ. ಜಿ. ಪಾಟೀಲ್ ಎನ್ನತಕ್ಕವರು ತೆಗೆದುಕೊಂಡಿದ್ದಂತಹ ಟ್ರಾಕ್ಟರನ್ನು ಮುಟ್ಟುಗೋಲು ಹಾಕಿಕೊಂಡರು. ಸೀಸ್ ಮಾಡಿದ್ದೆ ಅವರು ಮಾಡಿದ ಅಪರಾಧ, ಅದು ಆದಮೇಲೆ ಇವರನ್ನು ರಾಯಚೂರಿಗೆ ಟ್ರಾನ್ಸ್‌ಫರ್ ಮಾಡಿದ್ದಾರೆ. ನಾವು ಬಂದಮೇಲೆ ಅವರನ್ನು ಬಿಜಾಪುರಕ್ಕೆ ವರ್ಗಾವಣೆ ಮಾಡಿದ್ದು ನಿಜ. ಯಾವುದೇ ಒಬ್ಬ ಅಧಿಕಾರಿಯನ್ನು ದುರುದ್ದೇಶಪೂರ್ವಕವಾಗಿ ಅಥವಾ ರಾಜಕೀಯ ಪ್ರಭಾವಕ್ಕೆ ಒಳಗಾಗಿ ಬೇರೆ ಕಡೆ ಟ್ರಾನ್ಸ್‌ಫರ್ ಮಾಡಿದ್ದರೆ ಅಂತಹವರನ್ನು ಪುನಃ ಅದೇ ಜಾಗಕ್ಕೆ ತಂದರೆ ಅದು ಯಾವುದೇ ತರಹ ಅಪರಾಧ ಅಲ್ಲ. ಇದರಲ್ಲಿ ಅನಾವಶ್ಯಕವಾಗಿ ಒಬ್ಬ ಅಸಿಸ್ಟೆಂಟ್ ರಿಜಿಸ್ಟ್ರಾರ್ ಆತ ಪ್ರಾಮಾಣಿಕ ಅಧಿಕಾರಿ ಆಗಿದ್ದಾರೆ, ಒಬ್ಬ ಮಂತ್ರಿಗಳು ಅವರನ್ನು ಟೀಕಿಸುವುದು, ನಿಮಗೆ ಟೀಕಿಸಲಿಕ್ಕೆ ಬೇಕಾದಷ್ಟು

ಸಿಗುತ್ತದೆ. ನೀವು ಅದನ್ನು ಹುಡುಕಿಕೊಂಡು ಹೋಗಬೇಕು. ನಾವು ತಪ್ಪು ಮಾಡುವುದಿಲ್ಲ ವೆಂದು ನಿಮ್ಮ ಹಾಗೆ ಹೇಳುತ್ತಿಲ್ಲ. ಅದಕ್ಕೆ ನೀವು ಕಾಯಿರಿ, ಯಾವುದು ತಪ್ಪು ಎಂದು ನೋಡಿ ಕೊಂಡು ಹೇಳಿ. ಒಬ್ಬ ಮಂತ್ರಿಯ ಮೇಲೆ ದೂರು ಮಾಡಿ ಏನೋ ಮಾಡಲಿಕ್ಕೆ ಅಲ್ಲಿ ಕೂತಂತಹ ವಿರೋಧಪಕ್ಷದ ನಾಯಕರು ಮಾಡುತ್ತಿದ್ದಾರೆ. ಅನಾವಶ್ಯಕವಾಗಿ ಮುಂದೆ ಇದು ಆಗಕೂಡದು. ಇಂದು ಈ ವಿಚಾರದಲ್ಲಿ ತನಿಖೆ ಮಾಡಿದ್ದು ಪೋಲೀಸ್‌ನವರು (ಬಿ) ರಿಪೋರ್ಟ್ ಕೊಟ್ಟಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮುಖ್ಯಮಂತ್ರಿಗಳಿಗೆ ಗೊತ್ತಿರುವ ಹಾಗೆ ಅವರು ಹೆಸರು ಹೇಳಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಹೇಳಿದ್ದಾರೆ. ಪತ್ರಿಕೆಯಲ್ಲಿ ತಾವು ಓದಿಲ್ಲ. ಮೊಯಿಲಿಯವರು ಕಳುಹಿಸಿರತಕ್ಕ ಸುದ್ದಿ ಬಂತು. ಮಂತ್ರಿಗಳ ಕೈವಾಡ ಇದೆಯೆಂದು ಹೇಳಿ, 'ಜಾಲ' ಇದೆ ಎಂದು ಹೇಳಿದ್ದಾರೆ. ಇಲ್ಲಿ ಜಾಲ ಏನು ಬಂತು? ಇಂತಹ ಒಂದು ಕೆಲಸಕ್ಕೆ ದಯವಿಟ್ಟು ವಿರೋಧಪಕ್ಷದ ನಾಯಕರು ಮುಖ್ಯವಾಗಿ ಆ ಭಾಗದವರು ಹೋಗಕೂಡದು. ಯಾವುದೇ ಒಂದು ಸಫಲವಾದ ಕಾರ್ಯ ಇದ್ದರೆ, ಸಾಕ್ಷಿ ಪುರಾವೆಗಳು ಇದ್ದರೆ ಅದನ್ನು ಹೇಳಲಿ, ಅದನ್ನು ಹೇಳಬಾರದೆಂದು ಎಂದೂ ಹೇಳುವುದಿಲ್ಲ. ಪತ್ರಿಕೆಯಲ್ಲಿ ಸುದ್ದಿ ಬಂದು ಮಾನಹಾನಿ ಆಯಿತು, ಇದನ್ನು ತುಂಬಿಕೊಡುವವರು ಯಾರು?

ಶ್ರೀ ಎಂ. ವೀರಪ್ಪಮೊಯಿಲಿ.—ನಾವು ಏತಕ್ಕೆ ತುಂಬಿಕೊಡಬೇಕು?

ಶ್ರೀ ರಾಮಕೃಷ್ಣ ಹೆಗಡೆ.—ಮಾನಹಾನಿ ಮಾಡತಕ್ಕದ್ದೆ ನಿಮ್ಮ ಕೆಲಸ ಅಷ್ಟೆ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯಮಂತ್ರಿಗಳು ಅನ್ಯಾಯವಾಗಿ ಪೊಲಿಟಿಕಲ್ಸ್ ಮಾಡುತ್ತಿದ್ದಾರೆ. ಇದು ಸರಿಯಾದುದಲ್ಲ. ನಾನು ಮುಖ್ಯ ಮಂತ್ರಿಗಳಿಗೆ ಹೇಳುವುದೇನೆಂದರೆ ವಿರೋಧಪಕ್ಷದ ನಾಯಕರು ಹೇಳಿಕೆ ಕೊಟ್ಟಿಲ್ಲವೆಂದು ಪದೇ ಪದೇ ಹೇಳುತ್ತಿದ್ದರೂ ರಾಜಕೀಯ ಉದ್ದೇಶದಿಂದ ನೀವು ಪ್ರಸ್ತಾಪ ಮಾಡುತ್ತಿದ್ದೀರಿ, ಅನಿವಾರ್ಯವಾಗಿ ಹೇಳುತ್ತಿದ್ದೀರಿ. ಹೇಳಿಲ್ಲವೆಂದು ಹೇಳಿದರೆ ಈ ಪ್ರಶ್ನೆ ಎಲ್ಲಿ ಬರುತ್ತದೆ? ನಾನು ಹೇಳಿಲ್ಲವೆಂದು ಈ ಸದನದಲ್ಲಿ ಹೇಳಿದ್ದಾರೆ. ಅದು ರೆಕಾರ್ಡ್‌ನಲ್ಲಿದೆ, ಮಾನ್ಯ ಅಧ್ಯಕ್ಷರೆ ತಾವು ಅದನ್ನು ನೋಡಬಹುದು. ಹೇಳಿಲ್ಲದ ಮಾತನ್ನು ಹೇಳಿ ದ್ದಾರೆಂದು ಮತ್ತೊಮ್ಮೆ ಪುನಃ ಉಚ್ಚಾರ ಮಾಡುವುದರಿಂದ ನಿಮಗೆ ಬೇರೆ ಉದ್ದೇಶವಿದೆ ನಾವು ಸ್ಪಷ್ಟ ವಾದ ತೀರ್ಮಾನಕ್ಕೆ ಬರಬೇಕಾಗುತ್ತದೆ. ಮುಖ್ಯ ಮಂತ್ರಿಗಳು ಮಾಡತಕ್ಕ ಕೆಲಸ ಇದು ಅಲ್ಲ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರಾದ ಬಂಗಾರಪ್ಪನವರೇ ನಿಮ್ಮ ಠೀವಿ ಏನು? ನಮ್ರವಾಗಿ ನಡೆದುಕೊಳ್ಳಿ. ಯಾರು? ಏನು? ಈ ಠೀವಿ ಏನು? ನಮ್ರವಾಗಿ ನಡೆದುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಬೊಮ್ಮಾಯಿಯವರೆ ನೀವು ಇದನ್ನು ಬಿಟ್ಟು ಬಿಡಿ. ನಿಮ್ಮದು ಗೊತ್ತು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮ್ಮದು ಗೊತ್ತು, ನಮ್ಮದು ಗೊತ್ತು, ಸದಸ್ಯರಾಗಿ ಮಾತನಾಡುವಾಗ ನಮ್ರವಾಗಿ ನಡೆದುಕೊಳ್ಳಿ. ಯಾರು? ಏನು? ಈ ತರಹ ಮಾತನಾಡಿದರೆ ಸಭೆಗೆ ಗೌರವ ಬರುತ್ತದೆಯೆ? ಇದೇನು ದೊಡ್ಡ ಆಟಾನಾ? ಬಯಲಾಟವೇ?

ಶ್ರೀ ಎಸ್. ಬಂಗಾರಪ್ಪ.—ಇದು ನಡೆಯುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ಸಾಧ್ಯವಿಲ್ಲ ನಿಮಗೆ ಗೊತ್ತೇನು?

(ಗೊಂದಲ)

ಅಧ್ಯಕ್ಷರು.—ಈಗ ಸಭೆ ಮೇಲೆದ್ದು ಸೋಮವಾರ ೧೧ ಗಂಟೆಗೆ ಸಭೆ ಸೇರುವುದು.

(ಸಭೆಯು ಆರು ಗಂಟೆ ಐವತ್ತು ನಿಮಿಷಕ್ಕೆ ಮುಕ್ತಾಯವಾಗಿ, ಪುನಃ ೧೨ನೇ ಮಾಹೆ ೧೯೮೩ರ ಸೋಮವಾರದಂದು ಹನ್ನೊಂದು ಗಂಟೆಗೆ ಸಭೆ ಸೇರಲು ನಿಶ್ಚಯಿಸಲಾಯಿತು.)